ಖಂಡಿಕೆಗಳ ಮೇಲಿನ 12ನೇ ವಿಧಾನಸಭೆಯ 2ನೇ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

9. ವಿತ್ತೀಯ ಕಾರ್ಯಕಲಾಪ.

2005-06ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮೇಲೆ ಮುಂದುವರಿದ ಚರ್ಚೆ

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಅಧ್ಯಕ್ಷರೆ, 2005-06ನೇ ಸಾಲಿನ ಪೂರಕ ಅಂದಾಜುಗಳ ಮೊತ್ತ 657ಕೋಟಿ ರೂಪಾಯಿಗಳು ಆಗಿದೆ. ಅದರಲ್ಲಿ ಕೆಲವು ಬಾಬ್ತುಗಳಿಗೆ ಹೆಚ್ಚು ಹಣವನ್ನು ಕೊಡುವುದಕ್ಕಾಗಿ ಇವತ್ತು ಇದನ್ನು ಸದನದ ಮುಂದೆ ಮಂಡಿಸಿದ್ದಾರೆ. ಇದನ್ನು ಕುಡಿಯುವ ನೀರಿಗಾಗಿ ಕೊಟ್ಟಿದ್ದಾರೆ. ಬಿತ್ತನೆ ಬೀಜಕ್ಕೆ ರಿಯಾಯಿತಿ ದರಕ್ಕಾಗಿ ಕೊಟ್ಟಿದ್ದಾರೆ. ಮಂಡ್ಯ ಸಕ್ಕರೆ ಕಾರ್ಖಾನೆ, ವ್ಯವಸ್ಥೆಗಾಗಿ ಕೊಟ್ಟಿದ್ದಾರೆ. ಕೆ. ಸಿ. ಸಿ. ಬ್ಯಾಂಕ್‌ಗೆ ಕೊಟ್ಟಿದ್ದಾರೆ. ಎಂವೈಗೆ 30 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಇನ್ನೂ ಸ್ವಲ್ಪ ಹೆಚ್ಚಿಗೆ ಹಣವನ್ನು ಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು. ಆದರೆ ಆಶ್ಚರ್ಯಕರವಾದ ಸಂಗತಿ ಎಂದರೆ ಹಾಸನದಲ್ಲಿ ವಿಷಪೂರಿತ ಸಾರಾಯಿಯನ್ನು ಕುಡಿದು ಸತ್ತರೆಂದು, ಅವರಿಗೆ ಕಾಂಪನ್‌ಸೇಷನ್ ಕೊಡುವ ಸಲುವಾಗಿ, 36ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ವಿಷಪೂರಿತ ಸಾರಾಯಿಯನ್ನು ಕುಡಿದು ಸಾಯುವುದರಲ್ಲಿ ಹಾಸನ ಜಿಲ್ಲೆಯವರು ಮೊದಲನೆಯವರಲ್ಲ. ರಾಜ್ಯದ ಎಲ್ಲಾ ಹಳ್ಳಿಗಳಲ್ಲೂ ಸತ್ತವರು ಇದ್ದಾರೆ. ಹಿಂದೆ ಯಾವಾಗಲೂ ಈ ರೀತಿ ಕಂಟ್ರಿ ಸಾರಾಯಿಯನ್ನೂ ಕುಡಿದು, ಸತ್ತವರಿಗೆ ಪರಿಹಾರವನ್ನು ಕೊಟ್ಟಿಲ್ಲ. ಸರ್ಕಾರ ಇದೊಂದು ಹೊಸ ಅಧ್ಯಾಯವನ್ನು ಪ್ರಾರಂಭ ಮಾಡಿದೆ. ಸತ್ತವರಿಗೆ ಪರಿಹಾರವನ್ನು ಕೊಡುವ ಬಗ್ಗೆ ನಮ್ಮದು ಏನೂ ಅಭ್ಯಂತರವಿಲ್ಲ, ಅವರು ಯಾವ ಉದ್ದೇಶಕ್ಕಾಗಿ ಸತ್ತರು. ಇದನ್ನು ಯಾರಿಗೆ ಕೊಡಬೇಕು ಎಂಬುದು ಬಹಳ ಮುಖ್ಯವಾಗಿದ್ದವು. ಇವತ್ತು ಯಾರೋ ಒಬ್ಬ ಕಳ್ಳಬಟ್ಟಿ ಸಾರಾಯಿಯನ್ನು ತಯಾರು ಮಾಡಿ, ಅದನ್ನು ಕುಡಿಸಿ, ಕೊಂದದ್ದಕ್ಕೆ ಸರ್ಕಾರದ ಖಜಾನೆಯಿಂದ 36ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ನಾನು ಕೇಳುವುದೇನೆಂದರೆ ರಾಜ್ಯದಲ್ಲಿ ಎಲ್ಲಾ ಹಳ್ಳಿಗಳಲ್ಲಿ ಕುಡಿದು ಸತ್ತವರಿಗೆ ಈ ಪರಿಹಾರವನ್ನು ಕೊಡುವಂಥಾದ್ದು ಆಗಬೇಕು. ಅದು ಆದರೂ ಅದು ಪದ್ಧತಿ ಆಗಲಿ, ಒಂದೇ ಊರಿನ ಸಲುವಾಗಿ, ಒಂದೇ ಜಿಲ್ಲೆಯ ಸಲುವಾಗಿ, ಇದೊಂದು ವಿಶೇಷವಾದ ಪ್ರಕರಣವಾಗಬಾರದೆಂದು, ನಾನು ಹೇಳುತ್ತೇನೆ. ಇದರಲ್ಲಿ ಹಾಸನ ಜಿಲ್ಲೆಯದು ಒಂದೇ ಇದೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಇಲ್ಲ, ಇದರಲ್ಲಿ ಬೆಂಗಳೂರು ಮತ್ತು ಹಾಸನ ಜಿಲ್ಲೆ ಎರಡೂ ಸೇರಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಇದನ್ನು ಸರ್ಕಾರದಿಂದ ಏಕೆ ಕೊಡಬೇಕು ? ಯಾರೋ ಕಳ್ಳಬಟ್ಟಿ ತಯಾರು ಮಾಡಿ ಇವರು ಕಳ್ಳಬಟ್ಟಿಯನ್ನು ಕುಡಿದು ಸತ್ತರೆ, ಸರ್ಕಾರ ಏಕೆ ಪರಿಹಾರವನ್ನು ಕೊಡಬೇಕೆಂದು, ಮೊನ್ನೆ ದಿವಸ ಇಲ್ಲಿ ಮಾತನಾಡಿದ್ದೇವೆ.

ಶ್ರೀ ಸಿದ್ಧರಾಮಯ್ಯ : ನಾನು ಹೇಳುವುದನ್ನು ಒಂದು ನಿಮಿಷ ಕೇಳಿ. ಎರಡು ದೊಡ್ಡ ಪ್ರಮಾಣದಲ್ಲಿ ದುರಂತವಾಯಿತು. ಅದು ನಿಮಗೆ ಪೂರಕವಾಗಿ ಇರಲಿ ಎಂದು ಹೇಳುತ್ತೇನೆ. ನೆಲಮಂಗಲ, ಹಾಸನ, ಒಂದು ಚನ್ನರಾಯಪಟ್ಟಣ, ಸಕಲೇಶಪುರದಲ್ಲಿ ಆಗಿತ್ತು, ಹಾಸನದಲ್ಲಿ ಆಗಿತ್ತು. 21 ಜನರು ನೆಲಮಂಗಲದಲ್ಲಿ ಸತ್ತಿದ್ದರು. ಅವತ್ತು ನಾನು ಮತ್ತು ಮಾನ್ಯ ಮುಖ್ಯಮಂತ್ರಿಯವರು ಭೇಟಿ ಮಾಡಿದಾಗ, ಆ ಸತ್ತವರ ಕುಟುಂಬದ ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಪರಿಸ್ಥಿತಿಯನ್ನು ನೋಡಿ ಕೊಡಲಾಗಿದೆ. ಮಾನ್ಯ ಅಧ್ಯಕ್ಷರೆ, ಒಂದು ಕುಟುಂಬದವರು ಇವರು ಹಾವೇರಿ ಜಿಲ್ಲೆಯವರು; ಅವರು ಕೂಲಿ ಮಾಡಲು ರಾಣಿಬೆನ್ನೂರಿನಿಂದ ಬಂದಿದ್ದರು. ಇವರಿಗೆ 10ಮಕ್ಕಳು, ಗಂಡ, ಹೆಂಡತಿ ಇಬ್ಬರೂ ಕೂಲಿ ಮಾಡುವವರು, ಮತ್ತೆ ಇಬ್ಬರೂ ಕುಡಿಯುತ್ತಾರೆ. ಅವರು ಅಷ್ಟು ಮಕ್ಕಳನ್ನು ಬಿಟ್ಟು ಸತ್ತು ಹೋದರು. ಇದನ್ನು ಮಾನ್ಯ ಮುಖ್ಯಮಂತ್ರಿಯವರು, ನಾವು ನೋಡಿ, ಈ ರೀತಿ ಸತ್ತಿರುವವರು ಬಹಳ ಜನರು ಬಡವರು ಎಂದು ಕೊಟ್ಟೆವು. ಈ ಎರಡು ಪ್ರಕರಣಗಳು ಆದಮೇಲೆ ಮತ್ತೆ ನಾವು ಇದನ್ನು ಕೊಡಬಾರದೆಂದು ತೀರ್ಮಾನವನ್ನು ಮಾಡಿದೆವು, ಏಕೆಂದರೆ ಲಿವರ್ ಡ್ಯಾಮೇಜ್ ಆಗಿದ್ದವರೂ ಕೂಡ ಕುಡಿದು ನಾನು ಒಂದು ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತೇನೆಂದು ಬರಲು ಪ್ರಾರಂಭಿಸಿದರು. ಲಿವರ್ ಸೆರೋಸಿಸ್ ಆಗಿ ಎಲ್ಲಾ ಕುಡಿದು ಸತ್ತು, ನಮಗೂ ಒಂದು ಲಕ್ಷ ರೂಪಾಯಿಗಳನ್ನು ಕೊಡಿ, ಎಂದು ಕೇಳಲು ಪ್ರಾರಂಭ ಮಾಡಿದರು. ಇಲ್ಲಿ ಒಂದು ಲಕ್ಷ ರೂಪಾಯಿಗಳು ಸಿಗುತ್ತದೆಂದು ಕಳ್ಳಭಟ್ಟಿ ಸಾರಾಯಿಗೆ ಪ್ರೋತ್ಸಾಹ ಕೊಟ್ಟ ಹಾಗೆ ಆಗುತ್ತದೆಯೋ ಏನೋ ಎಂದು ಈ ಎರಡು ಪ್ರಕರಣಗಳು ಆದಮೇಲೆ, ಈಗ ತಾವು 36ಲಕ್ಷ ರೂಪಾಯಿಗಳ ಬಗ್ಗೆ ಏನು ಹೇಳಿದ್ದೀರಿ. ಅದು ಆದಮೇಲೆ ಮತ್ತೆ ಯಾರಿಗೂ ಅದನ್ನು ಕೊಡುವುದು ನಿಲ್ಲಿಸಿದ್ದೇವೆ. ಇಲ್ಲಿ ಆ 36ಜನರು ಏನು ಇದ್ದಾರೆ, ಅವರನ್ನು ಬಿಟ್ಟು ಮತ್ತೆ ಯಾರಿಗೂ ಕೊಡುವಂಥಾದ್ದು ಮಾಡುತ್ತಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಯವರು.

ಶ್ರೀ ಸಿದ್ಧರಾಮಯ್ಯ : ಈಗ ಮಾನ್ಯ ಗೋವಿಂದ ಎಂ. ಕಾರಜೋಳರವರು ಮಾತನಾಡಲಿ, ಅವರು ಮಾತನಾಡಿದ ಮೇಲೆ ತಾವು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಈಗ 36ಲಕ್ಷ ರೂಪಾಯಿಗಳನ್ನು ಕೊಟ್ಟು, ನಿಲ್ಲಿಸಿದ್ದೇವೆ. ಇದನ್ನು ಮುಂದೆ ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಇದು ಏನಾಗುತ್ತದೆಂದರೆ ಬಹಳ ಪ್ರಭಾವಿ ವ್ಯಕ್ತಿಗಳು ಇರುವಂತಹ ಜಿಲ್ಲೆಗಳಲ್ಲಿ, ಮತಕ್ಷೇತ್ರಗಳಲ್ಲಿ ಇದನ್ನು ಕೊಡುವಂತಹ ಸನ್ನಿವೇಶವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈಗ 36 ಲಕ್ಷ ರೂಪಾಯಿಗಳನ್ನು ಸರ್ಕಾರದ ಖಜಾನೆಯಿಂದ ಪೇಮೆಂಟ್ ಮಾಡಿದ್ದೀರಿ. ಇದನ್ನು ಯಾರು ಕಳ್ಳಭಟ್ಟಿ ಸಾರಾಯಿಯನ್ನು ತಯಾರುಮಾಡಿದ್ದಾರೆ, ಅವರಿಂದ ಇದನ್ನು ವಸೂಲು ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು; ಇಲ್ಲವೆಂದರೆ ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಅವರ ಮೇಲೆ ಯಾವುದಾದರೂ ಕಾನೂನು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನೊಂದು ವಿಷಯವೇನೆಂದರೆ ಇವತ್ತು ದುರ್ಬಲ ವರ್ಗದವರ ಮಕ್ಕಳು . . . .

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಕಾರಜೋಳರವರೆ, ಒಂದು ನಿಮಿಷ ಸನ್ಮಾನ್ಯ ಉಪ ಮುಖ್ಯಮಂತ್ರಿಯವರೆ, ಇದನ್ನು ಕೊಡುವುದನ್ನು ನಿಲ್ಲಿಸಿ ನಾವು ಇದನ್ನು ಕೊಡಬೇಕೆಂದು ಹೇಳುವುದಿಲ್ಲ. ಆದರೆ ಯಾರಾದರೂ ಮಕ್ಕಳು ಅನಾಥರಾದರೆ, ದಯವಿಟ್ಟು ಅವರ ಎಜುಕೇಷನಲ್ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುವ ಹಾಗೆ ಏನಾದರೂ ಅನುಕೂಲವನ್ನು ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ವೃತ್ತಿಪರ ಶಿಕ್ಷಣಕ್ಕೆ ಹೋಗುವಂತಹ ದುರ್ಬಲದವರ ಮಕ್ಕಳಿಗೆ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುವುದಕ್ಕೆ 28 ಲಕ್ಷ ರೂಪಾಯಿಗಳನ್ನು ಪ್ರಾವಿಜನ್ ಮಾಡಿಕೊಂಡಿದ್ದಾರೆ. ಈ ಹಾಸ್ಟೆಲ್‌ಗಳಿಗೆ ಎಲ್ಲಿ ಪ್ರಾವಿಷನ್ ಮಾಡಿಕೊಂಡಿದ್ದಾರೆ? ಇದು ಬೆಂಗಳೂರು, ಮೈಸೂರು, ಮತ್ತು ಬಳ್ಳಾರಿ ಹುಬ್ಬಳಿಯಲ್ಲಿ ಮಾಡಿಕೊಂಡಿದ್ದಾರೆ. ನಾನು ಕೇಳುವಂಥಾದ್ದು ಹಿಂದುಳಿದ ಜಿಲ್ಲೆಗಳಲ್ಲಿ ಅದು ಬಿಜಾಪುರವಾಗಿರಬಹುದು, ರಾಯಚೂರು ಆಗಿರಬಹುದು, ಬಾಗಲಕೋಟೆ ಆಗಿರಬಹುದು. ಇಂತಹ ಕಡೆಗಳಲ್ಲಿ ತಾವು ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿದರೆ, ಹಿಂದುಳಿದ ಪ್ರದೇಶಗಳಲ್ಲಿ ಓದದೇ ಇರುವಂತಹ ಮಕ್ಕಳಿಗೆ ಪ್ರೋತ್ಸಾಹ ಸಿಕ್ಕಹಾಗೆ ಆಗುತ್ತದೆ ಅನುಕೂಲವಾಗುತ್ತದೆ. ಅದಕ್ಕಾಗಿ ಸರ್ಕಾರಕ್ಕೆ ನಾನು ಒತ್ತಾಯ ಮಾಡುವುದೆನೆಂದರೆ, ಈಗ ಈ ನಾಲ್ಕು ಜಿಲ್ಲೆಗಳಲ್ಲಿ ಕೊಟ್ಟಿರುವುದರ ಜೊತೆಯಲ್ಲಿ ಇನ್ನೂ ನಾಲ್ಕು ಜಿಲ್ಲೆಗಳಿಗೆ ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಕೇಳುತ್ತೇನೆ, ಇನ್ನು ಮುರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ, ಸುಮಾರು 263 ಲಕ್ಷ ಪ್ಲಸ್ 86 ಲಕ್ಷ ರೂಪಾಯಿಗಳು, ಅಂದರೆ 349.39 ಲಕ್ಷ ರೂಪಾಯಿಗಳನ್ನು ಮಾಡಿದ್ದೀರಿ. ಇದನ್ನು ಯಾವ ಜಿಲ್ಲೆಗಳಲ್ಲಿ ಪ್ರಾರಂಭ ಮಾಡುತ್ತಿರೆಂಬುದು ಬಹಳ ಮುಖ್ಯವಾಗಿದೆ. ಇವತ್ತು ಹಿಂದೂಳಿದ ಜಿಲ್ಲೆಯಾಗಿರಬಹುದು, ಪರಿಶಿಷ್ಟ ಜಾತಿಯ ಮಕ್ಕಳು ಇರುವಂಥಾದ್ದು ಯಾವ್ಯಾವ ತಾಲ್ಲೂಕುಗಳಲ್ಲಿ ಹೆಚ್ಚು ಇದ್ದಾರೋ, ಅಂತಹ ಕಡೆಗಳಲ್ಲಿ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ. ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಈ ಮುರಾರ್ಜಿದೇಸಾಯಿ ವಸತಿ ಶಾಲೆಗಳನ್ನು ಹಿಂದುಳಿದಂತಹ ಪ್ರದೇಶಗಳಲ್ಲಿ ಮತ್ತು ಪರಿಶಿಷ್ಟ ಜಾತಿಯ ಮಕ್ಕಳು ಇರುವಂತಹ ಜಾಗದಲ್ಲಿ ಹೆಚ್ಚು ಈ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ಮಹಿಳೆಯರಿಗೆ ಹತ್ತು ಮೆಟ್ರಿಕ್ ನಂತರದ ಹಾಸ್ಟೆಲ್‌ಗಳನ್ನು ತೆಗೆಯುವುದಕ್ಕೆ 50 ಲಕ್ಷರೂಪಾಯಿಗಳನ್ನು ಪ್ರಾವಿಜನ್ ಮಾಡಿಕೊಂಡಿದ್ದೀರಿ. ಈ ಮಹಿಳೆಯರಿಗಾಗಿ ಎನು ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುತ್ತೀರಿ. ಇದಕ್ಕೆ ತಮ್ಮಲ್ಲಿ ಪ್ರತಿಯೊಂದು ಜಿಲ್ಲೆಯ ಮಹಿಳಾ ಲಿಟ್ರೆಸಿ ಪರ್ಸಂಟೇಜ್ ಇದೆ. ಯಾವ್ಯಾವ ಜಿಲ್ಲೆಗಳಲ್ಲಿ ಮಹಿಳೆಯರ ಲಿಟ್ರೆಸಿ ಪರ್ಸಂಟೇಜ್ ಕಡಿಮೆ ಇದೆ, ಅಂತಹ ಕಡೆಗಳಲ್ಲಿ ತಾವು ಈ ಹಾಸ್ಟೆಲ್‌ಗಳನ್ನು ಪ್ರಾರಂಭಮಾಡಿದರೆ ಸೂಕ್ತವಾಗುತ್ತದೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನೊಂದು ವಿಚಾರವೇನೆಂದರೆ, ಹರದನಹಳ್ಳಿಯ ಗ್ರಾಮದಲ್ಲಿ 28 ಲಕ್ಷ ರೂಪಾಯಿಗಳನ್ನು ವಸತಿ ಬಡಾವಣೆಯ ನಿರ್ಮಾಣಕ್ಕಾಗಿ ತಾವು ಕೊಟ್ಟಿದ್ದೀರಿ. ಅಥವಾ ಹರದನಹಳ್ಳಿಯಲ್ಲೇನಾದರೂ ವಿಶೇಷವಾಗಿ ಬಡವರ ಸಂಖ್ಯೆ ಅಥವಾ ಪರಿಶಿಷ್ಟರ ಸಂಖ್ಯೆ ಹೆಚ್ಚಾಗಿದೆ ಎನ್ನುವ ಕಾರಣವೇನಾದರೂ ಇದೆಯೇ ? ಏಕೆ ಇದೊಂದು ಜಿಲ್ಲೆಯನ್ನು ಮಾತ್ರ ತೆಗೆದುಕೊಂಡಿರಿ? ಹಾಗಾಗಿ, ಉಳಿದ ಜಿಲ್ಲೆಗಳಲ್ಲೂ ಇದನ್ನು ತೆಗೆದುಕೊಳ್ಳಲು

ಸರ್ಕಾರ ಕ್ರಮ ತೆಗೆದು ಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು, ಆಳಂದ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಲಿಕ್ಕೆ 92.27 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇವತ್ತು ಆಳಂದ ಸಕ್ಕರೆ ಕಾರ್ಖಾನೆಯೊಂದೇ ಸಂಕಷ್ಟದಲ್ಲಿಲ್ಲ ಕೋಆಪರೇಟಿವ್ ಸೆಕ್ಟಾರ್‌ನಲ್ಲಿ ಮತ್ತು ಪಬ್ಲಿಕ್ ಸೆಕ್ಟಾರ್‌ನಲ್ಲಿರುವ ಬಹಳಷ್ಟು ಸಕ್ಕರೆ ಕಾರ್ಖಾನೆಗಳು ತೊಂದರೆಯಲ್ಲಿವೆ. ಈ ಎಲ್ಲಾ ಕಾರ್ಖಾನೆಗಳಿಗೂ ಪ್ರಾರಂಭ ವೆಚ್ಚಕ್ಕಾಗಿ ಒಂದೊಂದು ಕೋಟಿ ರೂಪಾಯಿಗಳನ್ನು ಕೊಡುವಂಥ ವ್ಯವಸ್ಥೆ ಆಗಬೇಕು. ಅದನ್ನೂ ಕೂಡ ಪೂರಕ ಅಂದಾಜಿನಲ್ಲಿ ಸೇರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು, 1500 ಲಕ್ಷ ರೂಪಾಯಿಗಳನ್ನು ಪಿ. ಡಬ್ಲ್ಯೂ. ಡಿ. ರೋಡ್ ಡೆವಲಪ್‌ಮೆಂಟ್ ಲ್ಯಾಂಡ್ ಆಕ್ವಿಜಿಷನ್‌ಗಾಗಿ ಭೂ ಪರಿಹಾರಕ್ಕಗಿ ಪ್ರಾವಿಷನ್ ಮಾಡಿಕೊಂಡಿದ್ದೀರಿ. ಇದು ಯಾವ ರಸ್ತೆಗಳು? ಇಡೀ ರಾಜ್ಯದಲ್ಲಿರುವಂಥ ರಸ್ತೆಗಳಿಗೇ ಅಥವಾ ಪರ್ಟಿಕ್ಯುಲರಾಗಿ ಯಾವುದಾದರೂ ಹೊಸ ರಸ್ತೆ ಮಾಡುತ್ತಿರುವಿರಾ?

ಶ್ರೀ ಸಿದ್ಧರಾಮಯ್ಯ : ನಬಾರ್ಡ್ ಬರತಕ್ಕಂಥ ರಸ್ತೆಗಳಿಗೆಂದು ಇಟ್ಟಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ನಬಾರ್ಡ್ ರಸ್ತೆಗಳಿಗಾಗಿಯೇ, ಆಗಬಹುದು. ಇನ್ನು, ರಾಜ್ಯದಲ್ಲಿ ಹೊಸ ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಲು 3000 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಸರ್ಕಾರೀ ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಎಂ. ಸಿ. ಐ. ನವರು ಒಪ್ಪಿಗೆ ಕೊಡದೇ ತಿರಸ್ಕಾರ ಮಾಡಿದ್ದಾರೆ. ಹೀಗಿರುವಾಗ ಈ 3000 ಲಕ್ಷ ರೂಪಾಯಿಗಳಿಗೆ ಈ ಸದನ ಏಕೆ ಒಪ್ಪಿಗೆ ಕೊಡಬೇಕು ಎನ್ನುವುದನ್ನು ಸರ್ಕಾರ ಸ್ಪಷ್ಟಪಡಿಸಬೇಕಾಗುತ್ತದೆ. ತಮ್ಮ ಕಚ್ಛಾಟದಲ್ಲಿ ತಾವು ಸರ್ಕಾರಿ ಮೆಡಿಕಲ್ ಕಾಲೇಜುಗಳಿಗೆ ಮಂಜೂರಾತಿ ತೆಗೆದುಕೊಳ್ಳಲು ವಿಫಲರಾಗಿದ್ದೀರಿ. ಎಂ. ಸಿ. ಐ. ನವರು ಕರ್ನಾಟಕಕ್ಕೆ ಇನ್ಸ್‌ಪೆಕ್ಷನ್‌ಗೆ ಬಂದಿದ್ದಂಥ ಸಂದರ್ಭದಲ್ಲಿ ತಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಅವರನ್ನು ಕನ್ವಿನ್ಸ್ ಮಾಡಲಿಲ್ಲ. ನಾವು ರಾಜ್ಯದಲ್ಲಿ ಹೊಸ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಲಿಕ್ಕೆ ಎಲ್ಲವನ್ನೂ ವ್ಯವಸ್ಥೆ ಮಾಡಿಕೊಂಡಿದ್ದೇವೆ ಎಂದು ಹೇಳಲಿಲ್ಲ ಅವರ ಮನಸ್ಸನ್ನೊಲಿಸಿ ಮಂಜೂರಾತಿ ತೆಗೆದುಕೊಳ್ಳಲು ಆಗಲಿಲ್ಲ. ಮುಖ್ಯಮಂತ್ರಿಗಳು ರಾಜಕೀಯ ದೊಂಬರಾಟದಲ್ಲಿ ದೆಹಲಿಗೆ ಹೋಗಿ ಕುಳಿತರು. ಇಂಥ ಒಂದು ಸಂದರ್ಭದಲ್ಲಿ ನಾವು ಏಕೆ ಈ 3000 ಲಕ್ಷ ರೂಪಾಯಿಗಳಿಗೆ ಅನುಮತಿಯನ್ನು ಕೊಡಬೇಕೆಂದು ಸರ್ಕಾರ ಸ್ಪಷ್ಟಪಡಿಸಬೇಕಾಗುತ್ತದೆ. ಕೊನೆಯದಾಗಿ, ಅನುದಾನಿತ ಐ. ಟಿ. ಐ. ಗಳಿಗೆ ಮತ್ತು ಸರ್ಕಾರಿ ಐ. ಟಿ. ಐ. ಗಳಿಗೆ 638 ಲಕ್ಷ ರೂಪಾಯಿಗಳನ್ನು ಸಂಬಳ ಸಾರಿಗೆಗಳಿಗಾಗಿ ಪ್ರಾವಿಷನ್ ಮಾಡಿಕೊಂಡಿದ್ದೇವೆ ಎಂದು ಹೇಳಿದ್ದೀರಿ. ಐ. ಟಿ. ಐ. ಗಳನ್ನು ನಡೆಸತಕ್ಕಂಥ ಕೆಲವು ಖಾಸಗಿ ಸಂಸ್ಥೆಯವರು ಮತ್ತು ಅನುದಾನಿತ ಸಂಸ್ಥೆಯವರೂ ಸಹ ಐ. ಟಿ. ಐ. ಗೆ ಸೀಟ್ ಕೊಡಬೇಕಾದರೆ ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಡೊನೇಷನ್ ತೆಗೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಸೀಟ್ ಕೊಡುವುದಿಲ್ಲ ಅಂಥ ಸಂಸ್ಥೆಗಳಿಗೆ ನೀವು ಏಕೆ ಹಣಕೊಡುತ್ತೀರಿ? ಯಾವ ಕಾರಣಕ್ಕಾಗಿ ಕೊಡುತ್ತೀರಿ? ಅವರೇನು ಸೀಟುಗಳನ್ನು ಪುಕ್ಕಟೆಯಾಗಿ ಕೊಡುತ್ತಾರೆಯೇ? ಅವರಿಗೆ ನೀವು 100 ಪರ್ಸೆಂಟ್ ಸಂಬಳವನ್ನು ಕೊಡಿ. ಅವರು ಬಡವರ ಮಕ್ಕಳಿಗೆ ಸೀಟನ್ನು ಪುಕ್ಕಟೆಯಾಗಿ ಮೆರಿಟ್ ಮೇಲೆ ಕೊಡಲಿ, ಜಾತಿ ಆಧಾರದ ಮೇಲೆ ಕೊಡಲಿ, ರೋಸ್ಟರ್ ಸಿಸ್ಟಂ ಪ್ರಕಾರ

ಕೊಡಲಿ. ಅದನ್ನು ಬಿಟ್ಟು ಶಿಕ್ಷಣವನ್ನು ವ್ಯಾಪಾರ ಮಾಡತಕ್ಕಂಥವರಿಗೂ ಕೂಡ 638 ಲಕ್ಷ ರೂಪಾಯಿಗಳನ್ನು ಕೊಡುವುದನ್ನು ನಾನು ವಿರೋಧ ಮಾಡಬೇಕಾಗುತ್ತದೆ.

ಇನ್ನುಳಿದಂಥ ಉತ್ತಮ ಕೆಲಸಗಳಿಗೆ, ಅದು ರೈತರ ಬೀಜಕ್ಕೆ ಆಗಿರಬಹುದು, ಕುಡಿಯುವ ನೀರಿಗಾಗಿ ಇರಬಹುದು, ಆರೋಗ್ಯಕ್ಕಾಗಿ ಇರಬಹುದು, ಸಣ್ಣ ನೀರಾವರಿಗಾಗಿ ಇರಬಹುದು, ಇವೆಲ್ಲದಕ್ಕೂ ಇಟ್ಟಿರುವುದನ್ನು ನಾವು ಒಪ್ಪುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರು ಮಂಡನೆ ಮಾಡಿರುವ ಸಪ್ಲಿಮೆಂಟರಿ ಬಜೆಟ್‌ನಲ್ಲಿರುವ ಕೆಲವು ಐಟಂಗಳನ್ನು ನೋಡಿದರೆ, ಅವುಗಳನ್ನು ರೆಗ್ಯುಲರ್ ಬಜೆಟ್‌ನಲ್ಲೇ ಮಂಡನೆ ಮಾಡಬಹುದಾಗಿತ್ತು ಎನಿಸುತ್ತದೆ. 'ಆಶ್ರಯ' ದ ಬಗ್ಗೆ ಇರಬಹುದು ಅಥವಾ ವೀರಪ್ಪನ್‌ನನ್ನು ಕೊಂದಿದ್ದಕ್ಕೆ ಬಹುಮಾನದ ಹಣ ವಿತರಣೆ ಮಾಡುವಂಥಾದ್ದು ಇರಬಹುದು. ಏಕೆಂದರೆ, ಮುಖ್ಯಮಂತ್ರಿಗಳು ಹಿಂದೆಯೇ ಘೋಷಣೆ ಮಾಡಿದಂಥಾದ್ದು ಅದು. ಈ ರೀತಿ ರೆಗ್ಯುಲರ್ ಬಜೆಟ್‌ನಲ್ಲಿ ಬರುವಂಥ ಎಷ್ಟೋ ಐಟಂಗಳು ಇದರಲ್ಲಿ ಇವೆ. ಅದನ್ನು ಆಗ ಏಕೆ ಮಾಡಲಿಲ್ಲವೋ ಗೊತ್ತಿಲ್ಲ. ಇವತ್ತು ನೀವು ಅದನ್ನು ಸಪ್ಲಿಮೆಂಟರಿ ಬಜೆಟ್‌ನಲ್ಲಿ ತರುತ್ತಿದ್ದೀರಿ.

ಇನ್ನು ಧಾರವಾಡದ ಕೆ. ಸಿ. ಸಿ. ಬ್ಯಾಂಕಿನದು ತಾವು ಸ್ಪೆಸಿಫಿಕ್ಕಾಗಿ ಹೇಳಿದ್ದೀರಿ, ಇದು 2003ನೇ ಇಸವಿಯಲ್ಲಿ ಹಿಂದಿನ ಸರ್ಕಾರ ಬರಗಾಲದ ಹಿನ್ನೆಲೆಯಲ್ಲಿ ಏನು ಬಡ್ಡಿ ಮನ್ನಾ ಘೋಷಣೆ ಮಾಡಿತ್ತು, ಆಗ 25 ಕೋಟಿ ರೂಪಾಯಿಗಳನ್ನು ರೀಇಂಬರ್ಸ್‌ಮೆಂಟ್ ಮಾಡಬೇಕಾಗಿತ್ತು. ಮತ್ತು ಸಹಕಾರಿ ಇಲಾಖೆಯ ಶತಮಾನೋತ್ಸವಕ್ಕೆ 25 ಕೋಟಿ ರೂಪಾಯಿಗಳು ಎಂದು ಹೇಳಿದ್ದರು. ಆದರೆ ತಾವು ಈಗ ಇದರಲ್ಲಿ 6 ಕೋಟಿ 25 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಇದುವರೆಗೆ ಬಿಡುಗಡೆ ಮಾಡಿದ ಹಣ 6 ಕೋಟಿ 25 ಲಕ್ಷ ರೂಪಾಯಿಗಳು. ಒಟ್ಟು ಹನ್ನೆರಡೂವರೆ ಕೋಟಿ ರೂಪಾಯಿಗಳಾಯಿತು. ಆದರೆ ನಿಜವಾಗಿ ಬಿಡುಗಡೆಯಾಗಬೇಕಾದುದು 25 ಕೋಟಿ ರೂಪಾಯಿಗಳು. ಈ ಬಗ್ಗೆ ಸರ್ಕಾದವರು ಭರವಸೆಯನ್ನೂ ಕೊಟ್ಟಿದ್ದೀರಿ. ಕಣಗಿನಹಾಳ ಗ್ರಾಮದಲ್ಲಿ ನಡೆದ ಸಹಕಾರ ಶತಮಾನೋತ್ಸವ ಸಂದರ್ಭದಲ್ಲಿ ಮಾನ್ಯ ಹೆಚ್.ಕೆ.ಪಾಟೀಲರಿದ್ದರು, ಸಹಕಾರ ಮಂತ್ರಿಗಳಾದ ಆರ್.ವಿ.ದೇಶಪಾಂಡೆಯವರೂ ಇದ್ದರು. ಈಗ ಮಾನ್ಯ ದೇಶಪಾಂಡೆಯವರು ಇಲ್ಲಿ ಇರಬೇಕಾಗಿತ್ತು. ಅವರು ಆ ಕಾರ್ಯಕ್ರಮದಲ್ಲಿ ಏನು ಹೇಳಿದರು ಎಂದರೆ, ಕವರ್‌ನಲ್ಲಿ 25 ಕೋಟಿ ರೂಪಾಯಿಗಳ ಒಂದು ಚೆಕ್ ಅನ್ನು ಇಟ್ಟು, 25 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ ಎನ್ನುವ ಭಾವನೆಯನ್ನು ಸಾರ್ವಜನಿಕರಿಗೆ ಮೂಡಿಸಿದರು. ಕೆ, ಸಿ, ಸಿ, ಬ್ಯಾಂಕಿಗೆ ಡಿಪೆಂಡ್ ಆದಂಥ ಅರ್ಬನ್ ಬ್ಯಾಂಕುಗಳವರೆಲ್ಲರೂ, 25 ಕೋಟಿ ರೂಪಾಯಿ ಜಮಾ ಆಯಿತು, ಇನ್ನು ನಮಗೆ ಹಣ ಸಿಗುತ್ತದೆ ಎಂದು ಬೆನ್ನು ಹತ್ತಿದರು. ಆದರೆ ಅವತ್ತು ರಿಲೀಸ್ ಆದದ್ದು ಕೇವಲ 6 ಕೋಟಿ 25 ಲಕ್ಷರೂಪಾಯಿಗಳು. ಈಗ ಮತ್ತೆ ನೀವು 6 ಕೋಟಿ 25 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡುತ್ತಿದ್ದೀರಿ. ಒಟ್ಟು 25 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಬೇಕಾಗಿತ್ತು. ಮಾನ್ಯ ಆರ್.ವಿ. ದೇಶಪಾಂಡೆಯವರು ಈಗ ಬಂದರು ಮೊನ್ನೆ ನಾನು ಈ ವಿಷಯ ರೈಸ್ ಮಾಡಿದಾಗ ಅವರು ಏನು ಹೇಳಿದರೆಂದರೆ, ಮಾನ್ಯ ಉಪಮುಖ್ಯಮಂತ್ರಿಗಳು ಸಪ್ಲಿಮಂಟರಿ ಬಜೆಟ್‌ನ್ನು ಮಾಡುತ್ತಾರೆ, ಆ ಸಂದರ್ಭದಲ್ಲಿ 25ಕೋಟಿ ರೂಪಾಯಿಗಳಲ್ಲಿ ಏನು ಬಾಕಿ ಇದೆ, ಅದನ್ನು

ರೂಪಾಯಿಗಳಲ್ಲಿ ಏನು ಬಾಕಿ ಇದೆ, ಅದನ್ನು ನಾನು ರಿಲೀಸ್ ಮಾಡಿಸುತ್ತೇನೆ ಎಂದು ಹೇಳಿದರು. ಆದರೆ, ಇವತ್ತು ಕೇವಲ 6 ಕೋಟಿ 25 ಲಕ್ಷ ರೂಪಾಯಿಗಳನ್ನು ಮಾತ್ರ ರಿಲೀಸ್ ಮಾಡಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಸದಸ್ಯರು ತಾವೇನು ಕವರ್ ಕವರ್ ಎಂದು ಹೇಳುತ್ತಿದ್ದೀರಲ್ಲ ಆ ಬಗ್ಗೆ ಮೊನ್ನೆಯೂ ಈ ವಿಷಯವನ್ನು ತಾವು ರೈಸ್ ಮಾಡಿದಾಗ ನಾನು ತಮಗೆ ಎಕ್ಸ್‌ಪ್ಲೈನ್ ಮಾಡಿ ಹೇಳಿದ್ದೆ. ಸರ್ಕಾರ 25 ಕೋಟಿ ರೂಪಾಯಿಗಳನ್ನು ಕೊಡಬೇಕು ಎಂದು ಒಪ್ಪಿಕೊಂಡಿದೆ. ಅದರಲ್ಲಿ ಅಪೆಕ್ಸ್ ಬ್ಯಾಂಕಿನವರು ಹನ್ನೆರಡೂವರೆ ಕೋಟಿ ರೂಪಾಯಿಗಳನ್ನು ಕೊಡಬೇಕು. ಸರ್ಕಾರ ಏನು ಹಣವನ್ನು ರಿಲೀಸ್ ಮಾಡುತ್ತದೆ, ಆ ಪ್ರಕಾರ ಅಪೆಕ್ಸ್ ಬ್ಯಾಂಕ್ ಸಹಾ ರಿಲೀಸ್ ಮಾಡುತ್ತದೆ. ಎಂದು ಹೇಳಿದೆ. ಬ್ಯಾಲೆನ್ಸ್ ಹನ್ನೆರಡೂವರೆ ಕೋಟಿ ರೂಪಾಯಿಗಳನ್ನು ಡಿ. ಸಿ. ಸಿ. ಬ್ಯಾಂಕ್ ತರಬೇಕು. ಆ ದಿನ ಅಪೆಕ್ಸ್ ಬ್ಯಾಂಕ್ ಚೇರ್‌ಮೆನ್ ಕಾರ್ಯಕ್ರಮಕ್ಕೆ ಬಂದಿರಲಿಲ್ಲ ಆದರೆ, ನಾವು ಇಷ್ಟು ಹಣವನ್ನು ಕೊಡಲಿಕ್ಕೆ ಒಪ್ಪಿಕೊಂಡಿದ್ದೇವೆ ಎಂದು ಅಪೆಕ್ಸ್ ಬ್ಯಾಂಕಿನ ಚೇರ್‌ಮೆನ್‌ರು ಲೆಟರ್ ಕಳುಹಿಸಿದ್ದರು. ಅದು 25 ಕೋಟಿ ರೂಪಾಯಿಗಳ ಚೆಕ್ ಆಗಿರಲಿಲ್ಲ. ನಾನು ಆ ದಿನ ನಿಮಗೆ ಎಕ್ಸ್‌ಪ್ಲೈನ್ ಮಾಡಿದೆ. ಪುನಃ ನೀವು ಅದನ್ನೇ ಪ್ರಸ್ತಾವ ಮಾಡುತ್ತಿದ್ದೀರಿ. ಈಗಾಗಲೇ 6 ಕೋಟಿ 25 ಲಕ್ಷ ರೂಪಾಯಿಗಳು ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ರಿಲೀಸ್ ಆಗಿದೆ. ಸಪ್ಲಿಮೆಂಟರಿ ಬಜೆಟ್‌ನಲ್ಲಿ 6 ಕೋಟಿ 25 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಉಳಿದ ಬ್ಯಾಲೆನ್ಸನ್ನೂ ಕೊಡುತ್ತೇವೆ, ಅದು ಸರ್ಕಾರದ ಕಮಿಟ್‌ಮೆಂಟ್, ಅದಕ್ಕೆ ಕೊಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಅಷ್ಟು ಹೊತ್ತಿಗೆ ಕೆ. ಸಿ. ಸಿ. ಬ್ಯಾಂಕು ಸತ್ತು ಹೋಗುತ್ತದೆ. ನೀವು ಆ ಭಾಗದವರಾಗಿದ್ದೂ ನಿಮಗೆ ಅದು ಏಕೆ ಅರ್ಥವಾಗುತ್ತಿಲ್ಲವೆನ್ನುವುದು ನನಗೆ ಅರ್ಥವಾಗುತ್ತಿಲ್ಲ, ಅರ್ಬನ್ ಬ್ಯಾಂಕ್‌ಗಳೆಲ್ಲಾ ಕೊಲ್ಯಾಪ್ಸ್ ಆಗಿವೆ. ಹೊಸದಾಗಿ ರೈತನಿಗೆ ಸಾಲ ಸಿಗುತ್ತಿಲ್ಲ. ಮತ್ತೆ ನೀವು ಅದನ್ನೇ ಹೇಳುತ್ತಿದ್ದೀರಿ. 25 ಕೋಟಿ ರೂಪಾಯಿ ಕೊಡುತ್ತೇವೆಂದು ನೀವು ಪ್ರಾಮಿಸ್ ಮಾಡಿದ್ದೀರಿ. ನೀವು ಮತ್ತು ಅಪೆಕ್ಸ್ ಬ್ಯಾಂಕಿನವರು ಪ್ರಾಮಿಸ್ ಮಾಡಿದ ಹಾಗೆ ನಡೆದುಕೊಳ್ಳಬೇಕಾಗಿತ್ತು. 2003ನೇ ಇಸವಿಯಲ್ಲಿ ಆರ್ಡರ್ ಮಾಡಿದಿ. ಈಗ ನಾವು 2005ರಲ್ಲಿದ್ದೇವೆ. ಎರಡು ವರ್ಷವಾಯಿತು, ಇನ್ನೂ ನಿಮಗೆ 25 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಲು ಆಗುತ್ತಿಲ್ಲ. ಸಪ್ಲಿಮೆಂಟರಿ ಬಜೆಟ್‌ನಲ್ಲಾದರೂ ಪ್ರಾವಿಷನ್ ಮಾಡಿರುವಿರಾ ಎಂದರೆ ಅದೂ ಇಲ್ಲ. ಎಲ್ಲಿ ಜರೂರಿದೆ ಯಾವುದು ಅವಶ್ಯಕತೆ ಇದೆ ಅದನ್ನು ನೀವು ಮಾಡುತ್ತಿಲ್ಲ. ಹೀಗಾಗಿ ಮಾನ್ಯ ಆರ್ಥಿಕ ಸಚಿವರು ಇದರ ಬಗ್ಗೆ ಗಮನ ಹರಿಸಬೇಕು. ಸರ್ಕಾರ ಏನು ಪ್ರಾಮಿಸ್ ಮಾಡಿದೆ ಆ ಪ್ರಕಾರ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಕೊಡಬೇಕು ಎಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಏಕೆಂದರೆ, ಇಡೀ ಅನ್‌ಡಿವೈಡೆಡ್ ಧಾರವಾಡ ಡಿಸ್ಟ್ರಿಕ್, ಹಾವೇರಿ, ಗದಗ್ . . .

ಶ್ರೀ ಆರ್. ವಿ. ದೇಶಪಾಂಡೆ : ಅದಕ್ಕೆ ನಿಮಗೆ ನಾನು ಬೆಂಬಲ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ನೋಡಿ, ದೇಶಪಾಂಡೆಯವರು ಬೆಂಬಲ ಕೊಡುತ್ತಾರೆ. ಮಾನ್ಯ ಉಪ ಮುಖ್ಯಮಂತ್ರಿಯವರು ತಕ್ಷಣ ಇದಕ್ಕೆ . . . . .

ಶ್ರೀ ಎಸ್. ಎಸ್. ಪಾಟೀಲ್ : ಸನ್ಮಾನ್ಯ ಸಿದ್ಧರಾಮಯ್ಯನವರೇ, ಕೆ. ಸಿ. ಸಿ. ಬ್ಯಾಂಕಿಗೆ ಕೊಡಬೇಕಾಗಿರುವುದು ಸರ್ಕಾರ ಕೊಡುವುದಿಲ್ಲ. ನಿಜವಾಗಿ ಹೇಳಬೇಕೆಂದರೆ, ಇದು ಸರ್ಕಾರ ಘೋಷಣೆ ಮಾಡಿದಂಥ ಬಡ್ಡಿ ಮನ್ನಾದ ಹಣ ಕೊಡಬೇಕಾಗಿರುವಂಥಾದ್ದು. ಆ ಕಾರಣದಿಂದ, ನೀವು ಬಾಕಿಯಿರುವ ಹಣವನ್ನು ಒಮ್ಮೆಗೇ ಬಿಡುಗಡೆ ಮಾಡಿದರೆ ಆ ಬ್ಯಾಂಕು ಸುಧಾರಿಸುತ್ತದೆ. ಆಗೊಂದು ಐದು ಕೋಟಿ, ರೂ ಈಗೊಂದು ಆರು ಕೋಟಿ ರೂಪಾಯಿಗಳನ್ನು ನೀವು ಬಿಡುಗಡೆ ಮಾಡಿದರೆ, ಕೊಟ್ಟಕೊಟ್ಟಹಾಗೆ ಅದನ್ನು ತೆಗೆದುಕೊಂಡು ಹೋಗಿಬಿಡುತ್ತಾರೆ. ಆಗ, ಆ ಬ್ಯಾಂಕೇ ಸುಧಾರಿಸುವುದಿಲ್ಲ. ಹಗಿ ಅದನ್ನು ಸುಧಾರಿಸಬೇಕಾದರೆ, ಸರ್ಕಾರ ಅದಕ್ಕೆ ಎಷ್ಟು ಹಣವನ್ನು ಕೊಡಬೇಕು, ಸುಮಾರು 7075 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಲೆಕ್ಕವಿದೆ, ನಾವೆಲ್ಲರೂ ಬರೆದು ಈ ಬಗ್ಗೆ ಅರ್ಜಿಗಳನ್ನು ಕೊಟ್ಟಿದ್ದೇವೆ, ದಯವಿಟ್ಟು ಅಷ್ಟು ಹಣವನ್ನು ಬಿಡುಗಡೆ ಮಾಡಲು ಪ್ರಾವಿಷನ್ ಮಾಡಿ.

ಶ್ರೀ ಡಿ. ಆರ್. ಪಾಟೀಲ್ : ಈ ವರ್ಷ ಸಹಕಾರಿ ಚಳುವಳಿಯ ಶತಮಾನೋತ್ಸವ. ಧಾರವಾಡ ಕೆ. ಸಿ. ಸಿ. ಬ್ಯಾಂಕು ಸೇವೆಯನ್ನು ಮಾಡಿದೆ. ಏನೋ ಕಾರಣಕ್ಕಾಗಿ ಈ ಪರಿಸ್ಥಿತಿ ಬಂದಿದೆ. ಸಾಕಷ್ಟು ಹಣಕಾಸನ್ನು ಕ್ರೋಢಿಕರಿಸುವುದರಲ್ಲಿ ಅಭಿನಂದನೀಯ ಕೆಲವಸವನ್ನು ತಾವು ಮಾಡಿದ್ದೀರಿ. ತಾವು ದಯವಿಟ್ಟು ದೊಡ್ಡ ಮನಸ್ಸು ಮಾಡಿ, ಈ ಸಂಸ್ಥೆಯನ್ನು ಉಳಿಸಲಿಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಜೆ. ಸಿ. ಮಾಧುಸ್ವಾಮಿ : ಬೇರೆ ಡಿ. ಸಿ. ಸಿ. ಬ್ಯಾಂಕುಗಳಿಗೆ ಏಕೆ ಕೊಡುತ್ತಿಲ್ಲ ? ನೀವೆಲ್ಲರೂ ಹಕ್ಕಬುಕ್ಕರಂತೆ ಒಂದಾಗಿಬಿಟ್ಟು ನೀವು ಹೀಗೆ ಹೇಳಿದರೆ ಹೇಗೆ ? ನೀವು ಹೇಳುವುದನ್ನು ನಾವು ಸುಮ್ಮನೆ ಕೇಳಿಕೊಂಡು ಕುಳಿತುಕೊಳ್ಳೋಣವೇ ? ಧಾರವಾಡ ಡಿ. ಸಿ. ಸಿ. ಬ್ಯಾಂಕ್ ಒಂದಕ್ಕೇ ಏಕೆ ಕೊಡುತ್ತಿದ್ದೀರೆಂಬುದನ್ನು ನಮಗೆ ಹೇಳಬೇಕು. ಗುಲ್ಬರ್ಗ ಡಿ. ಸಿ. ಸಿ. ಬ್ಯಾಂಕ್ ಮುಳುಗಿ ಹೋಗಿದೆ, ಅದಕ್ಕೂ ಕೊಡಿ, ತುಮಕೂರಿನದ್ದು ಮುಳುಗಿ ಹೋಗುತ್ತಿದೆ, ಅದಕ್ಕೂ ಕೊಡಿ.

ಶ್ರೀ ಆರ್. ವಿ. ದೇಶಪಾಂಡೆ : 200203 ನೇ ಇಸವಿಯಲ್ಲಿ ಸರ್ಕಾರ ಬಡ್ಡಿ ಮನ್ನಾ ಮಾಡಿ ಬ್ಯಾಂಕಿನವರಿಗೆ ಒಂದು ಸ್ಕೀಂ ಮಾಡಿಕೊಟ್ಟರು, ಬಡ್ಡಿ ಮನ್ನಾ ಸ್ಕೀಂನಲ್ಲಿ ಕೊಡಬೇಕಾದಂಥ ಹಣ ಇದು.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, We demand a report, ಈಗ ಧಾರವಾಡ ಡಿ. ಸಿ. ಸಿ. ಬ್ಯಾಂಕು ನಷ್ಟಕ್ಕೆ ಬಂದದ್ದು ಏತಕ್ಕೆ? ಅದಕ್ಕೆ ನೀವು ಕಾಂಪನ್ಸೇಟ್ ಮಾಡುತ್ತಿರುವುದು ಏಕೆ? ಬೇರೆ ಡಿ. ಸಿ. ಸಿ. ಬ್ಯಾಂಕುಗಳ ಸ್ಥಿತಿಗತಿ ಏನು ಎನ್ನುವುದನ್ನೂ ಇಲ್ಲಿ ಹೇಳಬೇಕಲ್ಲವೇ ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದ್ದರು. ಆ ಬಡ್ಡಿ ಮನ್ನಾ ಮಾಡಿರುವುದನ್ನು ಅವರು ಕೊಟ್ಟಿಲ್ಲ . . .

(ಗೊಂದಲ)

ಶ್ರೀ ಎಸ್. ಎಸ್. ಪಾಟೀಲ್ : ಬಡ್ಡಿ ಮನ್ನಾ ಮಾಡಿರುವುದನ್ನು ಕೊಡುವುದು ಬೇಡ ಎಂದು ನಾನು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಎಸ್. ಎಸ್. ಪಾಟೀಲರು ಹೇಳಿದರು ನೀವು ಕೊಡಬೇಕಾಗಿದ್ದು ಇಲ್ಲ. ನೀವು declare ಮಾಡಿದ ತಪ್ಪಿಗೆ ಕೊಡಿ ಎಂದು ಹೇಳುತ್ತಿದ್ದಾರೆ

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ಬೇರೆ ಬ್ಯಾಂಕ್‌ನವರಿಗೂ ಇಲ್ಲಿ apply ಮಾಡಬೇಕಲ್ಲವೇ ಸಾರ್ ? ಧಾರವಾಡ D. C. C. Bank ಒಂದು ಚೆನ್ನಾಗಿ ಆಗಿಬಿಟ್ಟಿದೆ ರಾಜ್ಯದಲ್ಲಿರುವ ಎಲ್ಲಾ ಬ್ಯಾಂಕುಗಳು ಚೆನ್ನಾಗಿ ಆಗಿಬಿಡುತ್ತವೆಯೇ ?

ಶ್ರೀ ಎಸ್. ಎಸ್. ಪಾಟೀಲ್ : ಇಡೀ ರಾಜ್ಯದ ಬ್ಯಾಂಕ್‌ಗಳಿಗೆ ಕೊಡಲಿ ನಾನು ಬೇಡ ಎಂದು ಹೇಳುವುದಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ : ಅದನ್ನೇ ಹೇಳಿ ದಯವಿಟ್ಟು.

ಶ್ರೀ ಎಸ್. ಎಸ್. ಪಾಟೀಲ್ : ಬಡ್ಡಿ ಮನ್ನಾ ಮಾಡುತ್ತೇವೆಂದು ಏನು ಘೋಷಣೆ ಮಾಡಿದ್ದಾರೆ ಅದನ್ನು ಇಡೀ ರಾಜ್ಯಕ್ಕೆ ಕೊಡಲಿ. ನಾನು ಕೊಡಬೇಡಿ ಎಂದು ಹೇಳಲಿಲ್ಲವಲ್ಲಾ. ರೈತರ ಬಡ್ಡಿ ಮನ್ನಾ ಮಾಡುವುದಕ್ಕೆ ಏನು ಕೊಡುವುದಿದೆ ಅದು ಇಡೀ ರಾಜ್ಯಕ್ಕೆ ಕೊಡಲಿ. ನೀವೂ ಸಹ ಕೇಳಿ.

ಶ್ರೀ ಆರ್. ವಿ. ದೇಶಪಾಂಡೆ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಹಣಕಾಸಿನ ಸಚಿವರು Supplementary Budgetನಲ್ಲಿ Provision ಮಾಡಿದ್ದಾರಲ್ಲ. ಅದು ಹಳೆ commitment. 200203 ನೇ ಇಸವಿಯಲ್ಲಿ ಅಲ್ಲಿ ರೈತರು ಸಾಲವನ್ನು ಮರುಪಾವತಿ ಮಾಡಿದರೆ ಬಡ್ಡಿ ರಿಯಾಯಿತಿ ಕೊಡುತ್ತೇವೆನ್ನುವುದು ಸರ್ಕಾರದಲ್ಲಿ cabinet decision ಆಗಿ ಆ ಪ್ರಕಾರ ಅದು ಹಳೆ commitment ಆಗಿರುತ್ತದೆ. ಆ commitment ಪ್ರಕಾರ ಆ ಹಣ ಅವರದ್ದು ಆರೂಕಾಲು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ಈಗ ಆರೂಕಾಲು ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. Balance ಹಣವನ್ನು ಇನ್ನೂ ಬಿಡುಗಡೆ ಮಾಡಬೇಕು ಹಾಗಾಗಿ ಅದು Compensation ಅಥವಾ grant ಅಲ್ಲ ಎರಡನೆಯದಾಗಿ, ಗುಲ್ಬರ್ಗಾ D. C. C. Bank ಸುಧಾರಿಸಿದೆ. Section 11 ಹೊರಗೆ ಅದು ಈ ಕೋಲಾರದಲ್ಲಿ recovery ಆದರೂ ಸಹ ಇನ್ನೂ ಸ್ವಲ್ಪ ಸುಧಾರಿಸಬೇಕಾಗಿದೆ. ಹಾಗಾಗಿ ಮುಂಚಿನ ಪರಿಸ್ಥಿತಿ ಏನಿತ್ತು, ಅದಕ್ಕಿಂತ ನಿಮ್ಮ ಕೋಲಾರ ಬ್ಯಾಂಕ್‌ನಲ್ಲಿ slightly better ಎಂದು ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ದೇಶಪಾಂಡೆಯವರೆ, ದಯವಿಟ್ಟು ಕ್ಷಮಿಸಿ. ನಮ್ಮ ಬ್ಯಾಂಕು ಸುಧಾರಿಸಿಲ್ಲ. ನೀವು ಏನು ಹೇಳುತ್ತಿದ್ದೀರಿ ಎಂದರೆ ಬಹುಶಃ ಈ book adjustmentನಲ್ಲಿ ಯಾವುದೋ ಕೆಲವು improve ಆಗಿದೆ ಎಂದು ಹೇಳುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : ಈಗ ಯಾವುದೋ ಒಂದು ಬ್ಯಾಂಕಿನ ವಿಚಾರವಾಗಿಯೇ ಅರ್ಧ ಗಂಟೆಯಿಂದ ಮಾತನಾಡುತ್ತಿದ್ದೀರಿ. I can't understand.

(ಗೊಂದಲ)

ಶ್ರೀ ಎಸ್. ಎಸ್. ಪಾಟೀಲ್ : ಕೆ. ಸಿ. ಸಿ. ಬ್ಯಾಂಕ್‌ಗೆ ಕೊಡತಕ್ಕಂಥದ್ದು ಸರ್ಕಾರದ ಅನುದಾನ ಅದನ್ನು ಕೊಟ್ಟರೆ. . .

(ಗೊಂದಲ)

ಶ್ರೀ ಎಸ್. ಎಸ್. ಪಾಟೀಲ್ : ಅದನ್ನು ಕೊಡಬೇಕಾಗುತ್ತದೆ ಅಷ್ಟೆ. ರೈತರ ಬಡ್ಡಿ ಮನ್ನಾ concession ಇವರು ಕೊಡಬೇಕಷ್ಟೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಕೆ. ಸಿ. ಸಿ. ಬ್ಯಾಂಕ್‌ಗೆ ವಿಶೇಷವಾದ ಯಾವುದೇ ಪ್ಯಾಕೇಜ್ ಕೊಟ್ಟಿಲ್ಲ. ವಿಶೇಷವಾದ ಯಾವುದೇ ಪರಿಹಾರ ಕೊಟ್ಟಿಲ್ಲ. ಹಿಂದಿನ ಸರ್ಕಾರ 2003 ರಲ್ಲಿ ಆವತ್ತು ಏನು ರೈತರಿಗೆ ಬಡ್ಡಿ ಮನ್ನಾ ಘೋಷಣೆ ಮಾಡಿದರು, ಆ ಘೋಷಣೆ ಅನ್ವಯ ಆ ಡಿ. ಸಿ. ಸಿ. ಬ್ಯಾಂಕ್ ಗೆ 25 ಕೋಟಿ ರೂಪಾಯಿಗಳು ಸರ್ಕಾರದಿಂದ ಬರಬೇಕಾಗಿತ್ತು. ಅದನ್ನು ನಾವು ಕೇಳುತ್ತಿದ್ದೇವೆ. ಹೊಸದಾಗಿ ಏನೋ ಒಂದು ಕಾನ್ಸೆಷನ್ ಮತ್ತು ಪರಿಹಾರ . . .

ಶ್ರೀ ಎಸ್. ಎಸ್. ಪಾಟೀಲ್ : ಸರ್ಕಾರ 36 ಕೋಟಿ ರೂಪಾಯಿಗಳಷ್ಟು ಬಡ್ಡಿ ತರಿಸಿಕೊಂಡು ತುಂಬಬೇಕು. ಅದನ್ನು ಕೊಟ್ಟಿಲ್ಲವೆಂದು ನಾವು ಹೇಳುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅವರು ಏನು ಕೊಡಬೇಕಾಗಿತ್ತು ಅದನ್ನು ನಾವು ಕೇಳುತ್ತಿದ್ದೇವೆ. ಮಾನ್ಯ ಸಿದ್ಧರಾಮಯ್ಯನವರ ವಿನಂತಿ ಮಾಡುವುದೇನೆಂದರೆ, ದಯವಿಟ್ಟು ಇದರ ಬಗ್ಗೆ ಪೂರ್ಣ ಹಣ ಏನು ಬಾಕಿ ಇದೆ ಎಲ್ಲವೂ ಒಂದೇ ಕಂತಿಗೆ ರಿಲೀಸ್ ಆಗಲಿ. ಆ ಕೆ. ಸಿ. ಸಿ. ಬ್ಯಾಂಕ್ ಕಂಪ್ಲೇಂಟ್ ಕೋಲ್ಯಾಪ್ಸ್ ಆಗಿದೆ. ಅದನ್ನು ಉಳಿಸುವಂಥದ್ದು ಆಗಬೇಕು. ಇನ್ನು ಮಾನ್ಯ ಸಿದ್ಧರಾಮಯ್ಯನವರು ಹುಬ್ಬಳ್ಳಿಗೆ ಬಂದಾಗ 'ಅದರಲ್ಲಿ ಯಾರು ಅವ್ಯವಹಾರ ಮಾಡಿದ್ದಾರೆ, ಅವರ ಮೇಲೆ ನಾನು ಕ್ರಮತೆಗೆದುಕೊಳ್ಳುತ್ತೇನೆಂದು' ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಹಾಗಾದರೆ ಯಾರು ಅವ್ಯವಹಾರ ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿ.

ಶ್ರೀ ಆರ್. ವಿ. ದೇಶಪಾಂಡೆ : ಈ ಬಗ್ಗೆ ಆರ್ಡರ್ ಮಾಡಿದ್ದೇವೆ. ಫೈನಾನ್ಸ್ ಮಿನಿಸ್ಟರ್ ಹಣ ರಿಲೀಸ್ ಮಾಡುವುದಕ್ಕಿಂತ ಮುಂಚೆ ಅವರೂ ಸಹ ಫೈಲ್ ಮೇಲೆ ಎನ್‌ಕ್ವಯರಿ ಮಾಡಬೇಕೆಂದು ಆರ್ಡರ್ ಮಾಡಿದ್ದಾರೆ. ಈಗಾಗಲೇ ಮಾಡಿದ್ದೇವೆ. ಸೀನಿಯರ್ ಜಾಯಿಂಟ್ ರಿಜಿಸ್ಟ್ರಾರ್ಸ್, ಆಡೀಟರ್ಸ್ ಎನ್‌ಕ್ವಯರಿ ಅನ್ನು ಈಗಾಗಲೇ ಪ್ರಾರಂಭ ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಇವತ್ತು ಇನ್ನೊಮ್ಮೆ ವಿನಂತಿ ಮಾಡುತ್ತಿದ್ದೇನೆ. ಈಗ ಮಾನ್ಯ ಆರ್. ವಿ. ದೇಶಪಾಂಡೆಯವರು ಹೇಳಿದ ಪ್ರಕಾರ ಎಲ್ಲಾ ಒಂದೇ ಕಂತಿನಿಂದ ಹಣವನ್ನು Release ಮಾಡಿ. ಅದು ಬಿಟ್ಟು ಇವತ್ತು ಒಂದಿಷ್ಟು ಹಣ ಬಿಡುಗಡೆ ಮಾಡುವುದು, Next Budgetಗೆ ಇನ್ನೊಂದಿಷ್ಟು ಹಣವನ್ನು ಬಿಡುಗಡೆ ಮಾಡಿದರೆ ಅದು ಉದ್ಧಾರವಾಗುವುದಿಲ್ಲ. ಸರ್ಕಾರ Promise ಮಾಡಿದ ಹಾಗೆ 25 ಕೋಟಿ ರೂಪಾಯಿಗಳು ಮತ್ತು 36 ಕೋಟಿ ರೂಪಾಯಿಗಳನ್ನು ತಕ್ಷಣ Release ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇನ್ನು ನೇಕಾರರಿಗೆ

ಸಂಬಂಧಪಟ್ಟಂತೆ. ಮಾನ್ಯ ಸಿದ್ಧರಾಮಯ್ಯನವರು ನೇಕಾರರಿಗೆ ಇನ್ನು ಮೇಲೆ ಶೇಕಡ 6ರ ಬಡ್ಡಿ ದರದಲ್ಲಿ ನಾವು ಸಾಲ ಕೊಡುತ್ತೇವೆಂದು ಘೋಷಣೆ ಮಾಡಿದರು. ಅದಕ್ಕೆ ಏನಾದರೂ Provision ಮಾಡಿದ್ದಾರೆಯೇ ಎಂದು ಅವರು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಹಾಗೆಯೇ ಸಹಕಾರ ಸಂಘಗಳ ಒಂದೆರಡು ಸಭೆಗಳಲ್ಲಿ ಮಾನ್ಯ ಸಿದ್ಧರಾಮಯ್ಯನವರು ಘೋಷಣೆ ಮಾಡಿದ್ದಾರೆ. ಇವತ್ತು Cooperative Soceityಗಳು ಎನಿವೆ, ಅದರಲ್ಲಿ ಯಾರು ಹಿಂದುಳಿದ ವರ್ಗದವರು ದಲಿತರು ಇದ್ದಾರೆ, ಅದಕ್ಕೆ Provision ಪ್ರಾವಿಷನ್ ಸೇರಿಸಿದರೂ ಒಳ್ಳೆಯದೂ. ಅದನ್ನು ಸ್ವಾಗತ ಮಾಡುತ್ತೇನೆ. ಅವರನ್ನು Member ಮಾಡಲಿಕ್ಕೆ ಅವರಿಗೆ Share ಹಣ ಕೊಡಲಿಕ್ಕೆ ತಾವು ಘೋಷಣೆ ಮಾಡಿದ್ದೀರಿ. ಅದನ್ನು, ಅವರನ್ನು ಸೇರಿಸಿದ್ದರೆ ಒಳ್ಳೆಯದಾಗುತ್ತದೆ, ಒಳ್ಳೆಯದಾಗಿದೆ ಎಂದು ನಾನು ಹೇಳುತ್ತಿದ್ದೇನೆ. ಇನ್ನು ನೆರೆಹಾವಳಿ ಬಗ್ಗೆ ಹೇಳುವುದಾದರೆ, ಈ ಬಗ್ಗೆ ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕೆಂದಿದ್ದೆ. ಆ ಬಗ್ಗೆ ಈಗಲೇ ಒಂದಿಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿಬಿಡುತ್ತೇನೆ. ಅದಕ್ಕೂ ಒಂದು Provision ಈ Supplementary Budgetನಲ್ಲಿ ಮಾಡಬೇಕಾಗುತ್ತದೆ. ಇವತ್ತು ಬಿಜಾಪುರ ಜಿಲ್ಲೆ ಇರಬಹುದು, ಬೆಳಗಾಂ ಜಿಲ್ಲೆ ಇರಬಹುದು, ಅಥಣಿ ತಾಲ್ಲೂಕು ಇರಬಹುದು, ಹೀಗೆ ಹಲವಾರು ಜಿಲ್ಲೆಗಳಲ್ಲಿ ನೆರೆಹಾವಳಿ ಇದೆ. ಇವತ್ತು ಕೃಷ್ಣನದಿ ತುಂಬಿದೆ ಭೀಮಾನದಿ ತುಂಬಿದೆ. ಹಲವಾರು ಗ್ರಾಮಗಳು ನೀರಿನಿಂದ ಆವೃತ್ತವಾಗಿ ಮುಳುಗಡೆಗೊಂಡಿವೆ. ಅಲ್ಲಿದ್ದಂಥ ಗ್ರಾಮಸ್ಥರು ತಮ್ಮ ತಮ್ಮ ಆಸ್ತಿಪಾಸ್ತಿಗಳನ್ನು ಬಿಟ್ಟು 24 ತಾಸು 40 ತಾಸು ಆ ಗ್ರಾಮಗಳಲ್ಲಿರುವ ಮರಗಳಲ್ಲಿ ಇನ್ನಿತರ ಬೇರೆ ಬೇರೆ ಎತ್ತರದ ಪ್ರದೇಶಗಳಿಗೆ ಹೋಗಿ ಕುಳಿತ್ತಿದ್ದಾರೆ. ಅವರಿಗೆ ಯಾವುದೇ ರೀತಿಯ ರಕ್ಷಣೆ ಇಲ್ಲ. ಪುನರ್‌ವಸತಿ ಸೌಲಭ್ಯಗಳನ್ನೇನೂ ಅವರಿಗೆ ಮಾಡಿಲ್ಲ. ಯಾವ ಜಿಲ್ಲಾಧಿಕಾರಿಯೂ ಅಲ್ಲಿಗೆ ಹೋಗುತ್ತಿಲ್ಲ. ಅವರಿಗೆ ಆಹಾರವನ್ನು ಕೊಡುತ್ತಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಗುಲ್ಬರ್ಗಾ ಜಿಲ್ಲೆಗೆ ಹೋಗಿದ್ದಾರೆನ್ನುವ ಮಾಹಿತಿ ಬಂದಿದೆ. ಅದೇ ರೀತಿ ಬಿಜಾಪುರ ಜಿಲ್ಲೆ, ಬೆಳಗಾಂ ಜಿಲ್ಲೆ, ಬಾಗಲಕೋಟೆ ಜಿಲ್ಲೆಗಳಲ್ಲಿ ಸಹಿತ ನೆರೆಹಾವಳಿಯಿಂದ ಜನ ತೊಂದರೆ ಅನುಭವಿಸುತ್ತಿದ್ದಾರೆ. ಹೀಗಾಗಿ ತಕ್ಷಣವೇ ನೆರೆಹಾವಳಿ ಇದ್ದಂಥ ಗ್ರಾಮಗಳಲ್ಲಿ ಪುನರ್‌ವಸತಿ ಕಲ್ಪಿಸಿಕೊಡುವ ಕೆಲಸ ಆಗಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಈ Supllementary Budgetನಲ್ಲಿ ಕೆಲವೊಂದು Amount ಅನ್ನು ನೆರೆಹಾವಳಿ ಸಲುವಾಗಿ ಸುಮಾರು 2 ಕೋಟಿ ರೂಪಾಯಿಗಳಷ್ಟು ಏನೋ ತಾವು ಇಟ್ಟಿದ್ದೀರಿ. ಆದರೆ ಇಷ್ಟು ಹಣ ಇದಕ್ಕೆ ಸಾಗಾಗುವುದಿಲ್ಲ ಇವತ್ತಿನ ಪರಿಸ್ಥಿತಿ ನೋಡಿದರೆ ಇನ್ನೂ ಹೆಚ್ಚಿನ ಹಣವನ್ನು ಇದಕ್ಕೆ ಇಡುವ ಸಲುವಾಗಿ ಈ Supllementary Budgetನಲ್ಲಿ ಪ್ರಾವಿಷನ್ ಮಾಡಬೇಕೆನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಇನ್ನು Circuit bench ಸ್ಥಾಪನೆ ಬಗ್ಗೆ ಹೇಳುವುದಾದರೆ, ಈ ಕುರಿತು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಿಗೆ ಮುಖ್ಯ ನ್ಯಾಯಾಧೀಶರಿಂದ ಪತ್ರ ಬಂತು. Infrastracture ನೀವು ಕೊಡುವವರೆಗೆ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. Circuit benchನ ಶಂಕುಸ್ಥಾಪನೆ ಆಗಸ್ಟ್ 9ನೇ ತಾರೀಖು ನಾವು ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ ಹೇಳಿದ್ದರು. ಹಾಗಾದರೆ ಮುಖ್ಯ Budgetನಲ್ಲಿ Provision ಸರ್ಕಾರದವರು ಕೇವಲ 20

ಕೋಟಿ ರೂಪಾಯಿಗಳನ್ನು ಮಾತ್ರ ನಿಗಧಿ ಮಾಡಿದ್ದಾರೆ. ಈಗ ಮುಖ್ಯ ನ್ಯಾಯಾಧೀಶರು ಬರೆದಿರುವ ಪತ್ರದ ಪ್ರಕಾರ 20 ಕೋಟಿ ರೂಪಾಯಿಗಳಲ್ಲಿ ಈ Infrastructureಗಳನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇವತ್ತು ಹುಬ್ಬಳ್ಳಿಧಾರಾವಾಡದಲ್ಲಿ ಇರಬಹುದು, ಗುಲ್ಬರ್ಗಾದಲ್ಲಿ ಆ Circuit benchಸಲುವಾಗಿ Infrastructureಗಳನ್ನು ಒದಗಿಸಿ ಕೊಡಲಿಕ್ಕೆ ಸುಮಾರು ನೂರಾರು ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಹೀಗಾಗಿ ಈ Supllementary budgetನಲ್ಲಿ ಈಗ ನೀವು Provision ಮಾಡಬೇಕಾಗಿತ್ತು. ನೀವು ಪ್ರಾವಿಷನ್ ಮಾಡಿಲ್ಲವೆಂದರೆ Circuit bench ಸ್ಥಾಪನೆ ಮಾಡುವಂತ Bonafide ಸರ್ಕಾರಕ್ಕೆ ಇಲ್ಲವೆನ್ನುಂಥಾದ್ದು ಇದರಿಂದ ಸಿದ್ಧವಾಗುತ್ತದೆ. ಆದ್ದರಿಂದ ತಕ್ಷಣವೇ ಹುಬ್ಬಳ್ಳಿಧಾರವಾಡ ಮತ್ತು ಗುಲ್ಬರ್ಗಾದಲ್ಲಿ ಹೀಗೆ ಎರಡೂ ಕಡೆ Circuit benchಗಳ ಸಲುವಾಗಿ Infrastracture ಒದಗಿಸಿಕೊಡಲಿಕ್ಕೆ ಹೆಚ್ಚಿನ ಹಣವನ್ನು Supllementary budgetನಲ್ಲಿ ನಿಗದಿ ಮಾಡಬೇಕೆನ್ನುವಂಥ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಇನ್ನು 'ಬೃಹತ್ ಬೆಂಗಳೂರು ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಗಾಗಿ' ಆಯವ್ಯಯದಲ್ಲಿ ಒದಗಿಸಿದ ರಾಜ್ಯದ ಪಾಲಿನ ಅನುದಾನ 4108 ಅಂದರೆ 410 ಕೋಟಿಯಷ್ಟು ಈ ಹೆಚ್ಚಿನ ಅನುದಾನವನ್ನು ಇವತ್ತು ಬೆಂಗಳೂರು ಮಹಾನಗರಕ್ಕೆ ಜಲಮಂಡಳಿ ಮುಂತಾದವಕ್ಕೆಲ್ಲಾ ಕೊಡುತ್ತಿದ್ದೀರಿ. ಅದಕ್ಕೆ ನಾವು ವಿರೋಧ ಮಾಡುವುದಿಲ್ಲ. ಬೆಂಗಳೂರು ಬೆಳೆದಿದೆ ಕೊಡಿ. ಆದರೆ ಇವತ್ತು ಹುಬ್ಬಳ್ಳಿಧಾರವಾಡಕ್ಕೆ 176 ಕೋಟಿ ರೂಪಾಯಿಗಳ ಮೂರನೇ ಫೇಸ್ ಕುಡುಯುವ ನೀರಿನ ಯೋಜನೆಗೆ ಇಲ್ಲಿಯವರೆಗೆ Cabinet Approval ಆಗಿಲ್ಲ ಹತ್ತು ದಿವಸಕ್ಕೆ ಒಂದು ಸಲ ಕುಡಿಯುವ ನೀರನ್ನು ಹುಬ್ಬಳ್ಳಿಧಾರವಾಡಕ್ಕೆ ಬಿಡುತ್ತಿದ್ದು ಅವರು ಕುಡಿಯುತ್ತಿದ್ದಾರೆ. ಈ ಯೋಜನೆಗೆ ಎಸ್ಟಿಮೇಟ್ ಮಾಡಿ ಸದರಿ Supllementary budgetನಲ್ಲಿ Provision ಮಾಡಬೇಕಾಗಿತ್ತು. ಮಾನ್ಯ ಮೋರೆಯವರು ಇಲ್ಲಿಯೇ ಇದ್ದಾರೆ. 176 ಕೋಟಿ ರೂಪಾಯಿಗಳ Third phase ಯೋಜನೆಯನ್ನು ನಾವು ಮಂಜೂರು ಮಾಡುತ್ತೇವೆಂದು ಅವರು ಈ ಸದನದಲ್ಲಿಯೇ Promise ಮಾಡಿದ್ದಾರೆ. ಇಲ್ಲಿಯವರೆಗೆ ಅದಕ್ಕೆ Provisionಮಾಡಿಲ್ಲ. ಹೀಗಾದರೆ ಯಾವ ರೀತಿ ನಿಮ್ಮ ವಿಷನ್ ಇರುತ್ತದೆ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಆದ್ದರಿಂದ, ಈ ಕುಡಿಯುವ ನೀರಿನ ಸಲುವಾಗಿ ತಾವು ಹೆಚ್ಚಿನ ಅನುದಾನವನ್ನು ಇಡಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಇನ್ನು ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, Small Scale Industries ಎನಿವೆ, ಸುಮಾರು 400 ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಬಾಕಿ ಇವೆ. ಮಾನ್ಯ ಸಿಂಧ್ಯಾರವರು ಇಂಡಸ್ಟ್ರೀಸ್ ಮಿನಿಸ್ಟರ್ ಆದಮೇಲೆ ಸುಮಾರು ನೂರಾರು ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಹಣವನ್ನು ರಿಲೀಸ್ ಮಾಡಿದ್ದಾರೆ. ಆದರೆ ಇನ್ನೂ ಬಹಳಷ್ಟು ಹಣ ಬಾಕಿ ಇದೆ. ಆ ಬಾಕಿ ಹಣವನ್ನು ತೀರಿಸಲಿಕ್ಕೆ Regular budgetನಲ್ಲಿ ಒಂದಿಷ್ಟು ಹಣವನ್ನು ನಿಗಧಿ ಮಾಡಿದರು. ಆದರೆ ಇನ್ನೂ ಸುಮಾರು 300 ಕೋಟಿ ರೂಪಾಯಿಗಳಷ್ಟು subcidy ಬಾಕಿ ಹಣವನ್ನು Small Scale Industriesನವರಿಗೆ ಕೊಡಬೇಕಾಗಿದೆ. ಇದರ ಬಗ್ಗೆ Supllementary budgetನಲ್ಲಿ Provision ಮಾಡಬೇಕಾಗಿತ್ತು. ಆದರೆ ಮಾಡಲಿಲ್ಲ ಹೀಗಾಗಿ ಅದನ್ನೂ ಸಹ Consider ಮಾಡಬೇಕು ಆ Small Scale

Industrieಗೂ ಸಬ್ಸಿಡಿ ತಕ್ಷಣ ಬಿಡುಗಡೆಯಾಗಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಇಲ್ಲಿ ನಾನು ಸ್ವಾಗತ ಮಾಡುವಂಥಾದ್ದು ಎನೆಂದರೆ, ಹುಬ್ಬಳ್ಳಿ ಐ. ಟಿ. ಪಾರ್ಕ್ ಸಲುವಾಗಿ 10 ಕೋಟಿ ರೂಪಾಯಿಗಳನ್ನು ಈ Supllementar budgerನಲ್ಲಿಟ್ಟು Releaseಮಾಡಿದ್ದೀರಿ. ಅದಕ್ಕಾಗಿ ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ ಮತ್ತು ಉಳಿದ ವಿಷಯಗಳ ಬಗ್ಗೆ ತಕ್ಷಣವೇ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕ ನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಿದ್ಧರಾಮಯ್ಯನವರು ಭಾರೀ ಅನುಭವಸ್ಥರು. ಅನೇಕ ಸಲ ಇಲ್ಲಿ ಬಜೆಟ್ ಇಟ್ಟು ರೆವಿನ್ಯೂ ಸರ್‌ಪ್ಲಸ್ ಬಜೆಟ್ ಇಟ್ಟಿದ್ದೇನೆಂದು ಹೇಳಿ ಮಾತನಾಡಿದರು, ಅನೇಕ ಯೋಜನೆಗಳಿಗೆ ನೋನ್ ಸ್ಕೀಮ್ಸ್‌ಗಳಿಗೆ, ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನಲ್ಲಿ ಹೆಚ್ಚು ಹಣ ಕೇಳುವುದು ನಿಜವಾಗಿ ಒಳ್ಳೆಯದೆಂದು ನನಗನ್ನಿಸುವುದಿಲ್ಲ. ಎಮರ್‌ಜೆನ್ಸಿ, ಎಕ್ಸಿಜೆನ್ಸಿ ಬಂದಿದ್ದರೆ, ಏನೋ ಆಕಸ್ಮಾತ್ ಮಾಡಬೇಕಾಗಿದಿದ್ದರೆ, ಅವರು ಈ ಡಿಮ್ಯಾಂಡ್‌ನಲ್ಲಿ ಕೇಳಬೇಕಾದ್ದು ಅನಿವಾರ್ಯ, ನಾವು ಒಪ್ಪುತ್ತೇವೆ. 655 ಕೋಟಿ ರೂಪಾಯಿಗಳನ್ನು ಸಪ್ಲಿಮೆಂಟರಿ ಡಿಮ್ಯಾಂಡ್ ಕೇಳುತ್ತಿದ್ದೀರಿ. ಮತ್ತೆ, ಅದರಲ್ಲಿ ಸುಮಾರು ಯೋಜನೆಗಳಿವೆ. ಸ್ಕೀಮ್ಸ್ ಇದೆ ಸಾರ್. ಅಲ್ಲಿ, That was existing on that day also. ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದ ಹಾಗೆ, ಬಜೆಟ್ ತಯಾರುಮಾಡುವಾಗ ನಿರೀಕ್ಷೆ ಮಾಡಬಹುದಾಗಿತ್ತು ಇಷ್ಟು ಹೋಗುತ್ತದೆಂದು ಹೇಳಿ ಮಾಡಬಹುದಾಗಿತ್ತು. ಅದನ್ನು ಮಾಡಬೇಕಾದರೆ ತಾವು ಅಷ್ಟೊಂದು ಏಕೆ ಆಸ್ಥೆ ವಹಿಸಲಿಲ್ಲವೋ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಅದಕ್ಕೆ ನಮ್ಮದು ವಿರೋಧವಿದೆ. 655 ಕೋಟಿಯಷ್ಟು ನೀವು ಎಕ್ಸೆಸ್ ಆಗಿ, ಸರ್‌ಪ್ಲಸ್ ಆಗಿ ಸಪ್ಲಿಮೆಂಟರಿಯಲ್ಲಿ ಕೇಳಬಾರದು. ಒಂದೇ ಒಂದು ನಮ್ಮ ತಕರಾರು ಇದೆ. ಈ ಕೋಳಿ ಸಾಕಣೆ ತಳಿ ಅಭಿವೃದ್ಧಿಗೆ 69 ಲಕ್ಷ ರೂ. ಇಡುತ್ತೇವೆಂದು ನೀವು ಒಂದು ಕಡೆಗೆ ಹೇಳುತ್ತಿದ್ದೀರಿ. ನಾವು ಬೇಡುತ್ತಾ ಬಂದಿದ್ದೇವೆ. ಫೌಲ್ಟ್ರೀಸ್ ಹೋಗಿದೆ. ಸಬ್ಸಿಡಿ ರಿಲೀಸ್ ಮಾಡಿ, ಕೋಆಪರೇಟಿವ್ ಸೆಕ್ಟಾರ್‌ನಲ್ಲಿ ಅದಕ್ಕೆ ರಿಲೀಸ್ ಮಾಡಿ, ಇಂಡಸ್ಟ್ರಿಯಲ್ ಸೆಕ್ಟಾರ್ ಅದಕ್ಕೆ ರಿಲೀಸ್ ಮಾಡಿ. ಯಾರು ಲೋನ್ ಮಾಡಿ ಫೌಲ್ಟ್ರಿ ಮಾಡಿದ್ದರೋ, ಅವರು ನಾಶವಾಗುತ್ತಾರೆಂದಾಗ, ತಳಿ ಅಭಿವೃದ್ಧಿ ಮಾಡುವುದರಿಂದೇನೂ ಆಗುವುದಿಲ್ಲ ಸಾರ್. ಗಿರಿರಾಜ ಬಂದು ಹೋಯಿತು. ಮತ್ತೊಂದು ಬಂದು ಹೋಯಿತು. ವೆಟರಿನರಿ ಡಿಪಾರ್ಟ್‌ಮೆಂಟ್‌ಗೆ ಅಭಿವೃದ್ಧಿಗೆಂದು ಕೊಡುತ್ತೀರಲ್ಲಾ, 69 ಲಕ್ಷ ರೂಪಾಯಿಗಳನ್ನು ಯಾವ ಪುರುಷಾರ್ಥಕ್ಕೆ ಕೊಡುತ್ತಿದ್ದೀರಿ ಎಂಬುದು ನನಗೆ ಅರ್ಥವಾಗಿಲ್ಲ. 69 ಲಕ್ಷವನ್ನು ಬರೀ ಕೋಳಿ ತಳಿ ಅಭಿವೃದ್ಧಿಗೆ ಅಂತ ಹೇಳಿದ್ದೀರಿ ಅದು ಯಾವ ತಳಿ ? ಎಲ್ಲಿಂದ ಬಂದಿದ್ದು? ಏನಾಯಿತು? ಈವರೆಗೆ ಆದ್ದ ಕಾರ್ಯಕ್ರಮಗಳೇನಾಯಿತು ? ಅದಕ್ಕೆ ತಾವು ಹೇಳಬೇಕು. ಆಮೇಲೆ, ಇದನ್ನು ಸೇರಿಸಿಕೊಂಡಾಗ ಆ ಉದ್ದಿಮೆ ಉಳಿಯುವ ಹಾಗೆ ಮಾಡಬೇಕು. ನೀವು ಏನೇ ಮಾಡಿದರೂ ಅವನು ವ್ಯವಹಾರ ಮಾಡುವವನು ಬದುಕಬೇಕಲ್ಲಾ ಸಾರ್. ಸಬ್ಸಿಡಿ ಕೊಡುತ್ತೇವೆ, ಫೌಲ್ಟ್ರಿಗಳನ್ನು ಮಾಡಿ ಎಂದು ಹೇಳಿದಿರಿ. ಆಸಕ್ತಿ ಇಟ್ಟುಕೊಂಡು ಗ್ರಾಮೀಣ ಪ್ರದೇಶದಲ್ಲಿ ಮಾಡಿಬಿಟ್ಟರು. ಅದನ್ನೆಲ್ಲಾ ತೆಗೆದಿರಿ. ನಾವು ಸನ್ಮಾನ್ಯ ದೇಶಪಾಂಡೆಯವರಿಗೆ ಬೇಡಿದೆವು. ಫೌಲ್ಟ್ರಿ ಸೇರಿಸಿ, ಮತ್ತೊಂದನ್ನು ಸೇರಿಸಿ. ನಿಮ್ಮ ಹತ್ತಿರ

ಹಣ ಇರುವಾಗಲಾದರೂ ಅವರಿಗೆ ಕೊಡಿ ಅಂತ ಹೇಳಿದೆವು ಅದನ್ನು ರೀಕನ್ಸಿಡರ್ ಮಾಡಬೇಕು.

ಶ್ರೀ ಕೆ. ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, Modestry demands, ಪ್ರತಿಯೊಬ್ಬರಿಗೂ ಒಂದು ಜ್ಯುರಿಸ್‌ಡಿಕ್ಷನ್ ಇರುತ್ತವೆ. ಕೋಳಿ ಬಗ್ಗೆ ನಿಮ್ಮದೇನು ಕಾಂಪಿಟೆನ್ಸ್ ಅಂತ? ಕೋಳಿ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಯಾರು ಅಧಿಕಾರ ಕೊಟ್ಟವರು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಅಲ್ಲ, ಈಗ ತಾನೇ ಕೋಳಿ ಊಟ ಹಾಕಿಸಿದರಲ್ಲಾ. ಆದರಿಂದ ಅದರ ಜ್ಞಾಪಕ ಬಂದಿದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಕೋಳಿ ಬಗ್ಗೆ ಮಾತನಾಡಲಿಕ್ಕೆ ರೈಟ್ಸ್ ಇಲ್ಲವೆಂದು ಹೇಳಲಿಕ್ಕೆ ಇವರಿಗೆ ಏನು ಅಧಿಕಾರವಿದೆ?

ಶ್ರೀ ಕೆ. ಆರ್. ರಮೇಶ್‌ಕುಮಾರ್ : ನಾನು ಕೋಳಿ ಪರ ಇದ್ದೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅದನ್ನು ಹೇಳುತ್ತಿರಿ ಅಂತಲೇ ನಾನು ಹೇಳಿದ್ದು.

ಶ್ರೀ ಜೆ. ಸಿ. ಮಾಧುಸ್ವಾಮಿ : ಹೊಸ ತಳಿ ಎನ್ನುತ್ತಾರೆ. ತಳಿಯನ್ನು ಸಾಮಾನ್ಯವಾಗಿ ಮಾನ್ಯ ರಮೇಶಾ ಕುಮಾರ್‌ರವರೆ, ತಳಿ ಅಭಿವೃದ್ಧಿಯನ್ನು ಎರಡು ಕಾರಣಕ್ಕೆ ಮಾಡುತ್ತೇವೆ. ಒಂದು, ಅದರ ಪ್ರೊಡಕ್ಟಿವಿಟಿ ಅಥವಾ ತಳಿ ಜಾಸ್ತಿ ಕೊಡುತ್ತೇವೆಂದು ಮಾಡುತ್ತೇವೆ. ಇನ್ನೊಂದು, ಅದು ಮಾಂಸವನ್ನು ಹೆಚ್ಚು ಕೊಡುತ್ತದೆಯೇ ಅಥವಾ ಒಳ್ಳೆಯದು ಕೊಡುತ್ತದೆಯೇ, ಅದರಿಂದೇನಾದರೂ ರೈತರಿಗೆ ಅಥವಾ ಅದನ್ನು ಬೆಳೆದವರಿಗೆ ಲಾಭವಾಗುತ್ತದೆಯೇ ಎಂದು ಮಾಡುತ್ತಾರೆ. ಇಂಥ ತಳಿಯನ್ನು ನಾವು ಇಂಪೋರ್ಟ್ ಮಾಡುತ್ತಿದ್ದೇವೆ, ಇಂಥ ತಳಿ ಕೋಳಿಯನ್ನು ನಾವು ಮಾಡುತ್ತಿದ್ದೇವೆ, ಅದಕ್ಕಾಗಿ ಇದು ಅಂತ ಇಲ್ಲಿ ಹೇಳಬೇಕಾಗಿತ್ತು. ಎರಡನೆಯದು, ನಿಮ್ಮ ದ್ಯಾಪಲಾಪುರ ಗ್ರಾಮಕ್ಕೆ ತಾವು 150 ಲಕ್ಷ ಇಟ್ಟಿದ್ದೇವೆಂದು ಹೇಳುತ್ತೀರಿ. ಸಾರ್, ನಾವು ಅಲ್ಲಿಗೆ ಹೋಗಿ ಬಂದೆವು ಅಲ್ಲಿಂದು ಜನರಲ್ ಕಾಮೆಂಟ್ಸ್ ಇದೆ. ಈ ಊರಿನಲ್ಲಿ ಈ ಊರಿನಲ್ಲಿ ಪ್ರತಿಸಲ ಅನುಕೂಲಗಳು ಬೇಕಾದಾಗ ಇಂಥ ಘಟನೆಗಳು ನಡೆಯುತ್ತವೆ. ಇದೊಂದು ಆಟವಾಗಿ ಬಿಟ್ಟಿದೆ. ಇಲ್ಲಿ ಯಾರೋ ಬೆಂಕಿ ಇಟ್ಟಹಾಗೆ ಮಾಡುವುದು, ಇನ್ಯಾರೋ ಒಬ್ಬರು ಹುಯ್ದಾಡುವ ಹಾಗೆ ಮಾಡುವುದು, ಕಾಂಪನ್‌ಸೇಷನ್ ಕೇಳುವುದು ಬಹಳ ಆಗಿದೆ ಅಂತ ಅನ್ನುತ್ತಾರೆ. ನೀವು ಅದಕ್ಕೊಂದು ತನಿಖೆ ಈಗ ಮಾಡಿಸಬೇಕಲ್ಲಾ. ಆ ಊರಿಗೆ ಪ್ರತಿ ಸಲ ಒಂದೊಂದು ಸಲವೂ ವಿಶೇಷವಾಗಿ ಏನಾದರೂ ಅನುದಾನಗಳನ್ನು ಕೊಡುತ್ತಲೇ ಬಂದಿದೆ. ಆ ಊರಿನಲ್ಲಿ ಅದೊಂದು chronic case. – ಅಲ್ಲಿ ಏಕೆ ಹಾಗೆ ಮಾಡುತ್ತಿದ್ದಾರೆ ? ಅದರ ಉದ್ದೇಶವೇನು? ಆ ಊರಿನವರೇ ಸೇರಿಕೊಂಡು ಏಕೆ ಬೆಂಕಿ ಇಟ್ಟುಕೊಳ್ಳುತ್ತಿದ್ದಾರೆ? ಇದನ್ನೇನಾದರೂ ಮಾಡಬೇಕು. I Demand. ದ್ಯಾಪಲಪುರ ವಿಲೇಜ್‌ನಲ್ಲಿ ಆಗಿದ್ದ ಘಟನೆ ಏನು? ತನಿಖೆಯ ರಿಪೋರ್ಟ್ ಏನಾಯಿತು ? ನೀವೀಗ 150 ಲಕ್ಷ ರೂಪಾಯಿ ಇಟ್ಟಿದ್ದೀರಿ. ಯಾವ ಆಧಾರದ ಮೇಲೆ ಇಟ್ಟಿದ್ದೀರಿ? ಅದರಲ್ಲಿ ಅಫೆಂಡರ್ಸ್ ಯಾರು? ಏಕೆ ಕ್ರೈಂ ನಡೆಯಿತು? ಸಾರಸಗಟಾಗಿ ಮನೆಗಳಿಗೆ ಬೆಂಕಿ ಹಚ್ಚಿದವರಿಗೆ ನೀವೇನು ಮಾಡಿದಿರಿ? ಈ ಸಭೆಗೆ ಹೇಳಬೇಕಲ್ಲವೇ ಸಾರ್? ಈಗ ನಾವೆಲ್ಲ ಸೇರಿ 150 ಲಕ್ಷ ರೂಪಾಯಿಗಳನ್ನು ಅಲ್ಲಿಗೆ ಕೊಡುತ್ತಿದ್ದೇವೆ, ಅಲ್ಲಿ ಯಾರಿಗೋ ಪರಿಹಾರ ಕೊಡುತ್ತಿದ್ದೇವೆ,

ಎಂದು ನಿರ್ಧಾರ ತೆಗೆದುಕೊಳ್ಳುವಾಗ ತಪ್ಪಿತಸ್ಥರ್‍ಯಾರು, ಅಸಹಾಯಕರು ಯಾರಿದ್ದರು, ಏಕೆ ಆ ಘಟನೆ ನಡೆಯಿತು ಎಂಬುದನ್ನು ನೋಡಿ ಕೊಡಬೇಕಾಗಿತ್ತು . ಮೂರನೆಯದು, ಸ್ವಲ್ಪ ಗಮನ ಕೊಡಬೇಕು ಇಲ್ಲ ನೀವು ಆಸಡ್ಡೆ ಮಾಡುವುದಾದರರೆ ನಾನು ಮಾಡನಾಡುವುದೇ ಇಲ್ಲ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಕೇಳುತ್ತಿದ್ದೇನೆ, ನೀವು ಹೇಳಿ.

ಶ್ರೀ ಜೆ. ಸಿ. ಮಾಧುಸ್ವಾಮಿ : ಇಲ್ಲ, ನೀವು ಕೇಳುತ್ತಿಲ್ಲ ಯಾರು ವೀರಪ್ಪನ್ ಕಾರ್ಯಾಚರಣೆಯಲ್ಲಿದ್ದರೆಂದು ಅವರಿಗೆ ಸೈಟ್ ಕೊಡಿಸುವುದಕ್ಕೆ, ಪ್ರೈಜ್ ಕೊಡುವುದಕ್ಕೆ ನೀವು ಎಸ್‌ಟಿಎಫ್‌ಗೆ 12 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದೀರಿ. ಗೌರ್ನಮೆಂಟ್ ಕಮಿಟಿಮೆಂಟ್ ಜಾಸ್ತಿ ಇತ್ತಲ್ಲಾ ಸಾರ್. ಮಾನ್ಯ ಮುಖ್ಯಮಂತ್ರಿಗಳೇ 50 ಕೋಟಿ ರೂಪಾಯಿಗಳನ್ನು ಡಿಕ್ಲೇರ್ ಮಾಡಿದ್ದರು. ಒಂದು ನಿಮಿಷ, ಮುಖ್ಯ ಮಂತ್ರಿಗಳು ಹೇಳಿದ್ದನ್ನು ಹೇಳುತ್ತಿದ್ದೇವೆ ನಾವು. ನಾವು ಸ್ವಲ್ಪ ಮಿಡಿಯಾದಲ್ಲಿ ನೋಡಿರುತ್ತೇವೆ. 1993 ರಲ್ಲಿ 1997ರಲ್ಲಿ ಆರ್ಡರ್‌ಗಳು ಆಗಿತ್ತು. ಅವತ್ತೇನು ಮಾಡಿದರು? ಅವತ್ತಿದ್ದ ಅಧಿಕಾರಿಗಳು ಈ ಆಪರೇಷನ್ ಕಂಪ್ಲೀಟ್ ಆಗದೆ ನಾವು ಯಾರೂ ಅವಾರ್ಡ್ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು. ಇವತ್ತೊಂದು ಗ್ರೌಸ್ ಇದೆ. ಪೊಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ನಿಜವಾದ ಒಂದು ಗ್ರೌಸ್ ಇದೆ. 18ನೇ ತಾರೀಖು ಆಪರೇಷನ್‌ನಲ್ಲಿದ್ದವರಿಗೆ ಮಾತ್ರ ನೀವು ಎನು ಕೊಟ್ಟಿದ್ದೀರಿ; ಇದಲ್ಲ ವೀರಪ್ಪನ್ ಗುಂಪನ್ನು ಎನು ಕ್ಷೀಣಿಸಲಿಕ್ಕೆ ಸಹಾಯ ಮಾಡಿದರು, ಆವತ್ತಿನಿಂದ ಯಾರ್‍ಯಾರು ಮನೆಯಲ್ಲಿರಬೇಕಾದವರನ್ನು ಕಳೆದುಕೊಂಡು ಶ್ರೀನಿವಾಸ್‌ರಿಂದ ಹಿಡಿದು, ಯಾರ್‍ಯಾರು ಪೋಲಿಸ್ ಆಫೀಸರ್ಸ್ ಹತ್ಯೆಯಾದರು, ಫಾರೆಸ್ಟ್ ಆಫೀಸರ್ ಹತ್ಯೆಯಾದರು ಅವರಿಗೆಲ್ಲಾ ಈ ಬೆನಿಫಿಟ್ ಪಾಸ್‌ಆನ್ ಮಾಡಬೇಕಾಗಿತ್ತು ಸರ್ಕಾರ ಎಂದು ನೀವೆ ಹಿಂದೆ ಹೇಳಿದ್ದೀರಿ. ಗೌರ್ನಮೆಂಟ್ ಆರ್ಡರ್ ಇದೆ. ನಾನು ನಿಮಗೆ ಕಳುಹಿಸಿ ಕೊಡುತ್ತೇನೆ. 1993 ರಲ್ಲಿದೆ 1997ರಲ್ಲಿದೆ. ನಿಮಗೆ ಪರಿಹಾರ ಕೊಡುತ್ತೇವೆ, ಎಸ್‌ಟಿಎಫ್‌ನಲ್ಲಿರುವವರಿಗೆ ಆಗುವ ನಷ್ಟಕ್ಕೆ ಅಂತ ಹೇಳಿ ಇದೆ. ಅಲ್ಲಿದ್ದ ಅಧಿಕಾರಿಗಳನ್ನು ಗುರುತಿಸಲಿಲ್ಲ. ಅವರಿಗೆ ನೀವು ಯಾವುದೇ ರೀತಿ ಸಹಾಯವನ್ನು ಮಾಡಿಲ್ಲ. ಅವರಿಗೆ ಪ್ರೈಜ್ ಕೊಡಲಿಲ್ಲ. ಸೈಟ್ ಕೊಡಲಿಲ್ಲ. ಅವತ್ತಿದ್ದ ಎಸ್‌ಟಿಎಫ್‌ನವರು, ಶಂಕರ್ ಬಿದರಿಯವರು ಆವಾರ್ಡ್ ತೆಗೆದುಕೊಳ್ಳುವುದಕ್ಕೆ ರೆಫ್ಯೂಸ್ ಮಾಡಿದ್ದರು. ಇಲ್ಲ, ಇಲ್ಲ, ಆ ಕಾರ್ಯಾಚರಣೆ ಕಂಪ್ಲೀಟ್ ಆದ ಮೇಲೆ ನಾವು ತೆಗೆದುಕೊಳ್ಳುತ್ತೇವೆ, ಎಲ್ಲಾ ಪೋಲಿಸ್‌ನವರನ್ನೂ ಆ ವ್ಯಾಪ್ತಿಗೆ ತರುತ್ತೇವೆಂದು ಹೇಳಿದ್ದರು. ಎಕಾಎಕಿ ಅವರನ್ನು ಬಿಟ್ಟು 18ನೇ ತಾರೀಖು ಯಾರ್‍ಯಾರು ಡ್ಯೂಟಿನಲ್ಲಿ, ಸರ್ವಿಸ್‌ನಲ್ಲಿದ್ದರು ಅವರ ಬಗ್ಗೆ ನಿರ್ಧಾರ ತೆಗೆದುಕೊಂಡಿದ್ದೀರಿ. ತಾವು ಇದನ್ನು ರಿವ್ಯೂ ಮಾಡಬೇಕು. ಯಾರ್‍ಯಾರು ಇದ್ದರು, ಅಷ್ಟೊಂದು ಸಶಕ್ತವಾದ ಪಡೆಯನ್ನು 4ಕ್ಕೆ 5ಕ್ಕೆ ಇಳಿಸಿದವರೂ ಜವಾಬ್ದಾರಿ ಸಾರ್. ಮಾನ್ಯ ರಮೇಶ್ ಕುಮಾರ್‌ರವರೆ, ಇದೊಂದು ಕೋರ್ಸ್ ಟ್ರೀಟ್‌ಮೆಂಟ್ ಇದ್ದ ಹಾಗೆ. ಯಾವುದೋ ಡಾಕ್ಟರ್ ಹತ್ತಿರ ಹೋಗುತ್ತೇವೆ. ಒಂದು ದಿವಸ, ಎರಡು ದಿವಸ, ಮೂರು ದಿವಸ ಟ್ರೀಟ್‌ಮೆಂಟ್ ತೆಗೆದುಕೊಳ್ಳುತ್ತೇವೆ. ಐದನೇ ದಿವಸ ಅವನ ಹತ್ತಿರ ಹೋಗಿದ್ದರೂ ಹುಷಾರಾಗಿರುವುದು. ಏಕೋ 4 ದಿವಸ ಹುಷಾರಾಗಲಿಲ್ಲವೆಂದು 5ನೇ ದಿವಸ ಬೇರೆ

ಡಾಕ್ಟರ್ ಹತ್ತಿರ, ಹೋಗುತ್ತೇವೆ. ಅಷ್ಟು ಹೊತ್ತಿಗೆ ಕೋರ್ಸ್ ಟ್ರೀಟ್‌ಮೆಂಟ್ ಆಗಿಬಿಟ್ಟಿರುತ್ತದೆ. ಎರಡನೇ ಡಾಕ್ಟರ್ ನಮ್ಮದೃಷ್ಟಿಯಲ್ಲಿ ಭಾರೀ ದೊಡ್ಡವನಾಗಿಬಿಡುತ್ತಾನೆ. ಜ್ವರ ಹುಷಾರಾಗುತ್ತಿಲ್ಲಾ. ಎಯ್, ಈ ಡಾಕ್ಟರ್ ಹತ್ತಿರ ಹೋಗುತ್ತಿದ್ದ ಹಾಗೆ ಬಿಟ್ಟಿತು ಎನ್ನುವ ಹಾಗೆ ಆಗುತ್ತದೆ ಇದು. ನೀವೇನು ಆರಂಭದಿಂದ ಎಸ್‌ಟಿಎಫ್‌ಗೆ ಪೋಲಿಸ್ ಫೋರ್ಸ್ ಅನ್ನು ಬಳಸಿದ್ದೀರಿ, ಅವರಿಗೆಲ್ಲಾ ಕೊಡುವಷ್ಟು ದೊಡ್ಡತನವನ್ನು ತಾವು ತೋರಿಸಬೇಕು. ನಾನು ಮೊನ್ನೆ ಮಾತನಾಡಬೇಕಾದರೆ ಹೇಳಿದೆ. ಇದೊಂದು ಇಲ್ಲಿ ನಿಮಗೆ ಅನ್ಯಾಯವಾಗಿದೆ. ಇದನ್ನು ಸರಿಪಡಿಬೇಕಾದದ್ದು ನಿಮ್ಮ ಧರ್ಮ ಆಗಲಿ ಎಂದು ಹೇಳಿದೆ. ಮತ್ತೆ, ಈಗ ಕೆ.ಸಿ.ಸಿ. ಬ್ಯಾಂಕ್, ಧಾರವಾಡಕ್ಕೆ ಕೊಟ್ಟಿದ್ದಕ್ಕೆ ನಮ್ಮದು ತಕರಾರೇನಿಲ್ಲ. ನಾನೂ ಸಹಕಾರಿ ಕ್ಷೇತ್ರದಿಂದ ಬಂದವನೇ. ಯಾರಿಗೋ ಶಕ್ತಿ ಇದೆ ಅಥವಾ ಬಾಯಿ ಚೆನ್ನಾಗಿ ಬರುತ್ತದೆ ಮಾತನಾಡುವುದಕ್ಕೆಂದು ಹೇಳಿ ಅವರಿಗೆ ಅನುಕೂಲ ಕೊಡುವುದು, ಇನ್ನೊಂದು ಕಡೆಗೆಲ್ಲಾ ನೋಡುವುದೇ ಇಲ್ಲವನ್ನುವ ಸ್ಥಿತಿಗೆ ಸರ್ಕಾರಗಳು ಬರಬಾರದು. ಇದನ್ನು ದಯಾಮಾಡಿ ತಾವು ಎಲ್ಲಾ ಡಿಸಿಸಿ ಬ್ಯಾಂಕ್‌ಗಳದ್ದೂ ಒಂದು ಮೌಲ್ಯಮಾಪನ ಆಗಬೇಕು. ವಾಸ್ತವವಾಗಿ ನಮ್ಮ ಕಡೆಯಿಂದಲೇ ಅನ್ಯಾಯವಾಗಿದ್ದರೆ, ನಮ್ಮ ಪಾಲಿಸಿ ಡಿಸಿಷನ್ಸ್ ನಾವು ಇಂಟರೆಸ್ಟ್ ಸಬ್ಸಿಡಿ ಕೊಟ್ಟಿರುವುದಿಲ್ಲ. ನಾವು ಅನೇಕ ಟಿಎಪಿಸಿಎಂಎಸ್‌ಗಳಿಗೆ ಟ್ರಾನ್ಸ್‌ಪೋರ್ಟ್ ಸಬ್ಸಿಡಿ ಕೊಡದೆ ಮುಚ್ಚಿಹೋಯಿತು. ಸರ್ಕಾರದಿಂದ ರಿಲೀಸ್ ಆಗಬೇಕಾದ ಹಣ ಸಕಾಲದಲ್ಲಿ ರಿಲೀಸ್ ಆಗದೆ ಮುಚ್ಚಿಹೋಯಿತು. ಅಂಥ ಅನ್ಯಾಯವಾಗಿರುವ ಕಡೆ ನೀವು ಸಂಬಂಧಪಟ್ಟ ಸಹಕಾರ ಸಂಘಗಳಿಗೆ, ಬ್ಯಾಂಕುಗಳಿಗೆ ಸಬ್ಸಿಡಿಯನ್ನು ಬಿಡುಗಡೆ ಮಾಡಬೇಕು. ಇನ್ನು ಮಾನ್ಯ ಸಿದ್ಧರಾಮಯ್ಯನವರೆ, ಸಮಾಜ ಕಲ್ಯಾಣದಲ್ಲಿ ನಾವಿಲ್ಲಿರುವವರೆಲ್ಲಾ ಬೇಡಿದೆವು. ಒಂದಷ್ಟು ಸೀಟ್ ಜಾಸ್ತಿ ಮಾಡಿ. ಒಂದು 10 ಪರ್ಸೆಂಟ್ ಆದರೂ ಜಾಸ್ತಿ ಮಾಡಿ. ಈ ವರ್ಷ ಮಕ್ಕಳು ಓದುವುದಕ್ಕಾಗುವುದಿಲ್ಲ. ಸೀಟ್‌ಗಳು ಹೇಗೆ ಕೊಡುವ್ವದೆಂದು ಬಹಳ ಒತ್ತಡ ಇದೆ ನಮಗೆ. ನೀವು ಅದನ್ನು ಸೇರಿಸುತ್ತೀರಿ ಎಂದು ಹೇಳಿದ್ದೀರಿ. ಮಂತ್ರಿಗಳೂ ಭಾಷಣದಲ್ಲಿ ಹೇಳಿದ್ದಾರೆ. ಟೋಟಲ್ ಸೀಟ್ಸ್ ಮೇಲೆ ಟೆನ್ ಪರ್ಸೆಂಟ್ ಅನ್ನು ಎನ್‌ಹ್ಯಾನ್ಸ್ ಮಾಡುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ ಅಂತ ಸನ್ಮಾನ್ಯ ನಾಗಪ್ಪನವರು ಇಲ್ಲಿ ಮಾತನಾಡಿದ್ದಾರೆ ರೆಕಾರ್ಡ್‌ನಲಿದೆ. ನಾವು ಕೇಳಿದಷ್ಟು ಕೊಡದೇ ಹೋದರೂ minimum 10% of the seats I am the Government, I am the whole and sole., ಅನ್ನು ಜಾಸ್ತಿ ಮಾಡುತ್ತೇನೆ, ಬಳಸಿದ ಭಾಷೆ. where are you sir? ತಾವು ಹೇಳಿದ್ದು. ನಿಮ್ಮ whole and sole, ದೊಡ್ಡ ಹೋಲ್ ಆಗಿಬಿಟ್ಟಿದೆ ಈಗ ಇದರಲ್ಲದರೂ ಸೇರಿಸಬೇಕಾಗಿತ್ತಲ್ಲಾ. ಒಂದಷ್ಟು ಸೀಟ್ ಜಾಸ್ತಿ ಮಾಡಲಿಕ್ಕೆ ಒಂದೊಂದು ತಾಲ್ಲೂಕಿಗೆ 50, 100, 125, 500 ಡಿಮ್ಯಾಂಡ್ ಮೇಲಾದರೂ ನೀವು ಇವತ್ತಾದರೂ ಆ ಮಕ್ಕಳಿಗೆ ನ್ಯಾಯ ಒದಗಿಸಬೇಕು. ತಾವು ಸರ್‌ಪ್ಲಸ್ ಬಜೆಟ್ ಇಟ್ಟ ಪುಣ್ಯ ಆ ಮಕ್ಕಳಿಗೆ ತಲುಪಬೇಕು. ನಮಗೆ ನಿಜವಾಗಲೂ ನೋವಾಗುತ್ತದೆ. ಆಕಾಮಡೇಷನ್ ಇದೆ. 10 ಜನ, 20 ಜನ ಹುಡುಗರಿಗೆ ಊಟಕ್ಕೆ ಆಗುವ ಚಾರ್ಜ್‌ಗೆ ನೀವು ಏನಾದರೂ ಸಪ್ಲಿಮೆಂಟರಿ ಡಿಮಾಂಡ್ಸ್‌ನಲ್ಲಿ ಈಗೇನು ಕೊಡುತ್ತಿದ್ದೀರಿ, ಇದರ ಜೊತೆಗೆ ಸೇರಿಸಿಕೊಳ್ಳಬೇಕು. ಇಲ್ಲದಿದ್ದರೆ ಅನ್ಯಾಯವಾಗುತ್ತದೆ. ಮೊದಲು ನಾನು ಕಂದಾಯದ ಬಗ್ಗೆ ಮಾತನಾಡುತ್ತೇನೆ. ಮಾನ್ಯ ಕಾರಜೋಳರವರು ಹೇಳಿದ ಮಾತನ್ನು

ನಾವಿಲ್ಲಿ ಹೇಳಬೇಕಾಗುತ್ತದೆ. ಯಾರಿಗೋ ಕುಡಿಯುವುದಕ್ಕೆ, ಕುಡಿಸುವುದಕ್ಕೆ ನೀವು ಅನುಮತಿ ಕೊಟ್ಟಿರಿ. ಯಾರೋ ಕಳ್ಳಬಟ್ಟಿಯನ್ನೋ, ಸಾರಾಯಿಯನ್ನೋ ಕುಡಿಸಿಬಿಟ್ಟರು. ಸತ್ತು ಹೋದವರಿಗೆಲ್ಲಾ ನೀವು ಪರಿಹಾರ ಕೊಟ್ಟುಕೊಂಡು ಹೊರಟು ಬಿಟ್ಟಿರಿ. ಕುಡಿಸಿದವನ ಮೇಲೇನು ನೀವು ಆಕ್ಷನ್ ತೆಗೆದುಕೊಂಡಿರಿ ಸಾರ್? ತಾವಿಲ್ಲಿ ಭಾಷಣ ಮಾಡಿದ್ದೀರಿ. ಇದನ್ನೆಲ್ಲಾ 100 ಪರ್ಸೆಂಟ್ ಕಂಟ್ರೋಲ್ ಮಾಡಿದ್ದೇನೆ. 100 ಪರ್ಸೆಂಟ್ ನಿಗ್ರಹ ಇಟ್ಟಿದ್ದೇವೆ. ಇವತ್ತು ಪಾನೀಯ ನಿಗಮ ಮಾಡಿದ್ದೇವೆ. ಅದರ ಮೂಲಕ ಡಿಸ್ಟ್ರಿಬ್ಯೂಟ್ ಆಗುತ್ತಿದೆ ಎಂದಿರಿ. ಮತ್ತೆ ಈ ಪ್ಯಾಕೇಟ್ ಎಲ್ಲಿಂದ ಬಂತು? ಅವನು ಏತಕ್ಕೆ ದಂಡ ಕೊಡುತ್ತಿಲ್ಲ. ಅವನನ್ನು ಏಕೆ ಇವತ್ತು ನೀವು ಅಕೌಂಟಬಲ್ ಮಾಡುತ್ತಿಲ್ಲ? ಇವತ್ತು ಅವರು ಸಾಯಬೇಕಾದರೆ ಯಾರು ಕಾರಣ? ಏಕೆ ಇವತ್ತು ನೀವು ಅವರ ಕ್ರಮ ಜರುಗಿಸಿ ಇದನ್ನು ರಿಕವರಿ ಮಾಡಬಾರದು? ನಾನು ಸಜೆಸ್ಟ್ ಮಾಡುತ್ತೇನೆ, ಈ ಹಣವನ್ನು ನೀವು ಆ ಕಾಂಟ್ರಾಕ್ಟ್‌ದಾರನಿಂದ ದಯಾಮಾಡಿ ವಸೂಲಿ ಮಾಡಲು ಇನ್ಸಿಯೇಟ್ ತೆಗೆದುಕೊಳ್ಳಲೇ ಬೇಕೆಂದು ಹೇಳಿ ಒತ್ತಾಯ ಮಾಡುತ್ತೇನೆ. ಇಂಥವಕ್ಕೆಲ್ಲಾ ಸರ್ಕಾರ ಕೊಡುತ್ತಾ ಹೋದರೆ ಯಾರೋ ಕುಡಿಸುವುದು, ಯಾರೋ ಸತ್ತು ಹೋಗುವುದು ನೀವು ಹಣ ಕೊಡುತ್ತಾ ಕುಳಿತು ಕೊಂಡರೆ, ಯಾರು ಬೇಕಾದರೂ ಮಾಡುತ್ತಾರೆ ಸಾರ್ ಕೆಲಸಕ್ಕೆ ತಾವು ವಿನಿಯೋಗ ಮಾಡಿದಿರಿ, ನಿಜವಾಗಿ ಇದಕ್ಕೆ ನಮ್ಮ ವಿರೋಧವಿದೆ ಬಡವರಿಗೆ ಪರಿಹಾರ ಹೋಗಬೇಕಾದ್ದು ಸರಿ. ಆದರೆ, ಯಾರು ಆ ಬಾಬ್ತಿನಲ್ಲಿ ದುಡಿಯುತ್ತಿದ್ದ ಅವನಿಂದ ವಸೂಲಿಯಾಗಬೇಕು. ಇನ್ನು, ಈ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ, ನೀವು ಕಲಾವಿದರಿಗೆ ಮಾಸಾಶನವನ್ನು ಕೊಡಲಿಕ್ಕೆ ಹಣ ಸಾಲಲಿಲ್ಲ, ಕೊಟ್ಟೆವು ಅಂತ ಹೇಳಿದ್ದೀರಿ. ಎಷ್ಟು ಅಪ್ಲಿಕೇಶನ್ ಪೆಂಡಿಂಗ್ ಇವೆ ಸ್ವಾಮಿ? 58 ವರ್ಷ ಆಗಿ, 12 ವರ್ಷ ಆದವರು ಆ ಅರ್ಜಿದಾರರು ಇದ್ದಾರೆ. ಒಂದು ದಿವಸ ಯಾವತ್ತಾದರೂ ಕುಳಿತುಕೊಂಡು ಆ ಇಲಾಖೆಯನ್ನು ನೀವು ರಿವ್ಯೂ ಮಾಡಬೇಕು. ಮಾನ್ಯ ಸಿದ್ದರಾಮಯ್ಯನವರೆ, 58 ವರ್ಷ ಆದರೆ ಅವರು ಎಲಿಜಿಬಲ್ ಆಗುತ್ತಾರೆ. ನಿಮ್ಮ ನಿಯಮದಲ್ಲಿ 58 ವರ್ಷ ತುಂಬಿದರೆ ಪೆನ್‌ಷನ್‌ಗೆ ಎಲಿಜಿಬಲ್ ಆಗುವುದು. 58 ವರ್ಷದಿಂದ ಅರ್ಜಿ ಹಾಕುವುದಕ್ಕೆ ಶುರು ಮಾಡಿ 12, 13 ವರ್ಷ ಆಗಿರುವವರು ಇದ್ದಾರೆ, ಅಂದರೆ 70, 72, 73, ವರ್ಷ ತುಂಬಿರುವ ಕಲಾವಿದರು ಮಾಸಾಶನಕ್ಕೆ ಕಾಯುತ್ತಾ ಕುಳಿತಿದ್ದಾರೆ. ಸರ್ಕಾರ ಅವರ ಬಗ್ಗೆ ನಿರ್ಧಿಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಲಿಲ್ಲ. ಕೊಡಬೇಕಾಗಿತ್ತು ಅಥವಾ ಕೊಡದೇ ಇರಬೇಕಾಗಿತ್ತು. ತಾವು ಈಗಲಾದರೂ ಒಂದು ಪರಿಶೀಲನೆ ಮಾಡಬೇಕು. ಇದರ ಜೊತೆಗೆ ಆ ಕಲಾವಿದರಿಗೆ ಇನ್ನೊಂದು ಕೋಟಿನೋ ಎರಡು ಕೋಟಿನೋ ದುಡ್ಡು ಇಟ್ಟು ಈ ವ್ಯಾಪ್ತಿಗೆ ತರುವ ಹಾಗೆ ಮಾಡಬೇಕೆಂದು ಹೇಳಿ, ತಾವು ಕಾನೂನು ಇಲಾಖೆಗೆ ಬಹಳ ಉದಾರವಾಗಿ ಸಹಾಯ ಮಾಡುತ್ತಿದ್ದೀರಿ. ನಾವು ಏನಾದರೂ ಸಣ್ಣ ಪುಟ್ಟ ಸಬ್ಸಿಡಿ ಕೊಡಿ ಎಂದರೆ ನೀವು ಎರಡು ಮೂರು ದಿವಸ ಕನ್‌ವಿನ್ಸ್ ಆಗುವುದಕ್ಕೆ ಸಮಯ ತೆಗೆದುಕೊಳ್ಳುತ್ತೀರಿ. ಇಲ್ಲಿ ನೋಡಿದರೆ, ನ್ಯಾಯಾಂಗದ ಅಧಿಕಾರಿಗಳ ಸಮ್ಮೇಳನಕ್ಕ 12 ಲಕ್ಷ ರೂ. ಏಕೆ ಕೊಡಬೇಕು? ನಾವು ಸಮ್ಮೇಳನ ಮಾಡುತ್ತೇವೆ ಕೊಡಿ, ಜ್ಯುಡಿಷಿಯರಿ ಡಿಮ್ಯಾಂಡ್‌ನ್ನು ನಾವು ಇಲ್ಲಿ ಪಾಸ್ ಮಾಡಿಲ್ಲವೆ? ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಅವರು ಮಾಡುವ ಈ ಕೆಲಸಗಳಿಗೆಲ್ಲಾ ನೀವು ಏಕೆ ಈ 12 ಲಕ್ಷ, 13ಲಕ್ಷ ರೂ. ಅವರ ಸಮ್ಮೇಳನಕ್ಕೆ ಕೊಡಬೇಕು? ಲೈಬ್ರರಿಗೆ 5 ಲಕ್ಷ

ರೂಪಾಯಿ, ಜಯಲಲಿತಾರವರ ವಿಶೇಷ ನ್ಯಾಯಾಲಯ ನಡೆಸುವುದಕ್ಕೆ 50 ಲಕ್ಷ ರೂಪಾಯಿ, ಮಾನವ ಹಕ್ಕುಗಳ ಆಯೋಗದ ಸ್ಥಾಪನೆಗಾಗಿ 200 ಲಕ್ಷ ರೂಪಾಯಿಗಳು. ಇನ್ನು ಶೀಘ್ರಗತಿ ನ್ಯಾಯಾಲಯ, ಇದು ನಿಮ್ಮದಲ್ಲ ಪ್ರೋಗ್ರಾಂ, ಇದು ಕೇಂದ್ರ ಸರ್ಕಾರದ್ದು. ಅವರು ಫಾಸ್ಟ್ ಟ್ರ್ಯಾಕ್ ಕೋರ್ಟ್‌ಗಳನ್ನು ಆರಂಭ ಮಾಡಬೇಕಾದ್ದು, ಫಂಡ್ ಮಾಡಬೇಕಾದ್ದು, ಎಲ್ಲೆಲ್ಲಿ ಕೇಸ್‌ಗಳು ಇದೆ ಎಂದು ನೋಡಬೇಕಾದ್ದು ಅವರು; ರೀಇಂಬರ್ಸ್ ಮಾಡಬೇಕಾದ್ದು, ಅವರು, ಇದಕ್ಕೆಲ್ಲಾ ನೀವು ಏಕೆ ವೆಚ್ಚ ಮಾಡುತ್ತೀರಿ? ಅವರಿಂದ ಏಕೆ ಹಣ ತರಿಸಿಕೊಳ್ಳುತ್ತಿಲ್ಲವೆಂದು ಐ ಡಿಮ್ಯಾಂಡ್ ರಿಪ್ಲೈ ಇದರ ಜೊತೆಗೆ ನಾವು ಹಾಗೂ ಮಾನ್ಯ ಎಸ್. ಎಸ್. ಪಾಟೀಲರು ಬಡಿದುಕೊಂಡೆವು. ಬಯಲು ಸೀಮೆ ಅಭಿವೃದ್ಧಿ ಕಡೆ ಸ್ವಲ್ಪ ನೋಡ್ರಿ ಪೆಂಡಿಂಗ್ ಬಿಲ್ ಸುಮಾರು 7 ಕೋಟಿ ರೂಪಾಯಿ ಇದೆ; ನಮಗೆ 5 ಕೋಟಿ 6 ಕೋಟಿರೂ. ಬಜೆಟ್ ಇಡುತ್ತೀರಿ, ನಾವು ಒಂದು ಮೀಟಿಂಗ್ ಹೋದರೆ ಅವರು ಹಳೆಯ ಬಿಲ್ ಪಾವತಿ ಮಾಡಬೇಕಾಗಿರುವುದು ಇಷ್ಟು ಇದೆ ಎಂದು ಬಿಲ್ ತೆಗೆದು ಇಟ್ಟರು. ಆ ಬೋರ್ಡ್‌ನ್ನು ಏಕೆ ಇಟ್ಟುಕೊಂಡಿದ್ದೀರಿ? ಆ ಬಿಲ್‌ಗಳನ್ನು ಕೊಡುವುದಕ್ಕೆ ನಾವು ಹೊಸದಾಗಿ ಕಮಿಟಿ ಸೇರಬೇಕೆ? ದಯಮಾಡಿ ಬಯಲು ಸೀಮೆಗೆ ದುಡ್ಡನ್ನು ಸ್ವಲ್ಪ ಜಾಸ್ತಿ ಮಾಡಬೇಕಾಗಿದೆ, ಇಲ್ಲದಿದ್ದರೆ ಆ ಬೋರ್ಡನ್ನು ರದ್ದು ಮಾಡಿ ಬಿಡಿ, ಸೇವಿಂಗ್ಸ್ ಆಗುತ್ತದೆ. ಅಂಥ ಕಡೆ ನೀವು ಏಕೆ ನೋಡುತ್ತಿಲ್ಲವೆಂದು ನಮಗೆ ಅರ್ಥವಾಗುತ್ತಿಲ್ಲ. ಇನ್ನು ಪಿಡಬ್ಲೂಡಿ ಬಗ್ಗೆ ಹೇಳುವುದಾದರೆ ತಾವು ಇದಕ್ಕೂ ಬಹಳ ಉದಾರವಾಗಿ ಕೊಟ್ಟಿದ್ದೀರಿ. ಆದರೆ ನಿಮ್ಮಲ್ಲಿ ಕೇಳುವುದು ಏನೆಂದರೆ, ಕಂಟ್ರಾಕ್ಟರ್ಸ್ ಬಿಲ್ಸ್ ಎಷ್ಟು ಇತ್ತು ಈವರೆವಿಗೂ ನೀವು ಅದನ್ನು ಕ್ಲಿಯರ್ ಮಾಡುವ ತೀರ್ಮಾನ ತೆಗೆದುಕೊಳ್ಳಲಿಲ್ಲ ಹೋದ ಸಲ ಬಜೆಟ್‌ನಲ್ಲಿ ಭಾಷಣ ಮಾಡುವಾಗ ಹೇಳಿದೆ. ನೀವು ಒಳ್ಳೆಯ ಫೈನಾನ್ಸ್ ಮಿನಿಸ್ಟರ್ ಅನ್ನಿಸಿ ಕೊಳ್ಳಬೇಕು, ಸಾಲಗಾರರಿಂದ ಕರ್ನಾಟಕವನ್ನು ಮುಕ್ತಮಾಡಿ ಕಂಟ್ರಾಕ್ಟರ್ಸ್ ಬಾಕಿಯಿಂದ ಕರ್ನಾಟಕವನ್ನು ಮುಕ್ತ ಮಾಡಿರಿ, 165 ಕೋಟಿ ರೂ. 170 ಕೋಟಿ ರೂ. ಇನ್ನೂ ನೀವು ಪೇಮೆಂಟ್ ಮಾಡಬೇಕಾಗಿದೆ, ಒಂದು ಕಡೆ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಪೇಮೆಂಟ್ ಮಾಡಬೇಕಾಗಿದೆ, ಇನ್ನೊಂದು ಕಡೆ ಪಿಡಬ್ಲ್ಯೂಡಿನಲ್ಲಿ ಮಾಡಬೇಕಾಗಿದೆ. ನಿಮಗೆ ಹಣ ಉಳಿಯುತ್ತಿತ್ತು, ನೀವು ಒಂದು ಸ್ಟೇಟ್‌ಮೆಂಟ್ ಮಾಡಿದಿರಿ, 'I can afford this ಅಂತ ಅದಕ್ಕೆ ನಾನು ಮಾತನಾಡುತ್ತೇನೆ. When you can afford this supplementary demand, ಅವರಿಗೂ ಏನಾದರೂ ಕೊಡಬೇಕಲ್ಲವೆ? ಐದಾರು ವರ್ಷ ಏಳೆಂಟು ವರ್ಷಗಳಿಂದ ಪೆಂಡಿಂಗ್ ಇಟ್ಟುಕೊಂಡು ಮನೆಗಳು ಹಾಳಾಗಿ ಹೋಗುತ್ತಿವೆ, 2 ಪರ್ಸೆಂಟ್ 3 ಪರ್ಸೆಂಟ್ ಬಡ್ಡಿ ತೆಗೆದುಕೊಂಡು ಅವರು ಗೌರ್ನಮೆಂಟಿನ ಕೆಲಸ ಮಾಡುತ್ತಾರೆ ಮಾನ್ಯ ಶ್ರೀನಿವಾಸ ಗೌಡರೇ ಇವತ್ತು ನಿಮ್ಮ ಗೌರ್ನಮೆಂಟ್ ಸ್ಕೀಂ 3054, 5054, ಈ ಯಾವುದೇ ಹೆಡ್ ಕೆಳಗೆ ಕಂಟ್ರಾಕ್ಟರ್ಸ್‌ಗೆ ಬಾ ಎಂದರೆ ಅವರು ಬರುವುದಿಲ್ಲ. ನಬಾರ್ಡ್ ವರ್ಕ್ಸ್ ಕೊಡಿಸುತ್ತೀರಾ ? ಸಿಆರ್‌ಎಫ್ ವರ್ಕ್ಸ್ ಕೊಡಿಸುತ್ತೀರಾ? ಚೀಫ್ ಮಿನಿಸ್ಟರ್‌ರವರ ಸಡಕ್ ಯೋಜನೆಯಲ್ಲಿ ದುಡ್ಡು ಕೊಡಿಸುತ್ತೀರಾ? ನಾವು ಬರುತ್ತೇವೆ, ರೆಗ್ಯೂಲರ್ ಗ್ರ್ಯಾಂಟ್‌ಗೆ ನಾವು ಬರುವುದಿಲ್ಲ ಅನ್ನುತ್ತಾರೆ. ಗೌರ್ನಮೆಂಟ್‌ಗೆ ನಾಚಿಕೆ ಆಗಬೇಕಲ್ಲಾ, ನಮ್ಮ ಹೆಡ್ ಆಫ್ ಆಕೌಂಟ್ ಕೆಳಗೆ ಒಬ್ಬ ಕಂಟ್ರಾಕ್ಟರ್ ಕೆಲಸಕ್ಕೆ ಬರುವುದಿಲ್ಲ, ಟೆಂಡರ್ ಹಾಕಲಿಕ್ಕೆ ಬರುವುದಿಲ್ಲ

ಎನ್ನುವಂಥ ಸ್ಥಿತಿಯನ್ನು ನಿರ್ಮಾಣ ಮಾಡಿಕೊಂಡಿದ್ದೇವೆ. ತಾವು ಆ ಕಡೆ ಸ್ವಲ್ಪ ಕಂಟ್ರಾಕ್ಟರ್‌ಸ್‌ದು ಪೆಂಡಿಂಗ್ ಬಿಲ್ ಹಣ ಬಿಡುಗಡೆ ಮಾಡಲಿಕ್ಕೆ ನೋಡಬೇಕು ಮತ್ತೆ ನಮ್ಮ ಮಾನ್ಯ ಸಿಂಧ್ಯಾರವರ ಖಾತೆಗೆ ಇನ್ನೊಂದಿಷ್ಟು ದುಡ್ಡನ್ನು ನೀವು ಕೊಡಬೇಕು. ನಾವು ಕೇಳುತ್ತಲೇ ಇದ್ದೇವೆ, ಇಟ್ಟಿಗೆ ಫ್ಯಾಕ್ಟರಿಯವರಿಗೆ ಕೋಳಿ ಫಾರಂರವರಿಗೆ, ಏನಾದರೂ ಮಾಡಿ ಒಂದು ರಿಲೀಫ್ ಕೊಡಿ, ಗುಡಿ ಕೈಗಾರಿಕೆಗಳು ಏನು ಇವೆ ಅದನ್ನು ಸ್ವಲ್ಪ ಉಳಿಸಿ ಎಂದು ಕೇಳುತ್ತಲೇ ಇದ್ದೇವೆ. ಇದು ನಿಜವಾಗಿಯೂ ಹಳ್ಳಿ ಗಾಡಿನಲ್ಲಿದ್ದಂಥ ಸಣ್ಣ ಕೈಗಾರಿಕೆಗಳು ಇವತ್ತು ಹಾಳಾಗಿ ಹೋಗುತ್ತಿವೆ. ಆ ಕಡೆ ಇವತ್ತು ಹೆಚ್ಚಿನ ಆಸ್ಥೆ ವಹಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಅಧ್ಯಕ್ಷರೆ, ಈ ಪೂರಕ ಅಂದಾಜುಗಳು ಪ್ರತಿವರ್ಷ ಆಯವ್ಯಯ ಆದ ನಂತರ ಬರುತ್ತವೆ. ಒಂದು ಕಡೆ ಉಳಿತಾಯ, ಆಯವ್ಯಯ ಉಳಿತಾಯ ಎಂದು ಘೋಷಣೆ ಮಾಡಿ ಮಾನ್ಯ ಸಿದ್ಧರಾಮಯ್ಯನವರು ಒಳ್ಳೆಯ ಶಹಭಾಸ್‌ಗಿರಿಯನ್ನು ತೆಗೆದುಕೊಂಡಿದ್ದಾರೆ. ಮತ್ತೊಂದು ಕಡೆ ಇಲ್ಲಿ ಈಗ ಸೇರಿಸಿತಕ್ಕಂಥ ಹಣ ನೋಡಿದರೆ, ಆ ಉಳಿತಾಯ ಆಯವ್ಯಯಕ್ಕೆ ಪ್ರಾಮಾಣಿಕ ಅರ್ಥ ಬರುವುದಿಲ್ಲ. ಉಳಿತಾಯ ಎನ್ನುವುದಕ್ಕೇ ಅರ್ಥ ಬರುವುದಿಲ್ಲ ಇಲ್ಲಿ ಇದೆಲ್ಲಾ ಸೇರಿಸಿದಾಗ ಅವತ್ತೇ ಈ ಖರ್ಚುಗಳೆಲ್ಲವೂ ನಮಗೆ ಸಿಕ್ಕಿದ್ದರೆ, ಇದು ಉಳಿತಾಯವಾಗುತ್ತಿರಲಿಲ್ಲ. ಆದುದರಿಂದ, ಇದು ಸಾಮಾನ್ಯವಾಗಿ ಪ್ರತಿವರ್ಷ ಆಯವ್ಯಯ ಮುಗಿದ ಮೇಲೆ ಬರತಕ್ಕಂಥದ್ದು, ಇದನ್ನೇನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ. ಈ ಪೂರಕ ಅಂದಾಜುಗಳನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ. ಅನೇಕ ಸಂದರ್ಭಗಳಲ್ಲಿ ನಾನು ಮಾನ್ಯ ಸಿದ್ಧರಾಮಯ್ಯನವರ ಆಯವ್ಯಯವನ್ನು ಪ್ರಶಂಸೆ ಮಾಡಿದ್ದೇನೆ, ಹೊಗಳಿದ್ದೇನೆ, ಅವರ ದಕ್ಷತೆಯ ಬಗ್ಗೆ ಅಸಾರವಾದಂಥ ಗೌರವವನ್ನು ಇಟ್ಟುಕೊಂಡಿದ್ದೇವೆ. ಈ ರಾಜ್ಯಕ್ಕೆ ಅವರ ಸೇವೆ ನಿಜಕ್ಕೂ ಬಹಳ ಹೆಚ್ಚಿನದು, ಒಳ್ಳೆಯ ಸೇವೆ ಮತ್ತು ಕೆಲಸವನ್ನು ಮಾಡಿದ್ದಾರೆ. ಅದರ ಬಗ್ಗೆ ನಿರ್ವಿವಾದ ಅದರ ಬಗ್ಗೆ ಯಾರೂ ತಳ್ಳಿ ಹಾಕುವುದಕ್ಕೆ ಸಾಧ್ಯವಿಲ್ಲ. ಇಡೀ ರಾಜ್ಯದ ಜನ ಅವರ ಕೆಲಸವನ್ನು ಮೆಚ್ಚಿದ್ದಾರೆ, ಬಹುಶಃ ನನಗೆ ಅನ್ನಿಸುತ್ತದೆ ಇಡೀ ರಾಜ್ಯದ ಇತಿಹಾಸದಲ್ಲಿ ಹೆಚ್ಚಿನ ದಿನ ಹೆಚ್ಚಿನ ವರ್ಷ ಆಯವ್ಯಯವನ್ನು ಮಂಡಿಸಿದಂಥ ಕೀರ್ತಿ ಸಿದ್ಧರಾಮಯ್ಯನವರಿಗೆ ಸಲ್ಲುತ್ತದೆ. ಅದರಲ್ಲಿ ಬೇರೆ ಮಾತೇನಿಲ್ಲ. ಆದರೆ ಮುಂದೆ ಅವರು ಆಯವ್ಯಯ ಮಂಡಿಸುತ್ತಾರೋ ಬಿಡುತ್ತಾರೋ ನಮಗೆ ಗೊತ್ತಿಲ್ಲ. ಮುಂದಿನ ರಾಜಕೀಯ ಯಾವ್ಯಾವ ದಿಕ್ಕು ತಲುಪುತ್ತದೋ ನನಗಂತೂ ಗೊತ್ತಿಲ್ಲ. ಅಥವಾ ಅವರೇ ಆಯವ್ಯಯವನ್ನು ಮಂಡಿಸತಕ್ಕಂಥ ಕಾಲ ಬದಲಾವಣೆಯಾದರೂ ಆಗಬಹುದು. ಅದನ್ನು ನಾನು ಹೇಳುವುದಕ್ಕೆ ಸಾಧ್ಯವಿಲ್ಲ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು, ಶ್ರೀ ಎನ್. ವೈ. ಗೋಪಾಲಕೃಷ್ಣರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಈ ಪರಿಸ್ಥಿತಿಯಲ್ಲಿ ಏನೇನು ಆಗುತ್ತದೆಂದು ನಾವು ಈಗ ತಕ್ಷಣ ನಿರ್ಧಾರ ಮಾಡುವುದಕ್ಕೆ ನನ್ನ ಕೈಯಿಂದ ಸಾಧ್ಯವಿಲ್ಲ. ರಾಜಕೀಯ ಪರಿಸ್ಥಿತಿಗಳು, ರಾಜಕೀಯ ನಿರ್ಧಾರಗಳು, ಯಾವ್ಯಾವ ರೀತಿ ಉದ್ಭವಿಸುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ನೀವೇ ಮುಂದೆ ಆಯವ್ಯಯ ಮಂಡಿಸತಕ್ಕಂಥ ಪರಿಸ್ಥಿತಿ ಬಂದರೂ ಬರಬಹುದು. ಅಂದರೆ ಇನ್ನೊಂದು

ವರ್ಷದಲ್ಲಿ ನಮಗೆ ಒಂದು ಆಶೋತ್ತರ ಇದೆ. ಪರಿಸ್ಥಿತಿ ಹೀಗೆ ಇರುತ್ತೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ತಾವು ಇವತ್ತಿನ ಪರಿಸ್ಥಿತಿಯಲ್ಲಿ ನಿರ್ವಿವಾದವಾಗಿ ಬಹಳ ಅತ್ಯಂತ ಪ್ರಾಮಾಣಿಕವಾಗಿ ಹೇಳುವುದಾದರೆ, ಒಬ್ಬ ಒಳ್ಳೆಯ ಅರ್ಥ ಸಚಿವರಾಗಿ ಈ ರಾಜ್ಯಕ್ಕೆ ಸೇವೆ ಸಲ್ಲಿಸಿದ್ದೀರಿ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ವಾಟಾಳ್‌ರವರೆ, ಇದು ಪೂರಕ ಅಂದಾಜಿನಲ್ಲಿದೆಯೇ?

ಶ್ರೀ ಜೆ. ಸಿ. ಮಾಧುಸ್ವಾಮಿ : ಅದಕ್ಕೆ ಪೂರಕವಾಗಿ ಮಾತನಾಡುತ್ತಿದ್ದಾರೆ.

ಶ್ರೀ ಎಸ್. ಎಸ್. ಪಾಟೀಲ್ : ಇದು ಪೂರಕ ಅಂದಾಜಿನಲ್ಲಿ ಇದೆಯೇ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಎಸ್. ಎಸ್. ಪಾಟೀಲ್‌ರವರೆ,

ಶ್ರೀ ಜೆ. ಸಿ. ಮಾಧುಸ್ವಾಮಿ : ನಿಮಗೆ ಜೀರ್ಣವಾಗುವುದಿಲ್ಲ. . . .

ಶ್ರೀ ವಾಟಾಳ್ ನಾಗರಾಜ್ : ನೋಡಿ ಕೆಲವರಿಗೆ ಈ ಮಾತು ಹಿಡಿಸುವುದಿಲ್ಲ ನನಗೆ ಗೊತ್ತು ಅಪಥ್ಯ ಏನೂ ಮಾಡುವುದಕ್ಕಾಗುವುದಿಲ್ಲ, ಕೆಲವರಿಗೆ ಕೆಲವು ಔಷಧಿ ಹಿಡಿಸುತ್ತದೆ, ಆದರೆ ನಿಮಗೆ ಎಂಥೆಂಥ ರೋಗಗಳಿವೆ ನನಗಂತೂ ಗೊತ್ತಿಲ್ಲ. ಈ ಔಷಧಿ ನಿಮಗೆ ಹಿಡಿಸುವುದಿಲ್ಲ; ನನಗೆ ಅದು ಗೊತ್ತು. ಕೆಲವು ಸಾರಿ ಇದು ನಿಮಗೆ ಹಿಡಿಸುತ್ತದೆ, ಕೆಲವು ಸಾರಿ ನಿಮಗೆ ಹಿಡಿಸುವುದಿಲ್ಲ, ಅಪಥ್ಯ ಅಂದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಇವೆಲ್ಲಾ ಅನುಕೂಲ ಸಿಂಧು ಮತ್ತೆ ಸಮಯ ಸಾಧಕತನ, ಇವು ನಮ್ಮ ರಾಜಕಾರಣ ಅಂದರೆ ಸಮಯ ಸಾಧಕತನ; ಇತ್ತೀಚಿನ ದಿನಗಳಲ್ಲಿ ರಾಜಕಾರಣ ಅಂದರೆ ಏನು ಗೊತ್ತೇ ಉಪಾಧ್ಯಕ್ಷರೆ? ಸಮಯ ಸಾಧಕತನ. ಪಕ್ಕದಲ್ಲಿ ಕುಳಿತಿರುತ್ತೇವೆ ನಾನು ಮಾನ್ಯ ಮಾಧುಸ್ವಾಮಿಯವರು, ಯಾವ ಗಳಿಗೆಯಲ್ಲಿ ಕುರ್ಚಿಗೆ ಕೈ ಕೊಡುತ್ತಾರೋ ನನಗೆ ಗೊತ್ತಿಲ್ಲ. ಗೊತ್ತೇ ಆಗುವುದಿಲ್ಲ. . ಅಂದರೆ ಮಾನ್ಯ ಮಾಧುಸ್ವಾಮಿಯವರನ್ನು ಕುರಿತು ನಾನು ಮಾತನಾಡುತ್ತಿಲ್ಲ, ಇದು ಉದಾಹರಣೆ ಕೊಡುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರುವುದು ಪತ್ರಿಕೆಯಲ್ಲಿ ಬಂತು. ನಾವೆಲ್ಲಾ ನಿಮ್ಮ ಹಿಂದೆ ಇರುತ್ತೇವೆಂದೂ ಕಾಂಗ್ರೆಸ್ ಮುಖಂಡರು ಹೇಳಿದಾಗ, ಅವರು ದಯಮಾಡಿ ನೀವು ಹಿಂದೆ ಇರಬೇಡಿ, ಜೊತೆಗೆ ಇರಿ, ಹಿಂದೆ ಇದ್ದು ನೀವು ಏನೇನು ಮಾಡುತ್ತಿರೋ ಎಂಬ ಭಯ ನನಗೆ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಆದುದರಿಂದ, ಇವತ್ತಿನ ಪರಿಸ್ಥಿತಿಯಲ್ಲಿ ರಾಜಕಾರಣ ಅದೇ ಪರಿಸ್ಥಿತಿಯಲ್ಲಿದೆ ಅದನ್ನು ನಾವು ತಳ್ಳಿ ಹಾಕುವುದಕ್ಕೆ ಸಾಧ್ಯವೇ ಇಲ್ಲ. ಇವತ್ತು ಸಮಯಸಾಧಕ ಯಾರು ಇರುತ್ತಾರೆ ಅವರೇ ಮುಂದೆ, ಇತ್ತೀಚಿನ ದಿನಗಳಲ್ಲಿ ಇತ್ತೀಚಿನ ಪರಿಸ್ಥಿತಿಯಲ್ಲಿ ಮುಖಂಡರಾಗುತ್ತಾರೆ. ಅದನ್ನು ರಾಜ್ಯದ ಜನ ನಿರ್ಧಾರ ಮಾಡುತ್ತಾರೆ ನಾನು ತೀರಾ ಅದಕ್ಕೆ ಜಾಸ್ತಿ ಹೋಗದೆ, ಈ ಪೂರಕ ಅಂದಾಜುಗಳ ಬಗ್ಗೆ ಬರುವಾಗ, ಒಂದು ವಿಷಯವನ್ನು ಆಗಲೇ ಮಾನ್ಯ ಮಾಧುಸ್ವಾಮಿಯವರು ಹೇಳಿದರು, ಕೋಳಿ ಸಾಕಾಣಿಕೆ ಮತ್ತು ಅಭಿವೃದ್ಧಿ, ಇದಕ್ಕೆ 69 ಲಕ್ಷ ನಮ್ಮದು 14 ಲಕ್ಷ, ಸೇರಿಸಿ ನಿವ್ವಳ, ಇದು ಒಳ ಹರಿವು ನಾವು 14 ಲಕ್ಷ ಕೊಡಬೇಕು ಎನ್ನುವ ಮಾತು. . ಈ ಕೋಳಿ ಇದು ಯಾವುದು ಬರೀ ಮಳವಳ್ಳಿ ಪ್ರಾದೇಶಿಕ ಕೋಳಿ, ಇದರಲ್ಲಿ ಏನು ವಿಶೇಷ? ಮಳವಳ್ಳಿ

ಪ್ರಾದೇಶಿಕ ಕೋಳಿ ಇದು ಕರ್ನಾಟಕ ಯಾವ ಮೂಲೆಯಲ್ಲಿ ಇಲ್ಲದೇ ಇರತಕ್ಕಂಥ ಬಹಳ ರುಚಿಯಾದ ಕೋಳಿಯೇ ಅಥವಾ ಈ ಕೋಳಿಯಿಂದ ಯಾವ ಶಕ್ತಿ ಬರುತ್ತದೆ?

ಶ್ರೀ ಕೆ. ಶ್ರೀನಿವಾಸ ಗೌಡ : ಮಳವಳ್ಳಿ ಕೋಳಿ ರುಚಿ, ಬನ್ನೂರು ಕುರಿ ರುಚಿ, ಇವರಿಗೆ ಏಕೆ ಎಂಬುದು ನನ್ನ ಬಾಧೆ. ಅದರ ಬಗ್ಗೆ ನಮಗೆ ಕೇಳಿದರೆ, ಮಳವಳ್ಳಿ ಕೋಳಿ ರುಚಿ ಏನು, ಹಳ್ಳಿಗಳಲ್ಲಿರುವ ನಾಟಿ ಕೋಳಿ ರುಚಿ ಏನು ಬನ್ನೂರು ಕುರಿ ರುಚಿ ಎನು, ಎಂದು ನಾವು ಹೇಳಬಹುದು. ನಿಮಗೆ ನಮ್ಮ ರುಚಿನೇ ಮೆಲುಕು ಹಾಕುವಂಥ ಪರಿಸ್ಥಿತಿ ಏಕೆ ಬಂತು?

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಸಿದ್ಧರಾಮಯ್ಯನವರಿಗೆ ಏನು ರುಚಿ ಎಂದು ನಾವು ಅದನ್ನೇ ಕೇಳುವುದು. . .

ಶ್ರೀ ಕೆ. ಶ್ರೀನಿವಾಸಗೌಡ : ನಾವು ಅದನ್ನೇ ಹೇಳುತ್ತಿರುವುದು, ಅದಕ್ಕೆ ಏಕೆ ನಾವು ತಿನ್ನುವಂಥ ಮಾಂಸಕ್ಕೆ ನಿಮಗೆ ಏಕೆ ಇಷ್ಟೊಂದು ಆಸೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಶ್ರೀನಿವಾಸಗೌಡರವರು ನೀವು ಎಲ್ಲರೂ ಸ್ನೇಹಿತರು, ನೀವು ಎಲ್ಲಾ ಮಳವಳ್ಳಿ ಕೋಳಿ ತಿನ್ನುವವರು, ಬನ್ನೂರು ಕುರಿ ತಿನ್ನತಕ್ಕಂಥವರು. ನಮ್ಮ ಸ್ನೇಹಿತರನ್ನು ನಾನು ನೇರವಾಗಿ ಪ್ರಶ್ನೆ ಕೇಳುತ್ತೇನೆ, ಈ ಮಳವಳ್ಳಿ ಪ್ರಾದೇಶಿಕ ಕೋಳಿಯ ಅಭಿವೃದ್ಧಿಗೆ ಇಲ್ಲಿರತಕ್ಕಂಥ ವಿಶೇಷ ಏನು? ಇದರಲ್ಲಿ ತಿಳಿಸಿಲ್ಲ, ತಾವು ಸ್ವಲ್ಪ ಹೇಳಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಶ್ರೀನಿವಾಸಗೌಡರವರೆ, ಆಗಲೇ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು, ಶತಶತಮಾನಗಳಿಂದ ಮಾನ್ಯ ಶ್ರೀನಿವಾಸಗೌಡರವರು ತಿಂದಿದ್ದಾರೆ, ಇನ್ನು ಸಾಕು, ಇನ್ನು ಮುಂದೆ ನಾವು ತಿನ್ನುತ್ತೇವೆಂದು ಮಾನ್ಯ ವಾಟಾಳ್‌ರವರು ತೀರ್ಮಾನ ಮಾಡಿದ್ದಾರೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಶತಮಾನಗಳ ಹಿಂದೆ ನಿಜವಾಗಿ ನಾನ್ ವೆಜಿಟೇರಿಯನ್ ಇದ್ದಂಥವರು ಬ್ರಾಹ್ಮಣರು, ನೀವಲ್ಲ. ದಕ್ಷಿಣ ಭಾರದಲ್ಲಿದಂಥ ಎಲ್ಲಾ ಶೈವೇಟ್ಸ್ ವೆಜಿಟೇರಿಯನ್ ಆಗಿದ್ದರು. ನೀವು ಈಗ ತಿನ್ನುವುದನ್ನು ಕಲಿತುಕೊಂಡು ಶತಮಾನದಿಂದ ತಿನ್ನುತ್ತಿದ್ದೇವೆಂದು ಸುಮ್ಮನೆ ಏಕೆ ಮಾತನಾಡುತ್ತೀರಿ? ಶ್ರಾದ್ಧದಲ್ಲಿ ಒಂದೊಂದು ದಿವಸ ಒಂದೊಂದು ಭಕ್ಷ್ಯ ಇಟ್ಟುಕೊಂಡು ಶ್ರಾದ್ಧ ಮಾಡುತ್ತಿದ್ದರು. ಆದ್ದರಿಂದ ಅವರು ನಿಜವಾದ ಮಾಂಸಹಾರಿಗಳು. ನೀವೇಕೆ ಇದನ್ನು ತಲೆಯ ಮೇಲೆ ಎಳೆದುಕೊಳ್ಳುತ್ತೀರಿ?

ಶ್ರೀ ಕೆ. ಎಸ್. ಈಶ್ವರಪ್ಪ : ಇದು ನೂರಕ್ಕೆ ನೂರು ಸುಳ್ಳು. ಅವರು ಎಂದೆಂದಿಗೂ ಯಜ್ಞ, ಯಾಗ ಎಂಬ ಪವಿತ್ರ ಕಾರ್ಯ ಮಾಡತಕ್ಕಂಥ ಸಂದರ್ಭದಲ್ಲಿ ಎಂದಿಗೂ ಕೂಡ ಅವರು ತಿಂದಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ : ಇದನ್ನು ನಾನು ಚಾಲೆಂಜ್ ಮಾಡುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ರಮೇಶ್ ಕುಮಾರ್‌ರವರು ಆಕಾಶದಿಂದ ಏನು ಇಳಿದು ಬಂದಿದ್ದಾರೆಯೇ?

ಶ್ರೀ ಜೆ. ಸಿ. ಮಾಧುಸ್ವಾಮಿ : ಬ್ರಾಹ್ಮಣರು ನಾನ್‌ವೆಜಿಟೇರಿಯನ್ ಕಮ್ಯೂನಿಟಿಯಿಂದ ಬಂದಿರತಕ್ಕಂಥವರು, ನೀವಲ್ಲ ನೀವು ಈಶ್ವರಪ್ಪ ಎಂದು ಹೆಸರು

ಇಟ್ಟುಕೊಂಡು ಈ ರೀತಿಯಾಗಿ ತಿಳಿದುಕೊಂಡಿದ್ದೀರಾ? ಹಳೆಯ ಶಾಸನಗಳನ್ನು ಓದಿ, ಅವರು ನಾನ್‌ವೆಜಿಟೇರಿಯನ್ ತಿನ್ನುತ್ತಿದ್ದರು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮೊದಲು ಯಜ್ಞವನ್ನು ಮಾಡುತ್ತಿದ್ದವರಾ ತಿನ್ನುವುದಕ್ಕೆ ಅಭ್ಯಾಸ ಮಾಡಿಕೊಂಡಿದ್ದರು. ಯಜ್ಞ ಮಾಡುವಂಥ ಸಂದರ್ಭದಲ್ಲಿ ಹಸುಗಳನ್ನು ಬಲಿ ಕೊಡುತ್ತಿದ್ದರು, ಹಸು, ಕುದುರೆ ಮತ್ತು ಒಂಟೆಗಳನ್ನು ಯಜ್ಞ ಸಂದರ್ಭದಲ್ಲಿ ಬಲಿ ಕೊಟ್ಟು ಅದನ್ನು ತಿನ್ನತಕ್ಕಂಥ ಜನ ಅವರಾಗಿದ್ದರು. ಯಜ್ಞಕ್ಕೆ ಬಲಿಕೊಟ್ಟಂಥ ಹಸು ಪವಿತ್ರವಾದುದೆಂದು ಯಜ್ಞ ಯಾಗಗಳು ಹೇಳುತ್ತವೆ. ಅದು ನಮ್ಮ ದೇಶದ ಪರಂಪರೆಯಾಗಿದೆ. ಹಾಗಾಗಿ ಶುದ್ಧರಾಗಿರತಕ್ಕಂಥ ನಾವೆಲ್ಲರೂ ಕೊನೆಯಲ್ಲಿ ತಿನ್ನುವುದಕ್ಕೆ ಕಲಿತುಕೊಂಡೆವು. ಬ್ರಾಹ್ಮಣರು ಮೊದಲು ಅವರೇ ಮಾಂಸವನ್ನು ತಿನ್ನುತ್ತಿದ್ದರು.

ಶ್ರೀ ಎಸ್. ಎಸ್. ಪಾಟೀಲ್ : ಇಲ್ಲಿ ವಚನ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಯಾರಿಗೆ ಬ್ರಾಹ್ಮಣರು ಎಂದು ಹೇಳಬೇಕು ಮತ್ತು ಯಾರಿಗೆ ಲಿಂಗಾಯಿತರು ಎಂದು ಹೇಳಬೇಕೆಂದು ಹೇಳಿದ್ದಾರೆ. ಆದ್ದರಿಂದ, ನೀವು ಅವರಿಗೆ ಏಕೆ ಬ್ರಾಹ್ಮಣರು ಎಂದು ಹೇಳುವುದಕ್ಕೆ ಹೋಗುತ್ತೀರಿ ಮತ್ತೆ ಅವಗಿಗೇಕೆ ಲಿಂಗಾಯಿತರೆಂದು ಹೇಳುವುದಕ್ಕೆ ಹೋಗುತ್ತೀರಿ? ನೀವೇನಾದರೂ ಕನಸು ಕಟ್ಟಿ ಹೇಳಿದರೆ ಅದು ಆಗುವುದಿಲ್ಲ. ಯಾರಿಗೆ ಬ್ರಾಹ್ಮಣರು ಎಂದು ಹೇಳಬೇಕೆಂದು ಹೇಳಿದ್ದಾರೆ. ಮತ್ತೆ ಯಾರಿಗೆ ಲಿಂಗಾಯಿತರೆಂದು ಹೇಳಬೇಕೆಂದೂ ಸಹ ಹೇಳಿದ್ದಾರೆ. ಹಾಗೆಯೇ ಯಾರಿಗೆ ಇನ್ನೊಬ್ಬರು ಎಂದು ಹೇಳಬೇಕೆಂದೂ ಕೂಡ ಹೇಳಿದ್ದಾರೆ. ಆದ್ದರಿಂದ ಅವರಿಗೆ ಮಾತ್ರ ಹೇಳಿ. ಆ ಪ್ರಕಾರ ಅವರು ನಡೆದರೆ ಲಿಂಗಾಯಿತರು ಹೌದು, ಬ್ರಾಹ್ಮಣರು ಕೂಡ ಹೌದು. ಇಲ್ಲದಿದ್ದರೆ ಅವರು ಅದಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಳವಳ್ಳಿ ಕೋಳಿಯನ್ನು ಈಗ ವೆಜಿಟೇರಿಯನ್ ಕೋಳಿ ಆಗಿ ಪರಿವರ್ತನೆ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈ ಸದನದಲ್ಲಿ ಇದಕ್ಕೆ ಯಾರಾದರೂ ಸಮರ್ಥರಿದ್ದರೆ ಅವರು ಮಾನ್ಯ ರಮೇಶ್ ಕುಮಾರ್‌ವರು ಮಾತ್ರ. ಇದಕ್ಕೆ ಅವರು ಸಮರ್ಥರು ನಿಜ ಏಕೆಂದರೆ, ಅವರು ಎಲ್ಲಾ ತರಹದ ರುಚಿಯನ್ನು ನೋಡಿರತಕ್ಕಂಥ ಮಹಾ ಬ್ರಾಹ್ಮಣರು. ಎಲ್ಲಾ ತರಹದ ಮಾಂಸದ ರುಚಿಯನ್ನು ನೋಡಿರತಕ್ಕಂಥ ಒಬ್ಬ ಅಗ್ರಗಣ್ಯ ಅತ್ಯಂತ ಅಥಾರಿಟಿ, ಬಹಳ ಸಮರ್ಥರು ಯಾರಾದರೂ ಈ ಸದನದಲ್ಲಿದ್ದರೆ ಅವರು ಮಾನ್ಯ ರಮೇಶ್‌ಕುಮಾರ್. ಆದ್ದರಿಂದ, ಅವರು ಮಹಾ ಬ್ರಾಹ್ಮಣರು. ಅವರು ಇದರ ಬಗ್ಗೆ ಹೇಳುವುದಾದರೆ ಅವರಿಗೆ ನಾನು ಅವಕಾಶ ಕೊಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ನಾಗರಾಜ್‌ರವರೆ, ನೀವು ಎಲ್ಲಿ ನೋಡಿದ್ದೀರಿ?

ಶ್ರೀ ಜೆ. ಸಿ. ಮಾಧುಸ್ವಾಮಿ : ಜೊತೆಯಲ್ಲಿಯೇ ಇವರಿಬ್ಬರೂ ಇರುತ್ತಾರೆ. ಆದ್ದರಿಂದ, ಜೊತೆಯಲ್ಲಿಯೇ ಇರುವವರನ್ನು ಎಲ್ಲಿ ನೋಡಿದ್ದೀರಾ ಎಂದು ಕೇಳಿದರೆ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಾವು ಜೊತೆಯಲ್ಲಿಯೇ ಇದ್ದರೂ ಕೂಡ ಅವರು ತಿನ್ನುವುದನ್ನು ಎಲ್ಲವನ್ನೂ ನಾನು ನೋಡಿದ್ದೇನೆ. ಅದನ್ನೆ ನಾನು ನಿಮಗೆ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ಎಲ್ಲಿ ನೋಡಿದ್ದೀರಿ?

ಶ್ರೀ ಕೆ. ಎಸ್. ಈಶ್ವರಪ್ಪ : ಒಬ್ಬರು ಮಾನ್ಯ ರಮೇಶ್ ಕುಮಾರ್ ತಿಂದಿರತಕ್ಕಂಥದ್ದನ್ನು ನೋಡಿಬಿಟ್ಟು ಇಡೀ ಬ್ರಾಹ್ಮಣ ಸಮಾಜವೇ ತಿನ್ನುತ್ತದೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಇದು ಪೂರ್ಣ ತಪ್ಪು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಈಶ್ವರಪ್ಪನವರೆ, ಇವರೇ ನೋಡಿದ್ದಾರೆ. ನಮ್ಮ ಜೊತೆ ಯೂರೋಪ್‌ಗೆ ಬಂದಾಗ ಅಲ್ಲಿ ದನ, ಕುರಿ, ಕೋಳಿ ಮತ್ತೆಲ್ಲವನ್ನೂ ತಿನ್ನುವಾಗ ನೋಡಲಿಲ್ಲವೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನಿಜ ಅವೆಲ್ಲವನ್ನೂ ಮಾನ್ಯ ಶ್ರೀರಾಮರೆಡ್ಡಿಯವರು ತಿಂದಿದ್ದಾರೆ, ಇದನ್ನು ಅವರು ನೋಡಿದ್ದಾರೆ ಮತ್ತೆ ನಾನೂ ಕೂಡ ನೋಡಿದ್ದೇನೆ.

ಶ್ರೀ ನೆ. ಲ. ನರೇಂದ್ರ ಬಾಬು : ಮಾನ್ಯ ಉಪಾಧ್ಯಕ್ಷರೆ, ಮಹಾ ಬ್ರಾಹ್ಮಣ ಎಂದು ಅವರು ಹೇಳುತ್ತಿದ್ದಾರೆ. ವೇದದಲ್ಲಿ ಏನು ಹೇಳಲಾಗಿದೆ ಎಂದರೆ,

"ಜನ್ಮನಃ ಜಾಯತೇ ಶೂದ್ರ :
ಕರ್ಮಣಾಂ ದ್ವಿಜಃ
ಆಚಾರ್ಯಣಾಂ ವಿಪ್ರಃ
ಬ್ರಹ್ಮಜ್ಞಾನೇನಂ ಬ್ರಾಹ್ಮಣ :"

ಆದ್ದರಿಂದ, ಹೀಗೆ ಎಲ್ಲಾ ಹೇಳಿದರೆ ಬ್ರಾಹ್ಮಣ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇವರು ಬಹಳ ಅಸಾಧ್ಯರು. ಅವರೊಬ್ಬರು ನಮ್ಮ ಅಥಾರಿಟಿ, ನಮ್ಮ ಕೈಗೆ ಸಿಕ್ಕಿದರು.

ಶ್ರೀ ನೆ. ಲ. ನರೇಂದ್ರ ಬಾಬು : ನಿಮ್ಮಷ್ಟು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಒಬ್ಬರು ಇದ್ದರೆಂದು ನಾನು ತಿಳಿದುಕೊಂಡಿದ್ದ. ಆದರೆ ಅವರು ಒಬ್ಬರು ಸಮರ್ಥರು ಸಿಕ್ಕಿದರು, ಬಹಳ ಸಂತೋಷ. ಇವರೊಬ್ಬರೇ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ನನಗೆ ಇಬ್ಬರು ಆದರು, ಒಳ್ಳೆಯದಾಯಿತು. ಅವರು ಬ್ರಾಹ್ಮಣರು ಅಲ್ಲ. ಶೂದ್ರರೆಂಬುದು ನನಗೆ ಗೊತ್ತಿದೆ. ಆದರೆ ಅವರಲ್ಲಿ ಬ್ರಾಹ್ಮಣ್ಯತೆ ಇದೆ.

ಶ್ರೀ ಕೆ. ಆರ್. ರಮೇಶ್ ಕುಮಾರ್ : ಮಾನ್ಯ ವಾಟಾಳ್‌ನಾಗರಾಜ್‌ರವರೆ, ನೀವು ಈಗ ಬ್ರಾಹ್ಮಣರೆಂದು ಹೇಳಿ ಅದೊಂದು ಜಾತಿ ಎಂದು ತಿಳಿದುಕೊಂಡಿದ್ದಿರಿ. ಆದರೆ, ಬ್ರಾಹ್ಮಣರು ಒಂದು ಜಾತಿಯಲ್ಲ. ಅದು ಒಂದು ವರ್ಗ ನಾವು ಹಿಂದಿನ ಇತಿಹಾಸಕ್ಕೆ ಹೋದರೆ ಇದರ ಬಗ್ಗೆ ಹೇಳುವುದಕ್ಕೆ ಮೂರ್‍ನಾಲ್ಕು ದಿವಸ ಬೇಕಾಗುತ್ತದೆ. ಪ್ರಾರಂಭದಲ್ಲಿ ಆ ಬ್ರಾಹ್ಮಣರ ವರ್ಗ ಏನಿತ್ತು, ನಾನು ಅದರ ಒಂದು ಪರಂಪರೆಯನ್ನು ಉಳಿಸಿಕೊಂಡಿದ್ದೇನೆ. ಉಳಿದವರೆಲ್ಲಾ ಜಾತಿಯವರಾಗಿದ್ದು, ಅವರು ಮಡಿಮಂತಿಕೆಯಲ್ಲಿದ್ದಾರೆ. ನಾನು ನಿಜವಾದ ಬ್ರಾಹ್ಮಣನಾಗಿರುವುದರಿಂದ ಅವತ್ತಿನ ದಿವಸ ಇರತಕ್ಕಂಥದ್ದೆಲ್ಲವನ್ನೂ ಇವತ್ತೂ ಕೂಡ

ಉಳಿಸಿಕೊಂಡಿದ್ದೇನೆ. ಕಳೆದುಕೊಂಡಂಥವರು ಬುದ್ಧಿವಂತರಾಗಿ ನನ್ನ ಹಿಂದೆ ಬಂದರೆ ಅವರಿಗೂ ಸಹ ಮೋಕ್ಷ ಸಿಗುತ್ತದೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ವಾಟಾಳ್ ನಾಗರಾಜ್‌ರವರೆ, ದಯವಿಟ್ಟು ನಾನು ಹೇಳುವುದನ್ನು ಕೇಳಿ,

ಶ್ರೀ ವಾಟಾಳ್ ನಾಗರಾಜ್ : ಮಹಾ ಋಷಿ ವಿಶ್ವಾಮಿತ್ರ ಕಾಲದಿಂದ ಇವರು ಬಂದವರು ಅದನ್ನು ಒಪ್ಪಿಕೊಳ್ಳೋಣ. ಅದನ್ನೇ ತಾವು ಉಳಿಸಿಕೊಂಡು ಬಂದಿದ್ದೀರಿ. ವಿಶ್ವಾಮಿತ್ರ ಯಾಗ ಯಜ್ಞ ಮಾಡಿ ಆತ ಅವತ್ತು ಏನು ತಿಂದ, ಅಲ್ಲಿಂದ ನೀವು ಬಂದಿದ್ದೀರಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ವಿಶ್ವಾಮಿತ್ರ ಒರಿಜಿನಲ್ ಬ್ರಾಹ್ಮಣನಲ್ಲ. ಆತ ಕ್ಷತ್ರಿಯ. ಆದ್ದರಿಂದ, ಇವರು ಕ್ಷತ್ರಿಯ ವಂಶದಿಂದ ಬಂದವರು. ವಿಶ್ವಾಮಿತ್ರನ ವಂಶದಿಂದ ಬಂದವರು ನಾವು.

ಶ್ರೀ ವಾಟಾಳ್ ನಾಗರಾಜ್ : ಒಪ್ಪಿಕೊಳ್ಳೋಣ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ವಾಟಾಳ್ ನಾಗರಾಜ್‌ರವರೆ, ಅವರು ಬ್ರಾಹ್ಮಣರ ಬಗ್ಗೆ, ಅಂದರೆ, ಯಾರಿಗೆ ಬ್ರಾಹ್ಮಣರು ಎಂದು ಹೇಳಬೇಕೆಂದು ಹೇಳಿದರು. ವೀರಶೈವ ಎಂದು ಯಾರಿಗೆ ಹೇಳಬೇಕೆಂದೂ ಕೂಡ ಬಸವಣ್ಣನವರು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಅವರು ಹೇಳತಕ್ಕಂಥದ್ದನ್ನು ಕೇಳುವುದಕ್ಕೆ ನಾವು ತಯಾರಿಲ್ಲ. ನೀವು ಈಗ ಕೋಳಿ ಮಾಂಸದ ಬಗ್ಗೆ ಮಾತನಾಡುವುದಾದರೆ ಮಾತನಾಡಿ. ಬಸವಣ್ಣನವರ ವಚನ ಕೇಳುವುದಕ್ಕೆ ನಾವು ಹೋಗುವುದಿಲ್ಲ.

ಶ್ರೀ ಎಸ್. ಎಸ್. ಪಾಟೀಲ್ : ನಾನು ಹೇಳುವುದನ್ನು ಸ್ವಲ್ಪ ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನಾನು ಕುಳಿತುಕೊಂಡಿಲ್ಲ. ದಯವಿಟ್ಟು ಅವರು ಮಾತನಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ನೀವು ಕೋಳಿ ಬಗ್ಗೆ ಮಾತನಾಡುವುದಾದರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ : ಅದರ ಬಗ್ಗೆ ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ . ನಿಮಗೆ ಅವಕಾಶ ಕೊಟ್ಟಾಗ ಮಾತನಾಡಿ.

ಶ್ರೀ ಎಸ್. ಎಸ್. ಪಾಟೀಲ್ : ಕೋಳಿ, ಕುರಿ ತಿನ್ನುವ ಬಗ್ಗೆ ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ದಯವಿಟ್ಟು ನಿಮಗೆ ಅವಕಾಶ ಬಂದಾಗ ಮಾತನಾಡಿ.

ಶ್ರೀ ಎಸ್. ಎಸ್. ಪಾಟೀಲ್ : ನೀವು ಈಗ ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಬ್ರಾಹ್ಮಣರ ಬಗ್ಗೆ ಅವರು ಚೆನ್ನಾಗಿ ಹೇಳಿದ್ದಾರೆ. ಯಾರು ಬ್ರಾಹ್ಮಣರು ಆಗಬೇಕೆಂದು ಅವರು ಈಗಾಗಲೇ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನಾನು ಓಲ್ಡ್ ಆಗಿಲ್ಲ. ನಿಮ್ಮ ಸಹಾಯ ನೆರವು ನಮಗೆ ಸದ್ಯಕ್ಕೆ ಬೇಕಾಗಿಲ್ಲ.

ಶ್ರೀ ಎಸ್. ಎಸ್. ಪಾಟೀಲ್ : ಈಗ ಮಾನ್ಯ ಈಶ್ವರಪ್ಪನವರು ಏನು ಹೇಳಿದರೆಂದರೆ. . . .

ಶ್ರೀ ವಾಟಾಳ್ ನಾಗರಾಜ್ : ನೀವೆಲ್ಲಾ ಪಕ್ಷಾಂತರಿಗಳು ಆದ್ದರಿಂದ, ನಿಮ್ಮ ಬಗ್ಗೆ ನಮಗೆ ಒಳ್ಳೆಯ ಅಭಿಪ್ರಾಯ ಇಲ್ಲ.

ಶ್ರೀ ಎಸ್. ಎಸ್. ಪಾಟೀಲ್ : ಅದು ಆಯಿತು. ಮಾನ್ಯ ಈಶ್ವರಪ್ಪನವರು ಏನು ಹೇಳಿದರು? ಪಕ್ಷಾಂತರದ ಬಗ್ಗೆ ಚರ್ಚೆ ಬೇಕಾದರೆ ಇಡಿ. ವೀರಶೈವರೆಂದು ಯಾರಿಗೆ ಹೇಳಬೇಕೆಂದು ಬಸವಣ್ಣನವರು ಹೇಳಿದ್ದಾರೆ.

" ವೀರಶೈವನಾದೊಡೆ ಪರಸತಿ ಪರಧನವ ಮುಟ್ಟದಂತಿರಬೇಕು. ಎಂದೂ ಪರಹಿಂಸೆ ಎಸಗದಿರಬೇಕು."

ಶ್ರೀ ಜೆ. ಸಿ. ಮಾಧುಸ್ವಾಮಿ : ನೀವು ಲಿಂಗಾಯಿತರೆ ಅಥವಾ ವೀರಶೈವರೆ ಯಾವುದು ಎಂದು ಮೊದಲು ಹೇಳಿ, ಅನಂತರ ವೀರಶೈವರು ಯಾರು ಎಂಬುದನ್ನು ಹೇಳಿ.

ಶ್ರೀ ಎಸ್. ಎಸ್. ಪಾಟೀಲ್ : ಒಡಲಳಿದರೂ ಹಿಡಿದಾಚಾರವ ಬಿಡದಿರಬೇಕೆಂದು ಅವರಿಗೆ ಹೇಳುತ್ತಾರೆ. ಈಗ ಲಿಂಗಾಯಿತರು ಮತ್ತು ಬ್ರಾಹ್ಮಣರು ತಿನ್ನುವುದಕ್ಕೆ ಪ್ರಾರಂಭ ಮಾಡಿದ್ದರಿಂದ ನಮಗೆ ಈಗ ಸಿಗುವುದಿಲ್ಲವೆಂದು ಹೇಳಿದರು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಿಮಗೆ ಲಿಂಗವೂ ಇಲ್ಲ, ಆಚಾರವೂ ಇಲ್ಲ. ಸುಮ್ಮನೆ ಕುಳಿತುಕೊಂಡು ಕುಲಗೆಟ್ಟು ಆ ಕಡೆ ಹೋಗಿಬಿಟ್ಟಿದ್ದೀರಿ.

ಶ್ರೀ ಎಸ್. ಎಸ್. ಪಾಟೀಲ್ : ಕೊಲ್ಲುವವನು ಮಾದಿಗ, ಹೊಲಸು ತಿನ್ನುವವನು ಹೊಲೆಯ ಎಂದು ಅವರು ಹೇಳಿದ್ದಾರೆ. ಆದ್ದರಿಂದ ತಿನ್ನುವವರೆಲ್ಲಾ ಲಿಂಗಾಯಿತರು ತಿನ್ನದೆ ಇರುವವರೆಲ್ಲರೂ . . . .

ಶ್ರೀ ಕೆ. ಆರ್. ರಮೇಶ್‌ಕುಮಾರ್ : ಮಾನ್ಯ ಉಪಾಧ್ಯಕರೆ, ಉಡುಪಿ ಕಡೆ ಹರಿಕಥೆ ಮಾಡುತ್ತಾರೆ ದಾಸರು, ಕಥೆ ಮಾಡುವಾಗ ಏನು ಹೇಳುತ್ತಾರೆಂದರೆ, ದ್ವಾದಶಿ ದಿವಸ ಬದನೆಕಾಯಿ ತಿನ್ನಬಾರದೆಂದು ಹೇಳುತ್ತಾರೆ. ದ್ವಾದಶಿ ಇದ್ದ ಮಾರನೆಯ ದಿವಸ ಅವರ ಮನೆಗೆ ಹೋದಾಗ ಬದನೆ ಕಾಯಿ ಮಾಡಿದ್ದರಂತೆ. ಯಾರೋ ನಮ್ಮಂಥವರು ಹೋಗಿ, ನೆನ್ನೆ ದಿವಸ ಹರಿಕಥೆ ಮಾಡುವಾಗ ದ್ವಾದಶಿ ದಿವಸ ಬದನೆಕಾಯಿ ತಿನ್ನಬಾರದೆಂದು ಹೇಳಿದಿರಿ ಎಂದು ಕೇಳಿದ್ದಕ್ಕೆ, ಕಥೆ ಹೇಳುವುದಕ್ಕೆ, ಬದನೆಕಾಯಿ ತಿನ್ನುವುದಕ್ಕೆ ಎಂದು ಹೇಳಿದರಂತೆ. ಆದ್ದರಿಂದ, ಇವರು ಅವರಾಗಿದ್ದಾರೆ. ಇವರು ವೀರಶೈವರ ಬಗ್ಗೆ ಹೇಳುವುದಕ್ಕೆ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪಾಟೀಲ್‌ರವರೆ, ತಾವು ಬಸವಣ್ಣನವರ ವಚನವನ್ನು ಬಹಳ ಚೆನ್ನಾಗಿ ಅಭ್ಯಾಸ ಮಾಡಿದ್ದೀರಿ. ತಾವು ಬಸವಣ್ಣನವರ ವಚನ ಕೇಳಿ ತಾವು ಭಾಷಣವನ್ನು ಪ್ರಾರಂಭ ಮಾಡುತ್ತೀರಿ. ನನಗೆ ನಿಮ್ಮ ಬಗ್ಗೆ ನಿಜಕ್ಕೂ ಮೆಚ್ಚಿಗೆ ಇದೆ.

" ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ

"ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ"

ಇದಕ್ಕೆ ನೀವು ಬದ್ಧರಾಗಿದ್ದೀರಾ? ಇಲ್ಲಿರತಕ್ಕಂಥ ಎಷ್ಟು ಜನ ಇದಕ್ಕೆ ಬದ್ಧರಾಗಿದ್ದಾರೆ?

ಶ್ರೀ ಎಸ್. ಎಸ್. ಪಾಟೀಲ್ : ಇದಕ್ಕೆ ನಾನು ಮಾತ್ರ ಬದ್ಧನಾಗಿದ್ದೇನೆ. ನೀವು ಆಗದೇ ಇರಬಹುದು ನಾನು ಬದ್ಧನಾಗಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಸುಮ್ಮನೆ ಕೇವಲ ಬಸವಣ್ಣನವರ ವಚನ ಹೇಳಿ ಏನು ಪ್ರಯೋಜನ ಬಂತು? ಅದಕ್ಕೆ ಅರ್ಥವಿಲ್ಲವೆಂದು ನಾನು ಹೇಳುತ್ತೇನೆ. ವಚನಗಳನ್ನು ಹೇಳತಕ್ಕಂಥದರಲ್ಲಿ ಅರ್ಥವಿಲ್ಲ. ಮತ್ತೆ ಇದು ಒಳ್ಳೆಯ ಸೂಚನೆಯಲ್ಲ. ನಿಜವಾಗಿ ಹೇಳಬೇಕಾದರೆ, ಪ್ರಾಮಾಣಿಕವಾಗಿ ಆ ವಚನಕ್ಕೆ ಬದ್ಧರಾಗಿರತಕ್ಕಂಥದ್ದು ಆಗಬೇಕು. ಸುಮ್ಮನೆ ಎಲ್ಲಾ ಸಂದರ್ಭಗಳಲ್ಲಿ ವಚನಗಳು ಹೇಳುವುದು ಮತ್ತು ಅದಕ್ಕೆ ಅರ್ಥ ಹೇಳುತ್ತೇನೆಂದು ಕುಳಿತುಕೊಂಡರೆ ಏನೂ ಪ್ರಯೋಜನವಾಗುವುದಿಲ್ಲ. ಇದನ್ನು ಬಿಟ್ಟು ಮುಂದಕ್ಕೆ ಹೋಗುತ್ತೇನೆ. ನಾನು ಏಕೆ ಮಾನ್ಯ ಸಿದ್ಧರಾಮಯ್ಯನವರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆಂದರೆ, ಇದು ಹಾಸ್ಯವಾಗಿ ಚರ್ಚೆ ಆಗಿರಬಹುದು. ವಸ್ತು ಸ್ಥಿತಿಯನ್ನು ನಾನು ತಮಗೆ ಹೇಲುತ್ತಿದ್ದೇನೆ. ಇದರ ಬಗ್ಗೆ ಸ್ವಲ್ಪ ವಿವರಣೆ ಕೊಡಬೇಕು. ಮಳವಳ್ಳಿ ಕೋಳಿ ಈ ರೀತಿ ಇದೆ, ಇದು ಇಡೀ ರಾಜ್ಯದಲ್ಲಿ. . . .

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) : ಮಳವಳ್ಳಿ ಕೋಳಿಯಲ್ಲ. ದಯವಿಟ್ಟು ಸ್ವಲ್ಪ ಕೇಳಿ. ಕೋಳಿ ಸಾಕಾಣಿಕೆ ಕೇಂದ್ರ ಮಳವಳ್ಳಿಯಲ್ಲಿದೆ ಎಂದು ಹೇಳಲಾಗಿದೆ. ಆದ್ದರಿಂದ ಅದು ಮಳವಳ್ಳಿ ಕೋಳಿಯಲ್ಲ.

ಶ್ರೀ ಆರಗ ಜ್ಞಾನೇಂದ್ರ : ಇದನ್ನು ತಾವು ಮೊದಲೇ ಹೇಳಿದ್ದರೆ ಅರ್ಧ ಗಂಟೆ ವೇಸ್ಟ್ ಆಗುತ್ತಿರಲಿಲ್ಲ.

ಶ್ರೀ ಸಿದ್ಧರಾಮಯ್ಯ : ಮಳವಳ್ಳಿಯಲ್ಲಿರತಕ್ಕಂಥ ಕೋಳಿ ಸಾಕಾಣಿಕೆ ಕೇಂದ್ರ. ಮಳವಳ್ಳಿಯಲ್ಲಿ ಬಂಡೂರು ಕುರಿ ಇದೆ. ಅದು ಬನ್ನೂರು ಅಲ್ಲ. ಅದು ಬಂಡೂರು ಜಾತಿ ಕುರಿ. ಆದರೆ ಅದು ಬನ್ನೂರು ಆಗಿದೆ. ಕಿರುಗಾವಲ್‌ನಲ್ಲಿ ಒಂದು ಕುರಿ ಫಾರಂ ಇದೆ. ಇಲ್ಲಿ ವಿಶೇಷವಾಗಿ ಬಂಡೂರು ಜಾತಿಯ ಕುರಿಗಳ ತಳಿಗಳನ್ನು ಅಲ್ಲಿ ಮೀಟ್‌ಗೋಸ್ಕರ ಅಭಿವೃದ್ಧಿ ಮಾಡಲಾಗುತ್ತದೆ. ಮತ್ತೆ ಈ ಕುರಿಯ ಮಾಂಸವೂ ಕೂಡ ಒಂದು ವೆರೈಟಿಯಾಗಿದೆ. ಬಹುಶಃ ಭಾರತ ದೇಶದಲ್ಲಿ ಅತ್ಯಂತ ರುಚಿಕರವಾದಂಥ ಯಾವುದಾದರೂ ಕುರಿ ಮಾಂಸ ಇದ್ದರೆ ಅದು ಬಂಡೂರು ಕುರಿ ಮಾಂಸ. ಇದು ನಿಮಗೆ ಗೊತ್ತಾಗುವುದಿಲ್ಲ. ತಂದಿಲ್ಲ ಏನಿಲ್ಲ ನಿಮಗೆ ಕೋಳಿ ಬಗ್ಗೆ ಕೂಡ ಗೊತ್ತಿಲ್ಲ. ಕೋಳಿ ಬಗ್ಗೆ ಗೊತ್ತಿದ್ದರೆ, ಮಳವಳ್ಳಿ ಕೋಳಿಗೆ ತಾವು ಬರುತ್ತಿರಲಿಲ್ಲ. ಕೋಳಿ ಸಾಕಾಣಿಕೆ ಕೇಂದ್ರ ಮಳವಳ್ಳಿಯಲ್ಲಿದೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ಮಳವಳ್ಳಿಯಲ್ಲಿ ಕೋಳಿ ಸಾಕಾಣಿಕೆ ಕೇಂದ್ರ ಇರುವುದರಿಂದ, ಇದು ಮಳವಳ್ಳಿ ಕೋಳಿ ಎಂದು ಅರ್ಥ ಬರುತ್ತದೆ.

ಶ್ರೀ ಕೆ. ಆರ್. ರಮೇಶ್ ಕುಮಾರ್ : ಮಾನ್ಯ ನಾಗೇಗೌಡರ ಜೊತೆ ತಾವು ತಿಂದಿರಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನಾಗೇಗೌಡರ ಜೊತೆ ನೀವು ತಿಂದಿದ್ದೀರಿ. ನಾನು ಎಲ್ಲಿ ತಿಂದಿದ್ದೇನೆ? ನೀವು ಒಳ್ಳೆಯ ಕತೆಯನ್ನು ಹೇಳುತ್ತಿದ್ದೀರಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಾಗೇಗೌಡರ ಜೊತೆಯಲ್ಲಿ ಅತಿ ಹೆಚ್ಚು ಸಂಪರ್ಕ ಇದ್ದದ್ದು ಇವರಿಗೆ ಮಾತ್ರ. ಆದ್ದರಿಂದ, ಅವರ ಜೊತೆ ಇವರು ಏನೇನು ತಿಂದರು ಮತ್ತು ಏನೇನು ಮಾಡಿದ್ದಾರೆ ಎನ್ನತಕ್ಕಂಥದ್ದು ನಮಗೆ ಗೊತ್ತಿಲ್ಲ. ಇವರು ಯಾವಾಗಲೂ ನಾಗೇಗೌಡರ ಜೊತೆಯಲ್ಲಿಯೇ ಇರುತ್ತಿದ್ದರು.

ಶ್ರೀ ಜೆ. ಸಿ. ಮಾಧುಸ್ವಾಮಿ : ಯಾರ್‍ಯಾರು ಎಲ್ಲೆಲ್ಲಿ ತಿಂದಿದ್ದಾರೆಂದು ಇದಕ್ಕೆ ಶ್ರೀಮತಿ ನಾಗಮಣಿಯವರು ಉತ್ತರ ಹೇಳಬೇಕು. ಏಕೆಂದರೆ ಬೇಯಿಸಿ ಹಾಕಿರುವವರು ಅವರು ಅಲ್ಲವೇ?.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅವರೆಲ್ಲಿ ಬೇಯಿಸಿ ಹಾಕದ್ದಾರೆ ಇವರೆಲ್ಲಾ ಅವರಿಗೆ ಕಾಣದಂತೆ ಹೋಗಿ ತಿನ್ನುತ್ತಿದ್ದರು.

ಉಪಾಧ್ಯಕ್ಷರು : ಈಗ ಅವರು ಹೇಳಿ ಬಿಡಲಿ, ಅದನ್ನು ಮುಗಿಸಿ ಬಿಡಿ.

ಶ್ರೀಮತಿ ಎಂ. ಕೆ. ನಾಗಮಣಿ : ಇಲ್ಲಿರುವಂಥ ಮಾನ್ಯ ಸದಸ್ಯರಲ್ಲಿ ಮುಕ್ಕಾಲು ಜನ ತಿಂದಿರುವುದನ್ನು ನಾನು ನೋಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ತಿಂದಿರುವುದನ್ನು ಅವರು ನೋಡಿಲ್ಲ.

ಶ್ರೀಮತಿ ಎಂ. ಕೆ. ನಾಗಮಣಿ : ಸದನದಲ್ಲಿ ಸುಳ್ಳು ಸುಳ್ಳು ಹೇಳಬಾರದು. ಮಾನ್ಯ ವಾಟಾಳ್ ನಾಗರಾಜ್‌ರವರು ತಿಂದಿರುವುದನ್ನು ನಾನು ಯಾವತ್ತೂ ನೋಡಿಲ್ಲ.

ಶ್ರೀ ಕೆ. ಆರ್. ರಮೇಶ್ ಕುಮಾರ್ : ನೀವು ನಿಮ್ಮ ಮನೆಯಲ್ಲಿ ವಾಟಾಳ್ ನಾಗರಾಜ್‌ರವರಿಗೆ ಗ್ರೇವಿ ಬಡಿಸಲಿಲ್ಲವೆ? ಪೀಸ್ ಇಲ್ಲ ಆದರೆ ಅವರಿಗೆ ಸಾರನ್ನು ಬಡಿಸಲಿಲ್ಲವೇ?

ಶ್ರೀಮತಿ ಎಂ. ಕೆ. ನಾಗಮಣಿ : ನಾನು ಮಾನ್ಯ ರಮೇಶ್ ಕುಮಾರ್‌ರವರು ಊಟ ಮಾಡಿರುವುದನ್ನು ನಾನು ನೋಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಹೋಗಲಿ ಬಿಡಿ, ಈ ಕೋಳಿ ಬಗ್ಗೆ ವಿಶ್ಲೇಷಣೆ ಮಾಡಿದಷ್ಟು ಬಹಳ ಜನ ಹೊರಗಡೆ ಹೊರಟು ಬಿಟ್ಟಾರು. ಏಕೆಂದರೆ ಸುಮ್ಮನೆ ಅದು ಸರಿಯಲ್ಲ. ಏಕೆಂದರೆ ಇಲ್ಲಿ ಇರುವವರೆಲ್ಲಾ ಬಹಳ ಜನ ಚಳಿಗಾಲವೆಂದು ಅದರ ರುಚಿಯ ಸಲುವಾಗಿ ಹೊರಗೆ ಹೋಗೋಣವೆಂದು ಹೊರಟು ಬಿಟ್ಟಾರು. ಆದ್ದರಿಂದ ನಾನು ಜಾಸ್ತಿ ಮುಂದಕ್ಕೆ ಹೋಗುವುದಿಲ್ಲ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇದರಲ್ಲಿ ಸರ್ಕಾರಿ ನೌಕರರಿಗೆ ಪ್ರಶಸ್ತಿಗಳು 18 ಲಕ್ಷ ರೂಪಾಯಿಗಳು. ಯಾವ ಪ್ರಶಸ್ತಿಗಳು ಯಾವಾಗ ಕೊಡುತ್ತಿದ್ದೀರಿ? ಅದು ಏನು ಪ್ರಶಸ್ತಿಗಳು ಎಂಬುದು ನನಗಂತೂ ಕಾಣುತ್ತಿಲ್ಲ. ಅದು ಏನು ಪ್ರಶಸ್ತಿ ಯಾವಾಗ ಕೊಡತಕ್ಕಂಥದ್ದು ಯಾರ್‍ಯಾರಿಗೆ ಪ್ರಶಸ್ತಿ ಕೊಟ್ಟಿರತಕ್ಕಂಥದ್ದು ಯಾವ ಉದ್ದೇಶಕ್ಕಾಗಿ ಆ ಪ್ರಶಸ್ತಿ ಇರತಕ್ಕಂಥದ್ದು, ಇದು ಪ್ರಶಸ್ತಿಗಳ ಬಗ್ಗೆ ನನಗೆ ಇನ್ನು ಅದರ ಬಗ್ಗೆ ಪ್ರಾಮಾಣಿಕವಾದಂಥ ಅರಿವು ಮೂಡಲಿಲ್ಲ. ಅದು ತಮಗೆ ಸೇರಿದ್ದು, ತಾವು ಉತ್ತರವನ್ನು ಕೊಡುವಾಗ ಹೇಳಬೇಕು. ಇನ್ನೂ ಸಾರ್ವಜನಿಕ ಉದ್ದಿಮೆಗಳು, ನೀವು ಆ ಉದ್ದಿಮೆಗಳನ್ನು ಉಳಿಸುವುದಕ್ಕಾಗುವುದಿಲ್ಲ. ಏಕೆಂದರೆ ನೀವು ಸಮರ್ಥರು, ನಾನು ಅದನ್ನು ಮೆಚ್ಚುತ್ತೇನೆ. ಈಗ ನೂತನ ವಿದ್ಯುತ್ ಕಾರ್ಖಾನೆ ಮೈಸೂರು ಲ್ಯಾಂಪ್ಸ್ ಇವೆಲ್ಲಾ ಕರ್ನಾಟಕದ ಚರಿತ್ರೆಯಲ್ಲಿ ಬರತಕ್ಕಂಥವುಗಳು. ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ. . . .

ಶ್ರೀ ಜೆ. ಸಿ. ಮಾಧುಸ್ವಾಮಿ : ಸರ್ ಅದೊಂದು ಸೀರಿಯಸ್ ಮ್ಯಾಟರ್, ಅಲ್ಲಿ 25 ಜನ ನೌಕರರು ಸೇರಿಕೊಂಡಿದ್ದಾರೆ. ಎನ್‌ಜಿಎಫ್ ನಲ್ಲಿ ಅವರಿಗೆ ಪಾಪ ಸಂಬಳವನ್ನು ಕೊಡುತ್ತಿಲ್ಲ. ಅವರೆಲ್ಲಾ ದಲಿತರು, ಅವರಿಗೆ ವ್ಯಾಲೆಂಟರಿ ರಿಟೈರ್‌ಮೆಂಟ್ ಈಗ ಸಂಬಳವನ್ನು ಕೊಡುತ್ತಿಲ್ಲ. ಸರ್ ಅವರ ಬಗ್ಗೆ ಏನಾದರೊಂದು ತೀರ್ಮಾನ ಮಾಡಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಸಿದ್ಧರಾಮಯ್ಯನವರೆ, ಪ್ರತಿದಿನ ಅವರು ಎಲ್ಲಾ ಎಂಎಲ್‌ಎ ಅವರ ಹತ್ತಿರ ಬರುತ್ತಾರೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ನಮಗೂ ದಿವಸ ಬಂದು ಬೇಡುತ್ತಾರೆ.

(ಗೊಂದಲ)

ಬಹಳ ಗಂಭೀರವಾದ ಸ್ಥಿತಿಗೆ ಬಂದು ಬಿಟ್ಟಿದ್ದಾರೆ. ಅವರು ತಮ್ಮ ಮಕ್ಕಳನ್ನು ಓದಿಸುವುದಕ್ಕಾಗುತ್ತಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅದರಲ್ಲಿ ಇರತಕ್ಕಂಥವರು ಎಲ್ಲರೂ ಎಸ್‌ಸಿ:ಎಸ್‌ಟಿ ಯವರು.

ಶ್ರೀ ಜೆ. ಸಿ. ಮಾಧುಸ್ವಾಮಿ: ಅವರು ಮಕ್ಕಳಿಗೆ ಶಾಲೆಯ ಫೀಸ್ ಕಟ್ಟುವುದಕ್ಕೆ ಸಾಲ ಮಾಡಿಕೊಂಡು ಕುಳಿತಿದ್ದಾರೆ. ಒಂದು 25 ಜನ ಇದ್ದಾರೆ ನೀವು ಅವರಿಗೆ ಸಂಬಳ ಕೊಡುವುದಕ್ಕಾಗುವುದಿಲ್ಲವೆಂದರೆ ಹೇಗೆ ಸರ್.

ಶ್ರೀ ಕೆ. ಎಸ್. ಈಶ್ವರಪ್ಪ : ಎಲ್ಲಾ ಶಾಸಕರ ರೂಂಗಳಿಗೆ ಪ್ರತಿದಿನ ಬರುತ್ತಾರೆ ಸರ್. ಅವರು ತಮ್ಮ ಹೆಂಡತಿ ಮಕ್ಕಳನ್ನು ಹೇಗೆ ಸಾಕಬೇಕು? ಸಂಬಳ ಕೊಡಿಸಿ ಎಂದು ಅವರು ಬೊಂಬಡ ಹೊಡೆಯುತ್ತಾರೆ. ದಯವಿಟ್ಟು ಉತ್ತರ ಕೊಡುವ ಸಮಯದಲ್ಲಿ ಕೊಡಬೇಕು.

ಶ್ರೀ ಜೆ. ಸಿ. ಮಾಧುಸ್ವಾಮಿ : ದಯವಿಟ್ಟು ನೀವು ಅವರಿಗೆ ಏನಾದರೊಂದು ಮಾಡಬೇಕು ಸರ್. ಅವರೆಲ್ಲಾ ಷೆಡ್ಯೂಲ್ ಕ್ಯಾಸ್ಟ್ ಅಧಿಕಾರಿಗಳು, ಅವರು ಊಟಕ್ಕಿಲ್ಲದೆ ಒದ್ದಾಡುತ್ತಿದ್ದಾರೆ.

ಶ್ರೀ ನೆ. ಲ. ನರೇಂದ್ರ ಬಾಬು : ಎನ್‌ಜಿಇಎಫ್ ನೌಕರರಿಗೆ ನೀವು ಪರ್ಯಾಯವಾದ ಕೆಲಸವನ್ನಾದರೂ ಕೊಡಿ, ಇಲ್ಲವೆಂದರೆ ಅವರದ್ದು ಸೆಟ್ಲಮೆಂಟಾದರೂ ಮಾಡಿ.

ಶ್ರೀ ಜೆ. ಸಿ. ಮಾಧುಸ್ವಾಮಿ : ಏನಾದರೊಂದು ಮಾಡಿ. ಸೆಟ್ಲ್‌ಮೆಂಟ್ ಮಾಡಿ. ಅಲ್ಲಿಯವರೆಗೆ ಸಂಬಳ ಕೊಡುತ್ತೇವೆಂದೂ ಅದು ಅಗ್ರಿಮೆಂಟ್, ಒಬ್ಬರಿಗೂ ಕೊಟ್ಟಿಲ್ಲ.

ಶ್ರೀ ಎಸ್. ರಾಜೇಂದ್ರನ್ : ಸ್ವಾಮಿ, 70 to 80% of them belong to Scheduled Caste .

ಶ್ರೀ ಕೆ. ಎಸ್. ಈಶ್ವರಪ್ಪ : ಸ್ವಾಮಿ, It is even more.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, You are suppressing them, oppressing them and making depressing them. ನೀವು ನಿಜವಾಗಲೂ ಅದನ್ನು ಖಂಡಿತವಾಗಿ ಮಾಡಿಕೊಡಲೇಬೇಕು. ಅವರನ್ನು ಕೇಳುವವರು ಯಾರೂ ಇಲ್ಲ. ಸದನ ಕೇಳಬೇಕು.

ಶ್ರೀ ಜೆ. ಸಿ. ಮಾಧುಸ್ವಾಮಿ : ದಯವಿಟ್ಟು ತಾವು ಏನಾದರೂ ಮಾಡಿ ಅವರಿಗೆ ಸಂಬಳ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಒಂದು ಕಾಲದಲ್ಲಿ ಈ ನೂತನ ವಿದ್ಯುತ್ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕವರು ತಮಗೆ ಗೊತ್ತಿರುವಂತೆ, 100ಕ್ಕೆ 100 ಜನ ಕನ್ನಡಿಗರು. ಸಚ್ಚಿದಾನಂದ ಮೂರ್ತಿ ಎಂದು ಆ ಕಾಲದಲ್ಲಿ ಐಎಎಸ್ ಅಧಿಕಾರಿ,

ಆ ಕಾರ್ಖಾನೆಯನ್ನು ಬೆಳೆಸಿ ಉಳಿಸುವುದಕ್ಕೆ ಪ್ರಯತ್ನ ಮಾಡಿದರು. ಕೆಲವು ಜನ ಐಎಎಸ್ ಅಧಿಕಾರಿಗಳು ಬಂದರು ಅದನ್ನು ನಾಶ ಮಾಡಿದರು. ಇವತ್ತು ನೂತನ ವಿದ್ಯುತ್ ಕಾರ್ಖಾನೆ ಉಪಕರಣಗಳು ಇಡೀ ಪ್ರಪಂಚದಲ್ಲಿ ಬಹಳ ಅತ್ಯಂತ ಬೇಡಿಕೆ ಇದ್ದಂಥದ್ದು, ಆದರೆ ಈಗ ಅದು ಮುಚ್ಚಿ ಕಾರ್ಮಿಕರು ಬೀದಿ ಪಾಲಾದರು. ಅದನ್ನು ತಮಗೆ ಹೇಳುತ್ತೇನೆ. ಆ ಕಾರ್ಮಿಕರ ಪರಿಸ್ಥಿತಿ ಕಣ್ಣೀರಿನ ಕಥೆ, ಅದರಲ್ಲಿ ಪರಿಶಿಷ್ಟ ಜನಾಂಗದವರು ಈಗಂತೂ ಅವರು ಬೀದಿಗೆ ಬಿದ್ದಿದ್ದಾರೆ. ಅವರ ಜೀವನ ಶೋಚನೀಯ. ಈ ಬಗ್ಗೆ ತಾವು ಚಿಂತನೆ ಮಾಡಬೇಕಾದದ್ದು ಒಂದನೆಯದು. ಸಾರ್ವಜನಿಕ ಉದ್ದಿಮೆಗಳ ಬಗ್ಗೆ ಎಲ್ಲೋ ಒಂದು ಕಡೆ ಒಂದು ನೀತಿ ಇರಬೇಕು. ಬರೀ ಮಾರುವುದೇ ಸರ್ಕಾರದ ಒಂದು ನೀತಿಯಾದರೆ ಅದು ಸರಿಯಾದದ್ದು ಅಲ್ಲ ಮಾರುವುದಾದರೆ ಯಾವಾಗ ಬೇಕದರೂ ಮಾರಬಹುದು. ಆಸ್ತಿ ಇದೆ, ಮೆಷನರಿಗಳು ಇವೆ, ಏನು ಬೇಕಾದರೂ ಮಾರಬಹುದು. ಆದ್ದರಿಂದ ತಮ್ಮಿಂದ ಇದನ್ನು ಶಕ್ತಿಯುತವಾಗಿ ನಿಲ್ಲಿಸುವುದಕ್ಕೆ ಒಂದು ಪ್ರಾಮಾಣಿಕವಾದಂಥ ಪ್ರಯತ್ನವಾಗಲಿಲ್ಲವೇ ಎನ್ನುವ ಬಗ್ಗೆ ನನಗೆ ನೋವು ಇದೆ. ಅದರ ಬಗ್ಗೆ ತಾವು ಯಾವ ರೀತಿ ತೀರ್ಮಾನ ಕೈಗೊಳ್ಳುತ್ತೀರಿ ಅದು ತಮಗೆ ಸೇರಿದಂಥ ವಿಚಾರಗಳು. ಈ ಪೂರಕ ಅಂದಾಜುಗಳಲ್ಲಿ ಇನ್ನು ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ನಾನು ತರುವುದಕ್ಕೆ ಬಹಳ ತೀವ್ರವಾದಂಥ ಪ್ರಯತ್ನವನ್ನು ಮಾಡುತ್ತೇನೆ. ಮಹದೇಶ್ವರ ಸಕ್ಕರೆ ಕಾರ್ಖಾನೆ ವಿವಾದ ಇತ್ಯರ್ಥ ಪಡಿಸುವ ಬಗ್ಗೆ ನ್ಯಾಯಾಲಯದ ಶುಲ್ಕ ಪಾವತಿಸಲು ಹೆಚ್ಚುವರಿಯಾಗಿ 74 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲು ಅಭಿಯಾಚನೆಯಲ್ಲಿ ಸೇರಿಸಲಾಗಿದೆ. ಮಹದೇಶ್ವರ ಸಕ್ಕರೆ ಕಾರ್ಖಾನೆ ಇದಕ್ಕೆ ಒಂದು ದೊಡ್ಡ ಇತಿಹಾಸ. ಈ ಸಕ್ಕರೆ ಕಾರ್ಖಾನೆ ಜನರಿಂದ ಕಟ್ಟಿರುವಂಥದ್ದು, ಜನರ ದೇಣಿಗೆಯಿಂದ ಕಟ್ಟಿರುವಂಥದ್ದು. ಇದನ್ನು ಯಾರೋ ಒಬ್ಬರು ಭಾರೀ ಬಂಡವಾಳಶಾಹಿಗೆ ಮಾರಿದ್ದು ಆಯಿತು. ಅವರು ಎಷ್ಟು ಹಣ ಕೊಟ್ಟರು ಏನಾಯಿತು ಎನ್ನುವುದು ಗೊತ್ತಾಗಲಿಲ್ಲ. ಅವರಿಗೆ ಆ ಕಾರ್ಖಾನೆಯನ್ನು ನಡೆಸುವುದಕ್ಕಾಗಲಿಲ್ಲ. ಮುಂದೆ ಆ ಕಾರ್ಖಾನೆ ಪರಿಸ್ಥಿತಿ ಏನು? ಅ ಕಾರ್ಖಾನೆಯ ಗತಿ ಏನು? ಆ ಮಹದೇಶ್ವರ ಸಕ್ಕರೆ ಕಾರ್ಖಾನೆ, ಯಾವುದೇ ಉದಾತ್ತವಾದಂಥ ಉದ್ದೇಶಕ್ಕಾಗಿ ಬಳಕೆಯಾದ ಕಾರ್ಖಾನೆಯನ್ನು ಮತ್ತೆ ಇವತ್ತು ತಮಿಳುನಾಡಿಗೆ ಮಾರತಕ್ಕಂಥ ಹುನ್ನಾರ ನಡೆದಿದೆ ಅದು ರೈತರ ಕಾರ್ಖಾನೆ, ರೈತರು ಕಟ್ಟಿದಂಥ ಕಾರ್ಖಾನೆ ಆ ಕಾರ್ಖಾನೆಯನ್ನು ಪರಭಾರೆ ಮಾಡುವಾಗ ಕರ್ನಾಟಕದ ಮಾಲೀಕರಿಗೆ ಕೊಡತಕ್ಕಂಥದ್ದು ಮತ್ತು ಚಾಮರಾಜ ನಗರದ ಸಮಗ್ರ ರೈತರಿಗೆ ಅನುಕೂಲವಾಗತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಹೇಳಿ ಅದರ ಬಗ್ಗೆ ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿ ಆ ವಿಚಾರವನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ಇದು ಅಲ್ಲದೆ ಈ ಬೆಂಗಳೂರು ಬೃಹತ್ ನೀರು ಸರಬರಾಜು ನನಗೆ ಅನಿಸುತ್ತದೆ. ಬೆಂಗಳೂರು ನಗರ ನೀರು ಸರಬರಾಜಿಗಾಗಿ ನಾವು ಏನು ಪ್ರಾಮಾಣಿಕವಾದ ಪ್ರಯತ್ನವನ್ನು ಪಡುತ್ತೇವೆ. ಅದೇ ರೀತಿ ನಾವು ಗ್ರಾಮಾಂತರ ಜನರಿಗೆ ಪಡುತ್ತಿಲ್ಲ. ಗ್ರಾಮಾಂತರ ಜನ ನೀರಿಗಾಗಿ ಎಷ್ಟು ಪರಿತಪಿಸುತ್ತಿದ್ದಾರೆ ಮಾನ್ಯ ಸಿದ್ಧರಾಮಯ್ಯನವರೆ, ತಮಗೆ ನಾನು ಹೇಳುತ್ತೇನೆ. ಮಾನ್ಯ ನಜೀರ್‌ಸಾಹೇಬರ ಕಾಲದಲ್ಲಿ ಕೊಳವೆಬಾವಿ ಬಂತು, ಇನ್ನು 10 ವರ್ಷದಲ್ಲಿ ಭೂಮಿಯಲ್ಲಿರತಕ್ಕಂಥ ಜಲ ಸಂಪೂರ್ಣವಾಗಿ ಉಳಿಯುವುದಿಲ್ಲ. ಮುಂದೇನು ಎನ್ನುವಾಗ ಖಾಯಂ ಆಗಿ ನೀರಿನ

ವ್ಯವಸ್ಥೆಯನ್ನು ಗ್ರಾಮೀಣ ಪ್ರದೇಶಗಳಿಗೆ ಕೊಡತಕ್ಕಂಥ ಒಂದು ವ್ಯವಸ್ಥೆಯ ಯೋಜನೆ ಎಲ್ಲಿ ನೀರಿನ ಉದ್ಭವವಾಗುತ್ತದೆ, ನದಿಯ ಪಾತ್ರ ಸಮುದ್ರಪಾತ್ರ ದಿಂದ ನೀರನ್ನು ತಂದು, ಸಮುದ್ರದ ನೀರನ್ನು ಸಿಹಿ ಮಾಡಿ ಜನರಿಗೆ ಹಂಚತಕ್ಕಂಥ ವ್ಯವಸ್ಥೆ ಮತ್ತು ನದಿಯಿಂದ ಬರತಕ್ಕಂಥದ್ದು, ಎಲ್ಲೆಲ್ಲಿ ಆ ನದಿಗಳ ಪಾತ್ರ ಇದೆ, ಪಕ್ಕದಲ್ಲಿರತಕ್ಕಂಥ ಪಟ್ಟಣಗಳು, ಗ್ರಾಮ ಪ್ರದೇಶಗಳು, ಇವೆಲ್ಲಕ್ಕೂ ನಾವು ಕೊಳವೆಯನ್ನು ಹಾಕಿ ನೀರನ್ನು ಕೊಡತಕ್ಕಂಥ ಒಂದು ಭಾರೀ ದೊಡ್ಡ ಯೋಜನೆ 1000 ಅಥವಾ 2000 ಕೋಟಿ ರೂಪಾಯಿಗಳಾಗಲಿ ಒಂದು ಭಾರೀ ಯೋಜನೆಯನ್ನು ಸರ್ಕಾರ ಮಾಡತಕ್ಕಂಥದ್ದು ಒಳ್ಳೆಯದು. ಆದರಿಂದ ಖಾಯಂ ಶಾಶ್ವತ ನೀರಿನ ಪರಿಹಾರ ಆಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ತಮಗೆ ತಿಳಿಸುತ್ತಿದ್ದೇನೆ. ಇದರ ಜೊತೆಗೆ ಹೆಲಿಕಾಪ್ಟರ್‌ಗಳ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಬಾಡಿಗೆ ಹೆಲಿಕಾಪ್ಟರ್‌ಗಳನ್ನು ತೆಗೆದುಕೊಳ್ಳುತ್ತೀರಿ, ಸರ್ಕಾರಿ ಹೆಲಿಕಾಪ್ಟರ್‌ಗಳನ್ನು ತೆಗೆದುಕೊಳ್ಳುತ್ತೀರಿ ನೀವು ಹೆಲಿಕಾಪ್ಟರ್‌ನಲ್ಲಿ ಓಡಾಡತಕ್ಕಂಥವರು ಈ ರಾಜ್ಯದ ರಸ್ತೆ ನಿಮ್ಮ ಗಮನದಲ್ಲಿಲ್ಲ. ನೀವು ಎಲ್ಲಾ ಮೇಲೆ ಓಡಾಡತಕ್ಕವರು ರಾಜ್ಯದ ರಸ್ತೆಗಳು ಹೇಗಿವೆ ಎಂದರೆ ಹೆರಿಗೆ ಆಸ್ಪತ್ರೆಗಳು ಬೇಕಾಗಿಲ್ಲ ಅಥವಾ ಕಾಲಿನ ಮೂಳೆ ಮುರಿದರೆ ಮೂಳೆ ರಿಪೇರಿ ಆಗಬೇಕಾದಗೂ ಈ ರಸ್ತೆಗಳಲ್ಲಿ ಓಡಾಡಿದರೆ ಸಾಕು. ನಮ್ಮ ಕರ್ನಾಟಕದ ಈ ರಸ್ತೆಯಲ್ಲಿ ಓಡಾಡಿದರೆ ಹೆರಿಗೆ ಆಗತಕ್ಕಂಥ ಹೆಂಗಸಿಗೆ ಹೆರಿಗೆ, ಆ ಹಳ್ಳಕೊಳ್ಳಗಳಿಗೆ ವಾಹನಗಳು ಬಿದ್ದಾಗಲೇ ಹೆರಿಗೆ ಆಗುತ್ತದೆ. ಹೆರಿಗೆಗೆ ಅನುಕೂಲವಾಗತಕ್ಕಂಥ ಒಂದು ಹೆರಿಗೆ ಆಸ್ಪತ್ರೆ ಇದ್ದಂತೆ ಈ ರಸ್ತೆಗಳು. ಈ ರಸ್ತೆಗಳಲ್ಲಿ ಓಡಾಡಿದರೆ ಕಾಲು ಮುರಿದವರಿಗೂ ಕಾಲು ಸರಿಹೋಗುತ್ತದೆ. ಇಷ್ಟು ಹದಗೆಟ್ಟಿರತಕ್ಕಂಥ ಈ ರಸ್ತೆಗಳು ನಿಮ್ಮ ಕಣ್ಣಿಗೆ ಕಾಣುವುದಿಲ್ಲ. ತಾವು ಹೆಲಿಕಾಪ್ಟರ್‌ನಲ್ಲಿ ಓಡಾಡುವುದರಿಂದ ಇದು ಆಗಿರತಕ್ಕಂಥದ್ದು, ಇದು ಸರಿಯಾದ ವರ್ಗ ಅಲ್ಲ ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ನಾನು ತರುತ್ತೇನೆ. ಬಹಳ ಪ್ರಾಮುಖ್ಯವಾಗಿ ಇನ್ನು ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ವೈದ್ಯಕೀಯ ಬಗ್ಗೆ ಈಗಾಗಲೇ ಅನೇಕರು ತಮಗೆ ಅನೇಕ ವಿಚಾರದಲ್ಲಿ ತಿಳಿಸಿದ್ದಾರೆ. ಈ ಆಸ್ಪತ್ರೆಗಳನ್ನು ಸಂಪೂರ್ಣವಾಗಿ ಸಮಗ್ರವಾಗಿ ಸರಿಪಡಿಸತಕ್ಕಂಥ ವಿಚಾರಗಳ ಬಗ್ಗೆ ಅನೇಕ ವಿಚಾರದಲ್ಲಿ ಈ ಸದನದಲ್ಲಿ ಚರ್ಚೆಯಾದರೂ ಸರ್ಕಾರಿ ಆಸ್ಪತ್ರೆಗಳು ಸಂಪೂರ್ಣವಾಗಿ ದುರಸ್ಥಿಯಾಗಲಿಲ್ಲ. ಒಳ್ಳೆಯ ಆಸ್ಪತ್ರೆಗಳು ಆಗಲಿಲ್ಲ. ಜನ ಸಾಮಾನ್ಯರ ಮಟ್ಟಿಗೆ ಆಸ್ಪತ್ರೆಗಳು ಬರಲಿಲ್ಲ. ಆಸ್ಪತ್ರೆಗಳು ಜನರಿಗೆ ವರವಾಗುವ ಬದಲು ಜನರಿಗೆ ಶಾಪವಾಗಿವೆ. ಆಸ್ಪತ್ರೆಗಳು ಜನರಿಗೆ ಸ್ವರ್ಗವಾಗುವ ಬದಲು ನರಕವಾಗಿವೆ. ಯಾವ ಆಸ್ಪತ್ರೆಗೆ ಹೋದರೂ ಅಲ್ಲಿ ನರಕದ ದೃಶ್ಯ ಇದೆಯೇ ಹೊರತು ಜನರಿಗೆ ಅನುಕೂಲವಾಗುವಂತಹ ದೃಶ್ಯ ಅಲ್ಲಿ ಇಲ್ಲವೇ ಇಲ್ಲ ಎನ್ನತಕ್ಕಂತಹ ಮಾತನ್ನು ತಮಗೆ ಹೇಳುತ್ತಿದ್ದೇನೆ. ಮತ್ತೊಂದು ಬಹಳ ಪ್ರಾಮುಖ್ಯವಾಗಿ ಮೈಸೂರಿನಲ್ಲಿ ನಡೆದಂತಹ 12ನೇ ರಾಜ್ಯಮಟ್ಟದ ನ್ಯಾಯಾಂಗ ಅಧಿಕಾರಿಗಳ ಸಮ್ಮೇಳನಕ್ಕೆ 12 ಲಕ್ಷರೂ ಖರ್ಚಾಗಿದೆ ಇದರ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಹೇಳಿದರು; ನಾನು ಅದನ್ನೇ ಹೇಳುತ್ತಿದ್ದೇನೆ ನ್ಯಾಯಾಂಗ ಇಲಾಖೆಯಲ್ಲಿ ಕಟ್ಟತಕ್ಕಂತಹ ಕಟ್ಟಡಗಳನ್ನು ಆರಂಭ ಮಾಡುವಾಗ ಶಾಸಕರುಗಳು ಹೋಗುವಹಾಗಿಲ್ಲ, ಶಾಸಕರುಗಳಿಗೆ ಅಲ್ಲಿ ಅವಕಾಶವಿಲ್ಲ, ಶಾಸಕರುಗಳು ಅಲ್ಲಿ ಅತಿಥಿಯಾಗಿ ಕುಳಿತುಕೊಳ್ಳುವ ಹಾಗಿಲ್ಲ. ಈ ಬಗ್ಗೆ ನಾನು ಮತ್ತು ಮಾನ್ಯ ಮಾಧುಸ್ವಾಮಿಯವರು ಉಚ್ಚ ನ್ಯಾಯಾಲಯದಲ್ಲಿಯೇ ಒಂದು ಅರ್ಜಿಯನ್ನು

ಸಲ್ಲಿಸಿದ್ದೇವೆ. ಯಾವ ಆಧಾರದ ಮೇಲೆ ನ್ಯಾಯಾಂಗ ಇಲಾಖೆಯ ಉದ್ಘಾಟನೆಯ ಸಮಾರಂಭದಲ್ಲಿ, ಶಂಕುಸ್ಥಾಪನೆಯ ಸಂದರ್ಭದಲ್ಲಿ ಏತಕ್ಕಾಗಿ ಶಾಸಕರುಗಳನ್ನು ಕೈ ಬಿಡುತ್ತಿರುವುದು? ಇದಕ್ಕೆ ಕಾರಣವೇನು? ತಾವು ಈ ಬಗ್ಗೆ ತೀವ್ರವಾಗಿ ಹೋರಾಟವನ್ನು ಮಾಡಬೇಕಾಗಿತ್ತು. ನನ್ನ ಪ್ರಕಾರವಾಗಿ ಹೇಳುತ್ತಿದ್ದೇನೆ, ಈ ಶಾಸಕರು ಎಂದರೆ ಏನಾಗಿದ್ದಾರೆ, ಇದರ ಬಗ್ಗೆ ನನಗೆ ಅರ್ಥವಾಗಲಿಲ್ಲ. ನ್ಯಾಯಾಧೀಶರರ ಕಣ್ಣುಗಳಲ್ಲಿ, ನ್ಯಾಯಾಧೀಶರ ದೃಷ್ಟಿಯಲ್ಲಿ ಶಾಸಕರು ಚುನಾಯಿತ ಪ್ರತಿನಿಧಿಗಳು ಶಾಸನಸಭೆ ಲೋಕಸಭೆಯ ಮೂಲಕ ಸಂವಿಧಾನದಲ್ಲಿ ನ್ಯಾಯಾಂಗ, ಶಾಸಕಾಂಗ, ಕಾರ್ಯಾಂಗ ಮತ್ತು ಪತ್ರಿಕಾರಂಗ ಈ ನಾಲ್ಕು ಕಂಬಗಳು ಆದರೆ ಶಾಸಕಾಂಗವನ್ನು ಕಡೆಗಾಣಿಸತಕ್ಕಂಥ ಒಂದು ಪರಿಸ್ಥಿತಿಗೆ ಏನು ಕಾರಣ? ಮುಂದಿನ ದಿನಗಳಲ್ಲಿ ಇಡೀ ಎಲ್ಲಾ ಶಾಸಕರುಗಳಿಗೂ ಅತ್ಯಂತ ಕಳಕಳಿಯಿಂದ ನಾನು ಮನವಿಯನ್ನು ಮಾಡುತ್ತೇವೆ. ಎಲ್ಲಿ ನ್ಯಾಯಾಂಗ ಇಲಾಖೆಯ ಕಟ್ಟಡಗಳು ಶಂಕುಸ್ಥಾಪನೆಯಾಗುತ್ತದೆ, ಅಲ್ಲಿಗೆ ಶಾಸಕರುಗಳನ್ನು ಕರೆಯಲಿಲ್ಲವೆಂದರೆ, ನ್ಯಾಯಾಧೀಶರಾಗಿರಬಹುದು, ಇಂದ್ರನೇ ಇರಬಹುದು, ಬ್ರಹ್ಮನೇ ಬರಬಹುದು ಉದ್ಘಾಟನೆ ಮಾಡಲಿಕ್ಕೆ ಅವಕಾಶವನ್ನು ಕೊಡಬಾರದು. ಶಾಸನಸಭೆಯಲ್ಲಿ ನಾನು ಇಡೀ ಶಾಸಕರಿಗೆ ಪಕ್ಷರಹಿತವಾಗಿ ಹೇಳುತ್ತೇನೆ. ನಾನು ಎಲ್ಲರ ಪರವಾಗಿ ಮಾತನಾಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರೆ ಒಂದು ನಿಮಿಷ ತಾಳಿ, ನೀವು ಆ ರೀತಿಯಾಗಿ ಮಾತನಾಡಬೇಡಿ ಸ್ವಲ್ಪ ಅಪಾಯವಾಗುತ್ತದೆ. ನಾನು ಹಿಂದಿನ ಸದನದಲ್ಲಿ ಆ ರೀತಿಯಾಗಿ ಮಾತನಾಡಿದೆ. ನನ್ನ ಕ್ಷೇತ್ರದ ತೀರ್ಥಹಳ್ಳಿ ಕೋರ್ಟಿನ ಉದ್ಘಾಟನೆ ನನ್ನನ್ನು ಕರೆಯಲಿಲ್ಲವೆಂದು ಸ್ವಲ್ಪ ಗಲಾಟೆಯಾಯಿತು. ಎಲ್ಲಾ ಸದಸ್ಯರುಗಳು ಸೇರಿದ್ದರು, ಮಾನ್ಯ ಸಚಿವರೂ ಕೂಡ ಆ ಸಮಾರಂಭಕ್ಕೆ ಬರಲಿಲ್ಲ, ನನ್ನನ್ನು ಕರೆಯಲಿಲ್ಲ ಎನ್ನುವ ಕಾರಣಕ್ಕಾಗಿ ಮಾನ್ಯ ಸಚಿರವರಾದ ಶ್ರೀ ಡಿ. ಬಿ. ಚಂದ್ರೇಗೌಡರೂ ಕೂಡ ಬರಲಿಲ್ಲ. ಅದರ ಬಗ್ಗೆ ಉಲ್ಲೇಖವಾಯಿತು, ಪತ್ರಿಕೆಗಳಲ್ಲಿ ಇದರ ಬಗ್ಗೆ ಪ್ರಚಾರವಾಯಿತು. ಆಮೇಲೆ ಒಬ್ಬ ಲಾಯರ್ ನನ್ನ ಮೇಲೆ ಪತ್ರಿಕೆಯಲ್ಲಿ ಮಾನನಷ್ಟವಾಗಿದೆ ಎಂದು ಹೇಳಿ ಕೇಸ್ ಹಾಕಿಕೊಂಡಿದ್ದಾನೆ. ಅದನ್ನೇ ಉಲ್ಲೇಖಮಾಡಿ ನನ್ನ ಮೇಲೆ ಒಂದು ಕೇಸ್ ರಿಜಿಸ್ಟರ್ ಆಗಿದೆ. ಕೋರ್ಟಿನ ಉದ್ಘಾಟನೆಗೆ ಶಾಸಕರನ್ನು ಕರೆಯಲಿಲ್ಲವೆನ್ನುವ ಕಾರಣಕ್ಕಾಗಿ ಶಾಸನ ಸಭೆಯೊಳಗಡೆ ಹೀಗೆ ಪ್ರತಿಭಟನೆ ಮಾಡಿದರು ಎನ್ನುವುದೂ ಕೂಡ ಜಡ್ಜ್‌ಮೆಂಟ್‌ನಲ್ಲಿ ಉಲ್ಲೇಖವಾಗಿದೆ. ಇದನ್ನು ಉಲ್ಲೇಖ ಮಾಡಿ ನನ್ನ ಮೇಲೆ ಒಂದು ಕೇಸನ್ನು ಹಾಕಿದ್ದಾರೆ. ಹೇಗಾಗುತ್ತದೆಂದು ಯೋಚನೆ ಮಾಡಿ ನಾನು ಪ್ರಿವಿಲೇಜ್ ಆಗುತ್ತದೆಂದು ಕೇಳಿದ್ದೇನೆ. ಇದು ಪರಿಸ್ಥಿತಿಗಳು ಇವತ್ತು ಮ್ಯಾಜಿಸ್ಟ್ರೇಟ್‌ಗಳು ನಮಗೆ ಆಗದಿದ್ದವರು ನಮ್ಮನ್ನು ಯಾವ ರೀತಿಯಾಗಿ ಬಳಕೆ ಮಾಡುತ್ತಿದ್ದಾರೆ, ನಾವು ಈ ಶಾಸನಸಭೆಯೊಳಗಡೆ ಮಾತನಾಡಿದರೂ ಕೂಡ ನಮ್ಮ ಹಕ್ಕನ್ನು ಪ್ರತಿಪಾದನೆ ಮಾಡಿದರೂ ಕೂಡ ಇಷ್ಟು ಅಪಾಯಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಇದನ್ನು ಯಾರೋ ಕೊಟ್ಟಂತಹ ಹಕ್ಕಲ್ಲ, ಜನ ಸಂವಿಧಾನಾತ್ಮಕವಾಗಿ ಕೊಟ್ಟಿರುವುದು, ನೀವು ಏತಕ್ಕಾಗಿ ಅವರ ಮೇಲೆ ಪ್ರೀವಿಲೇಜ್ ಹಾಕುತ್ತಿಲ್ಲ? You move a privilege. ಇಲ್ಲಿ ಅವರನ್ನು

ಕರೆದು ನಿಲಿಸಿ; ಅಸೆಂಬ್ಲಿಯಲ್ಲಿ ಮಾತನಾಡಿದ್ದನ್ನು ನಿಮ್ಮ ಜಡ್ಜ್‌ಮೆಂಟ್‌ನಲ್ಲಿ ಬಾಡಿನಲ್ಲಿ ಹೇಳುತ್ತಾರೆಂದರೆ, You move a privilege.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ, ಕೋರ್ಟ್ ಕಟ್ಟಡ ಕಟ್ಟತಕ್ಕಂತಹವರು, ದುಡ್ಡು ಕೊಡುವವರು ಕರ್ನಾಟಕ ಸರ್ಕಾರವೇ ಮೇಲು ಉಸ್ತುವಾರಿಯನ್ನು ನೋಡುವವರು ಪಿಡಬ್ಲ್ಯೂಡಿ ಇಲಾಖೆಯೇ; ಪ್ರತಿಯೊಂದು ಕೂಡ ಸರ್ಕಾರದ ವತಿಯಿಂದಲೇ ಆಗತಕ್ಕಂತಹ ಕಾರ್ಯಕ್ರಮಗಳಿಗೆ ಎಲ್ಲೋ ಒಂದು ಕಡೆ ನ್ಯಾಯಾಂಗ, ಶಾಸಕಾಂಗ ಮತ್ತು ಕಾರ್ಯಾಂಗ ಒಂದೇ ನಾಣ್ಯದ ಎರಡು ಮುಖಗಳಾಗಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಈ ಸದನದಲ್ಲಿ ಮಾತನಾಡತಕ್ಕಂತಹ ಹಕ್ಕು, ಎಲ್ಲವೂ ಒಂದೇ ಆಗಿರುವುದರಿಂದ ಶಾಸಕಾಂಗದ ವ್ಯವಸ್ಥೆಯಲ್ಲಿ ಯಾವುದೇ ಕಟ್ಟಡಗಳು, ಯಾವ ಯಾವ ಕ್ಷೇತ್ರದಲ್ಲಿ ಜನಪ್ರತಿನಿಧಿಗಳ ವ್ಯವಸ್ಥೆಗಳಲ್ಲಿ ಆಗುತ್ತದೆ; ಇದು ಕೇವಲ ನ್ಯಾಯಾಂಗದಲ್ಲಿ ಆಗತಕ್ಕಂತಹ ಕಾರ್ಯಕ್ರಮಗಳಿಗೆ ಶಾಸಕರುಗಳು ಹೋಗಬಾರದು ಎನ್ನುವುದು ಎಲ್ಲೋ ಒಂದು ಕಡೆ ನಮ್ಮ ಅಧಿಕಾರಿಗಳಲ್ಲಿ ಇರತಕ್ಕಂತಹ ಒಂದು ಭಾವನೆಯು ಇಲ್ಲ ಅದಕ್ಕೆ ಏನಾದರೂ ನಿರ್ದಿಷ್ಟವಾದ ಒಂದು ಕಾನೂನು ಇದೆಯಾ? ದಯಾಮಾಡಿ ಇದನ್ನು ಒಂದು ಕ್ಲಾರಿಫೈ ಮಾಡಲೇಬೇಕಾಗುತ್ತದೆ. ಹಿರಿಯ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಹಾಗೆ ಇದರ ಬಗ್ಗೆ ಚರ್ಚೆ ಎಲ್ಲಾ ಕಡೆಗಳಲ್ಲೂ ಆಗುತ್ತಿದೆ. ಚೀಫ್ ಜಸ್ಟೀಸ್ ಹೋಗುತ್ತಾರೆ, ಬೇರೆ ಬೇರೆ ಜಿಲ್ಲಾ ದಂಡಾಧಿಕಾರಿಗಳು ಹೋಗುತ್ತಾರೆ, ಡಿಸ್ಟ್ರಿಕ್ ಜಡ್ಜ್ ಇರತಕ್ಕಂತಹ ಕಾರ್ಯಕ್ರಮಗಳಿಗೂ ಕೂಡ ಒಬ್ಬ ಶಾಸಕರನ್ನೂ ಕರೆಯತಕ್ಕಂತಹ ಒಂದು ಸೌಜನ್ಯತೆ ಇವತ್ತು ಇಲ್ಲ. ಅದಕ್ಕಾಗಿ ದಯಮಾಡಿ ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಸರ್ಕಾರ ಮತ್ತು ಸರ್ಕಾರದಲ್ಲಿರತಕ್ಕಂತಹ ಮುಖ್ಯ ಕಾರ್ಯದರ್ಶಿಗಳು ಮತ್ತು ಲಾ ಸೆಕ್ರೆಟರಿಗಳು ಕುಳಿತುಕೊಂಡು ಏನು ಕಾನೂನು ಇಲಾಖೆಯಲ್ಲಿರುವಂತಹ ಈ ಒಂದು ಕಹಿ ಭಾವನೆಯನ್ನು ತೊಡೆದುಹಾಕುವಂತಹ ಕೆಲಸವನ್ನು ಮಾಡಬೇಕು ಜನ ಪ್ರತಿನಿಧಿಗಳು ಇವತ್ತು ನಾವು ಇರುತ್ತೇವೆ, ಮತ್ತೊಬ್ಬರು ಇರುತ್ತಾರೆ, ಆದರೆ ಎಲ್ಲೋ ಒಂದು ಕಡೆ ಶಾಸಕಾಂಗದ ವ್ಯವಸ್ಥೆಯಲ್ಲಿರುವಂತಹ ಈ ಕೆಲಸದಲ್ಲಿ ಶಾಸಕರಿಗೆ ಆಗುವಂತಹ ತೊಳಲಾಟವನ್ನು ತಪ್ಪಿಸುವ ಬಗ್ಗೆ ಕಾನೂನಿನ ಅಡಿಯಲ್ಲಿ ಏನಾದರೂ ಇಲ್ಲವಾದರೆ ಅದರ ಬಗ್ಗೆ ಒಂದು ತಿದ್ದುಪಡಿಯನ್ನು ತಂದು ಮಾಡುವುದು ಸೂಕ್ತವಾದ ಕೆಲಸ.

ಶ್ರೀ ಎಸ್. ಎಸ್. ಕೃಷ್ಣಯ್ಯ ಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ಇಷ್ಟು ಹೊತ್ತು ಕೂಡ ಮಾನ್ಯ ಮಾಧುಸ್ವಾಮಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುತ್ತಿದ್ದಾರೆ. ನನ್ನ ಕ್ಷೇತ್ರದ ಬಂಗಾರುಪೇಟೆಯ ಕ್ಷೇತ್ರದಲ್ಲಿ ಸುಮಾರು 6 ತಿಂಗಳ ಹಿಂದೆ ಒಂದು ನ್ಯಾಯಾಲಯ ಕಟ್ಟಡವನ್ನು ಉದ್ಘಾಟನೆ ಮಾಡಿದರು. ಆಗ ನಾನೂ ಕೂಡ ಅಲ್ಲಿ ಲೋಕಲ್ ಶಾಸಕನಾಗಿ ಭಾಗವಹಿಸಬೇಕೆನ್ನುವಂತಹ ಮಾತು ಬಂದಾಗ ಇಷ್ಟು ಹೊತ್ತು ನಮ್ಮ ಸೋಮಣ್ಣನವರು ಹೇಳಿದ ಹಾಗೆ ಇಲ್ಲಿ ಶಾಸಕರನ್ನು ಅಲ್ಲಿ ಸೇರಿಸುವುದಿಲ್ಲ ಎನ್ನುವುದನ್ನು ಚರ್ಚೆ ಮಾಡಿದರು, ಆಗ ಸನ್ಮಾನ್ಯ ಉಸ್ತುವಾರಿ ಸಚಿವರಾದ ಶ್ರೀನಿವಾಸಗೌಡರೂ ಕೂಡ ಅಲ್ಲಿ ಭಾಗವಹಿಸಿದ್ದರು. ಇಲ್ಲ ನೀವು ಸೇರಿಸಬೇಕೆಂದು ಅವರು ಹೇಳಿದಾಗ ಅಲ್ಲಿ ಬಂದಿರುವಂತಹ ನ್ಯಾಯಾಧೀಶರು, ಇಲ್ಲಾ ಸಾರ್ ಸೇರಿಸುವುದಿಲ್ಲ

ಎನ್ನುವಂತಹ ಮಾತು ಬಂದಿದೆ. ಈಗ ಮುಂದಿನ ದಿನಗಳಲ್ಲಿಯೂ ಕೂಡ ಈಗ ಬೇರೆ ಕಡೆ ಎಲ್ಲಿಯಾದರೂ ಹೊಸ ಕಟ್ಟಡಗಳು ಉದ್ಘಾಟನೆ ಆದರೆ ಅಲ್ಲಿ ಶಾಸಕರನ್ನು ಸೇರಿಸಿಕೊಳ್ಳಬೇಕೆಂದು ಸರ್ಕಾರಕ್ಕೆ ನಾನು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಈ ಬಗ್ಗೆ ಸರ್ಕಾರ ಮತ್ತು ಮಾನ್ಯ ಮುಖ್ಯಮಂತ್ರಿಗಳು ನ್ಯಾಯಾಂಗ ಸಚಿವರು, ಪ್ರಾಮಾಣಿಕವಾದಂತಹ ಚಿಂತನೆಯನ್ನು ಮಾಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಈ ಸದಸ್ಯರ ಗೌರವವನ್ನು ಕಾಪಾಡುವಂತಹದ್ದು ಈ ಸದನದ ಅಧ್ಯಕ್ಷರ ಕರ್ತವ್ಯ, ಅವರು ಕೇಳಬೇಕು, ಯಾವ ಕಾರಣಕ್ಕಾಗಿ ಶಾಸಕರುಗಳನ್ನು ಸಮಾರಂಭಕ್ಕೆ ನೀವು ಕರೆಯುವುದಿಲ್ಲ. ನಾವು ಇಲ್ಲಿ ಅವರಿಗೆ ಹಣವನ್ನು ಕೊಡುತ್ತಿದ್ದೇವೆ. ಅವರು ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಹಣವನ್ನು ಕೊಡುತ್ತಿದ್ದೇವೆ. ವಕೀಲರ ಸಂಘಕ್ಕೆ ಹಣವನ್ನು ಕೊಡುತ್ತಿದ್ದೇವೆ.

ಶ್ರೀ ಎ. ಟಿ. ರಾಮಸ್ವಾಮಿ : ಮಾನ್ಯ ವಾಟಾಳ್ ನಾಗರಾಜ್‌ರವರೆ, ಒಂದು ನಿಮಿಷ ಮಾತನಾಡುತ್ತೇನೆ, ತಾವು ಬೇಸರ ಮಾಡಿಕೊಳ್ಳಬೇಡಿ. ಈಗ ಹಣ ಮಂಜೂರಾತಿಯನ್ನು ಮಾಡುವುದು ಈ ಮನೆ, ಅದನ್ನು ಕಟ್ಟಿಸುವವರು ಯಾರು? ನಮ್ಮ ಸರ್ಕಾರದ ಒಂದು ಇಲಾಖೆ ಕಟ್ಟಿಸುತ್ತದೆ, ಅವರನ್ನು ನಾವು ಏತಕ್ಕಾಗಿ ಕೇಳಬೇಕು, ನಾವು ಉದ್ಘಾಟನೆಯನ್ನು ಮಾಡಿ ಅವರಿಗೆ ಹ್ಯಾಂಡ್ ಓವರ್ ಮಾಡಬಹುದಲ್ಲಾ; ಅದಕ್ಕೆ ಸರ್ಕಾರಕ್ಕೆ ದಮ್ಮು ಬೇಕು ಇಚ್ಛೆ ಇರಬೇಕು; ಕಟ್ಟಡವನ್ನು ಕಟ್ಟಿಸಿದ ಮೇಲೆ ಉದ್ಘಾಟನೆ ಮಾಡಿಯೇ ಅವರಿಗೆ ಕೊಡೋಣ. ಅವರೇನು ದೇವಲೋಕದಿಂದ ಇಳಿದುಬಂದಿದ್ದಾರೆಯೇ? ನ್ಯಾಯಾಧೀಶರು ಎಂದರೆ ದೇವಲೋಕದಿಂದ ಇಳಿದು ಬಂದಿಲ್ಲ. ಕಾನೂನಿಗೆ ಎಲ್ಲರೂ ಅಧೀನರೇ. ಸಂವಿಧಾನಕ್ಕಿಂತ ದೊಡ್ಡವರಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಮಸ್ವಾಮಿಯವರೆ, ಅದಕ್ಕಿಂತ ಒಂದು ಹೆಜ್ಜೆ ಮುಂದೆ ಈ ಸಂಬಳ ಮಂಜೂರು ಮಾಡುವುದು ಎಲ್ಲಿಂದ? ಹಾಗಾದರೆ ಇದನ್ನು ಅವರು ತೆಗೆದುಕೊಳ್ಳಬಾರದು, ಈ ಶಾಸಕರ ಒಟ್ಟಿಗೆ ಕುಳಿತುಕೊಳ್ಳುವ ಬಗ್ಗೆ ಮಡಿವಂತಿಕೆ ಇದ್ದರೆ ನಾವು ಬಜೆಟ್ ಪಾಸು ಮಾಡಿದಂತಹ ಹಣವನ್ನು ಸಹ ಅವರು ತೆಗೆದುಕೊಳ್ಳಬಾರದು ಸಂಬಳವನ್ನೂ ಸಹ ಅವರು ತೆಗೆದುಕೊಳ್ಳಬಾರದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಇದು ಈ ಸಮಗ್ರ ಸದನದ ಗೌರವ; ನಾನು ಎಲ್ಲಾ ಸದಸ್ಯರಲ್ಲಿ ಅತ್ಯಂತ ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ನಿಮ್ಮ ಯಾವುದೇ ಕ್ಷೇತ್ರದಲ್ಲಿ ಮುಂದೆ ನ್ಯಾಯಾಂಗ ಇಲಾಖೆಗೆ ಸಂಬಂಧಪಟ್ಟಂತಹ ಕಟ್ಟಡದ ಶಂಕುಸ್ಥಾಪನೆ ಅಥವಾ ಉದ್ಘಾಟನೆಯಾಗಲಿ, ನಿಮ್ಮನ್ನು ಕರೆಯಲಿಲ್ಲವೆಂದರೆ ನಾವೇ ಉದ್ಘಾಟನೆಯನ್ನು ಮಾಡೋಣ. ಇದಕ್ಕೆ ಜಡ್ಜ್‌ಗಳು ಬೇಕಾಗಿಲ್ಲ. ಅದಕ್ಕೆ ನ್ಯಾಯಾಧೀಶರು ಬೇಕಾಗಿರುವುದಿಲ್ಲ. ಅವರು ಏತಕ್ಕಾಗಿ ಬೇಕು? ಏತಕ್ಕಾಗಿ ನಾವು ಅವರನ್ನು ಕರೆಯಬೇಕು? ಅವರನ್ನು ಕರೆಯಕೂಡದು; ನಮ್ಮನ್ನು ಅವರು ಯಾವ ದೃಷ್ಟಿಯಿಂದ ನೋಡುತ್ತಿದ್ದಾರೆ, ಅವರ ಮನೋಭಾವನೆ ಏನು? ಶಾಸಕರುಗಳ ಮೇಲೆ ಅವರಿಗಿರುವಂತಹ ಮನೋಭಾವನೆ ಏನು? ಶಾಸಕರನ್ನು ಕರೆಯದಿದ್ದರೆ ನ್ಯಾಯಾಂಗ ಸಚಿವರಾಗಲಿ, ಮುಖ್ಯಮಂತ್ರಿಗಳಾಗಲಿ, ಅಧ್ಯಕ್ಷರಾಗಲಿ, ನಾವು

ಬರುವುದಿಲ್ಲವೆಂದು ಅವರಿಗೆ ಹೇಳಬೇಕು. ನಿಮ್ಮ ಸಮಾರಂಭಕ್ಕೆ ನಾವು ಖಂಡಿತವಾಗಿ ಬರುವುದಿಲ್ಲವೆಂದು ಸ್ಪಷ್ಟವಾಗಿ ಹೇಳುವಂತಹ ನಿರ್ಧಾರವನ್ನು ಕೈಗೊಳ್ಳಬೇಕು. ಇದು ಅಲ್ಲದೇ ಬೀದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಕರೆದುಕೊಂಡು ಹೋದಂತೆ, ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾರವರ ಕೇಸು ನಮಗೆ ಏತಕ್ಕಾಗಿ ಬೇಕಾಗಿತ್ತು? ಇದರ ಬಗ್ಗೆ ನನಗೆ ಅರ್ಥವಾಗಲಿಲ್ಲ. ನಾವು 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು, ಅಲ್ಲದೆ ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕು, ಬೆಂಗಳೂರಿನಲ್ಲಿ ಪ್ರತಿದಿನ ಇಡೀ ನ್ಯಾಯಾಲಯದ ಸುತ್ತ, ವಕೀಲರುಗಳಿಗೆ ತೊಂದರೆ, ಜನರಿಗೆ ತೊಂದರೆ, ಜನಸಾಮಾನ್ಯರಿಗೆ ತೊಂದರೆ, ತಿರುಗಾಡುವುದಕ್ಕೆ ಆಗುವುದಿಲ್ಲ. ಸಂಚಾರದ ವ್ಯವಸ್ಥೆ ಮತ್ತು ಭಯೋತ್ಪಾದಕರ ಗಲಾಟೆ, ಇವುಗಳೆಲ್ಲಾ ನಮಗೆ ಏತಕ್ಕಾಗಿ ಬೇಕು? ಇದರ ಬಗ್ಗೆ ನನಗೆ ಅರ್ಥವಾಗಲಿಲ್ಲ. ಮೈಮೇಲೆ ಇವುಗಳನ್ನು ಏತಕ್ಕೆ ಹಾಕಿಕೊಳ್ಳಬೇಕಾಗಿತ್ತು? ಇದು ಖಂಡಿತವಾಗಿಯೂ ಬೇಕಾಗಿರಲಿಲ್ಲ. ಇವತ್ತೂ ಕೂಡ ಅವಕಾಶವಿದ್ದರೆ ಇದರ ಬಗ್ಗೆ ಸರ್ಕಾರ ಹೇಳಬೇಕು, ಬೇರೆ ರಾಜ್ಯಕ್ಕೆ ಇದನ್ನು ತೆಗೆದುಕೊಂಡು ಹೋಗಿ ಎಂದು ಹೇಳಿ, ಇದು ನಮಗೆ ಬೇಕಾಗಿಲ್ಲ; ಏತಕ್ಕಾಗಿ ಬೇಕಾಗಿದೆ, ಯಾವ ಉದ್ದೇಶಕ್ಕಾಗಿ ಬೇಕಾಗಿದೆ. ಯಾರಿಗೋಸ್ಕರ, ಯಾರ ಪ್ರೀತಿಗೋಸ್ಕರ ಇದು ಬೇಕಾಗಿತ್ತು. ನನಗೆ ಯಾರ ಬಗ್ಗೆಯೂ ವೈಯಕ್ತಿಕವಾಗಿ ಹೇಳುತ್ತಿಲ್ಲ. ನಮ್ಮ ರಾಜ್ಯದಲ್ಲಿ ಇದು ಏತಕ್ಕಾಗಿ ಬೇಕಾಗಿತ್ತು? ಯಾವ ಕಾರಣಕ್ಕಾಗಿ ಬೇಕಾಗಿತ್ತು? ಏನು ಉದ್ದೇಶ, ಇದರ ಬಗ್ಗೆ ನನಗೆ ಅರ್ಥವಾಗಲಿಲ್ಲ. ಮಾನ್ಯ ಅಧ್ಯಕ್ಷರೆ, ನೀವು ಆ ಸ್ಥಳವನ್ನು ಹೋಗಿ ನೋಡಬೇಕು, ಬಹಳ ಭಯಂಕರವಾಗಿರುತ್ತದೆ. ಯಾರು ಹತ್ತಿರ ಹೋಗುವ ಹಾಗಿಲ್ಲ, ರಸ್ತೆಯಲ್ಲಿ ನಡೆದಾಡುವ ಹಾಗಿಲ್ಲ, ಸಂಚಾರ ಹೋಗುವ ಹಾಗಿಲ್ಲ, ಬಸ್‌ಗಳು ಹೋಗುವ ಹಾಗಿಲ್ಲ, ಇಡೀ ಮಿಲಿಟರಿ ಪ್ರಭುತ್ವ ಇದ್ದ ಹಾಗೆ ಅಲ್ಲಿರುತ್ತದೆ, ಸಾವಿರಾರು ಜನ ಪೋಲಿಸರು, ವಕೀಲರಿಗೆ, ನ್ಯಾಯಾಲಯಗಳಿಗೆ ತೊಂದರೆ, ಇವೆಲ್ಲಾ ಯಾರಿಗೆ ಬೇಕಾಗಿತ್ತು? ಮೈ ಮೇಲೆ ಏಕೆ ಹಾಕಿಕೊಳ್ಳಬೇಕಾಗಿತ್ತು? ಇದು ಒಳ್ಳೆಯ ಸೂಚನೆ ಅಲ್ಲ, ಈಗಲೂ ಸಹ ತಮಗೆ ಸೇರಿರುವಂಥದ್ದಾಗಿವೆ. ಮತ್ತೊಂದು ಬಹಳ ಪ್ರಾಮುಖ್ಯವಾಗಿ ತಮ್ಮ ಗಮನಕ್ಕೆ ತರುತ್ತೇನೆ, ಖಾದ್ರಿ ಶಾಮಣ್ಣನವರ ಪ್ರತಿಷ್ಠಾನಕ್ಕೆ ಅವರು ಕರ್ನಾಟಕದಲ್ಲೇ ಒಬ್ಬ ಅತ್ಯಂತ ಎತ್ತರವಾದಂತಹ ಕನ್ನಡ ಪತ್ರಿಕೋದ್ಯಮದಲ್ಲಿ ಅಪಾರವಾದಂತಹ ಕೆಲಸವನ್ನು ಮಾಡಿರುವವರು, ಮಾನ್ಯ ಸಿದ್ಧರಾಮಯ್ಯನವರೆ ಇದನ್ನು ಸ್ವಲ್ಪ ಕೇಳಬೇಕು ತಮ್ಮ ಉತ್ತರದಲ್ಲಿ ಇದರ ಬಗ್ಗೆ ಹೇಳಬೇಕಾಗುತ್ತದೆ. ಅವರ ಪ್ರತಿಷ್ಠಾನಕ್ಕೆ ಪ್ರತಿವರ್ಷ ಕನಿಷ್ಠ 5.00 ಲಕ್ಷ ರೂಪಾಯಿಗಳನ್ನು ಮೇಲುಕೋಟೆ ಹಾಗೂ ಕಾರ್ಯಕ್ರಮಗಳನ್ನು ಮಾಡಲಿಕ್ಕೆ, ಉತ್ತಮ ಪತ್ರಕರ್ತರಿಗೆ ವರ್ಷಕ್ಕೊಂದು ಸಾರಿ ಉತ್ತಮ ಪ್ರಶಸ್ತಿ, ಗೌರವವನ್ನು ಕೊಡುತ್ತಾರೆ, ಅದಕ್ಕಾಗಿ ಕನಿಷ್ಠ 5.00 ಲಕ್ಷ ರೂಪಾಯಿಗಳನ್ನು ಕೊಡಲಿಕ್ಕೆ ತಮ್ಮ ಉತ್ತರದಲ್ಲಿ ಸೇರಿಸಿದ್ದರೆ ಅದನ್ನು ನಾವು ಸ್ವಾಗತ ಮಾಡುತ್ತಿದ್ದೇವು. ಕನಿಷ್ಠ ಉತ್ತರದಲ್ಲಿಯಾದರೂ ತಾವು ಮಾಡಬೇಕು. ಹಿಂದಿನ ಆಯವ್ಯಯ ಬೇಡಿಕೆಯಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೇನು. ಈಗ ಟಿ. ಎಸ್. ರಾಮಚಂದ್ರರಾವ್ ಅವರ ಹೆಸರಿನಲ್ಲಿ ನಾವು ಪ್ರಶಸ್ತಿಯನ್ನು ಕೊಡುತ್ತಿದ್ದೇವೆ. ಇದು ಬಹಳ ಒಳ್ಳೆಯ ನಿರ್ಧಾರ. ಇದರೊಂದಿಗೆ ಇನ್ನು ಕೆಲವು ಪತ್ರಿಕೋದ್ಯಮಿಗಳು ಈ ರಾಜ್ಯಕ್ಕೆ ಒಳ್ಳೆಯ ಸೇವೆಯನ್ನು ಮಾಡಿದವರ ಬಗ್ಗೆ ಹೇಳಿದ್ದೆ, ಆದರೆ ಅದು ಪತ್ರಿಕೆಗಳಲ್ಲಿ ಬರಲಿಲ್ಲ, ಬಹುಶಃ ಕಡತದಲ್ಲಿ

ಹೋಗಿದೆ, ಮತ್ತೊಂದು ಬಾರಿ ಅವರ ಬಗ್ಗೆ ಹೇಳುತ್ತೇನೆ, ಕಿಡಿ ಶೇಷಪ್ಪನವರು ಕರ್ನಾಟಕದಲ್ಲಿ ಪತ್ರಿಕೋದ್ಯಮದಲ್ಲೇ ಬಹಳ ಅತ್ಯಂತ ಎತ್ತರದಲ್ಲಿ ಕೆಲಸ ಮಾಡಿದ್ದಾರೆ, ಪತ್ರಿಕೋದ್ಯಮದಲ್ಲಿ ಟೀಕೆ, ರಾಜಕೀಯ, ವಿಡಂಬನೆ ಬರೆಯಬಹುದು ಎಂಬುದು ಆರಂಭವಾದುದು ವಿಶಾಲವಾಗಿ ಕಿಡಿಶೇಷಪ್ಪನವರ ಕಾಲದಲ್ಲಿ, ಖಾದ್ರಿ ಶಾಮಣ್ಣ ನೆಟ್ಟಕಲ್ಲಪ್ಪ, ಪ್ರಜಾವಾಣಿಯ ಕೂಟದಲ್ಲಿ ಜನಸಾಮಾನ್ಯರ ತರಹ ಕೆಲಸ ಮಾಡಿದಂತಹವರು, ಬಿ. ಎನ್. ಗುಪ್ತ ಬಹಳ ಅತ್ಯುನ್ನತವಾದ ಜನಪ್ರಿಯವಾದಂತಹ ಪತ್ರಿಕೆಯನ್ನು ನಡೆಸಿದವರು. ವೀರಕೇಸರಿ ಎಂಬ ಪತ್ರಿಕೆಯ ಸೀತಾರಾಮ ಶಾಸ್ತ್ರಿಯವರು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂತಹವರು. ಪಾಟೀಲಪುಟ್ಟಪ್ಪ, ಮತ್ತೆ ಸಿದ್ಧವನಹಳ್ಳಿಯ ಕೃಷ್ಣಶರ್ಮ ಇವರೆಲ್ಲರ ಹೆಸರಿನಲ್ಲಿಯೂ ವರ್ಷಕ್ಕೆ ಕನಿಷ್ಠ 1.00 ಲಕ್ಷ ರೂಪಾಯಿಗಳಂತೆ ಪ್ರಶಸ್ತಿಯನ್ನು ಆರಂಭಿಸುವ ಕಾರ್ಯ ನಿಮ್ಮಿಂದ ಆಗಲಿ ಎಂದು ಹೇಳಿ ತಮ್ಮ ಪೂರಕ ಅಂದಾಜುಗಳನ್ನು ವಿರೋಧ ಮಾಡಲಿಕ್ಕೆ ತಯಾರಾಗಿಲ್ಲ, ಇದನ್ನು ಸ್ಪಷ್ಟವಾಗಿ ಸ್ವಾಗತಿಸುತ್ತೇನೆ. ಮತ್ತೊಮ್ಮೆ ತಾವು ಈ ರಾಜಕೀಯ ಗೊಂದಲದಲ್ಲಿ ಎದೆಗುಂದದೆ ಬುಲ್ಡೋಜರ್ ತರಹ ಇಡೀ ರಾಜ್ಯದಲ್ಲಿ ನುಗ್ಗಿ ಮತ್ತೆ ಈ ಸದನದಲ್ಲಿ, ನಿಮಗೆ ಮತ್ತೆ ಈ ಖಾತೆ ಬರಲಿ, ಅದಕ್ಕೆ ನೀವು ಎದೆಗುಂದಬಾರದು, ಬಹಳ ಪಿತೂರಿಯಿದೆ, ಎನೆಲ್ಲಾ ನಡೆದಿದೆ, ಅಂತಹ ಪಿತೂರಿಗೆಲ್ಲಾ ನೀವು ಹೆದರಬೇಕಾಗಿಲ್ಲ, ಹಿಂದೆ ಎಂಥೆಂಥ ಕಾಲವಿತ್ತು, ಟಿಪ್ಪು ಸುಲ್ತಾನ್, ಕಿತ್ತೂರು ರಾಣಿ ಚೆನ್ನಮ್ಮ ಇವರನ್ನು ಹಿಡಿದುಕೊಟ್ಟವರು ಯಾರು, ನಮ್ಮವರೇ, ಆದ್ದರಿಂದ ಅದಕ್ಕೆ ನೀವು ಹೆದರಬೇಕಾಗಿಲ್ಲ, ಕಿತ್ತೂರು ರಾಣಿ ಚೆನ್ನಮ್ಮನನ್ನು ಹಿಡಿದುಕೊಟ್ಟವರು ಮಲ್ಲಪ್ಪಶೆಟ್ಟಿ ಟಿಪ್ಪು ಸುಲ್ತಾನನ್ನು ಹಿಡಿದುಕೊಟ್ಟವರು ಮೀರ್ ಸಾಧಕ್ ಎಂಥೆಂಥ ಇತಿಹಾಸ ಆಗಿಹೋಗಿವೆ.

ಶ್ರೀ ಎಸ್. ರಾಜೇಂದ್ರನ್ : ಇತಿಹಾಸ ಡೋರ್ ಅನ್ನು ಮುಟ್ಟಿ ಎಸ್ಕೇಪ್ ಆಗಿ ಬಂದಿರುವವರು ಇವರು.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ಹೆದರಬೇಕಾಗಿಲ್ಲ, ಸಂಗೊಳ್ಳಿ ರಾಯಣ್ಣನಾಗಿ ಹೋರಾಟ ಮಾಡಬೇಕು. ಹೆದರಬೇಕಾಗಿಲ್ಲ ಯಾವುದು ಶಾಶ್ವತ ಇಲ್ಲ ಎಸ್. ನಿಜಲಿಂಗಪ್ಪ, ಹನುಮಂತಯ್ಯ ಎಲ್ಲರನ್ನೂ ನೋಡಿಕೊಂಡು ಬಂದಿದ್ದೇನೆ. ಯಾರು ಈ ಸದನವನ್ನು ಕಟ್ಟಿಸಿದಂತಹವರು ಈ ಸದನದೊಳಗೆ ಬರಲಿಕ್ಕಾಗಲಿಲ್ಲ. ಈಗ ನಿಮಗಾಗಿರುವುದು ಬಹಳ ಕಡಿಮೆಯೆನಿಸುತ್ತದೆ. ಈ ಸದನ ಕಟ್ಟಿ ಅವರು ಮುಖ್ಯಮಂತ್ರಿ ಪದವಿಗೆ ಇನ್ನು ಮೂರೇ ತಿಂಗಳಿತ್ತು, ಆಗ ಆ ಸಾಹುಕಾರ್ ಚೆನ್ನಯ್ಯನವರು ಒಂದು ಟೀಮ್ ಮಾಡಿ ಅವರನ್ನು ಅವಿಶ್ವಾಸಕ್ಕೆ ತಂದು ಹೊರಕ್ಕೆ ಕೆಡವಿ ಈ ಸದನವನ್ನು ಉದ್ಘಾಟನೆ ಮಾಡಿದವರು ಕಡಿದಾಳ್ ಮಂಜಪ್ಪನವರು. ಕಡಿದಾಳ್ ಮಂಜಪ್ಪನವರು ಕ್ಯಾಬಿನೆಟ್‌ನಲ್ಲಿದ್ದಂತಹ ಸತ್ಯವಂತರು ಬಿಡಿ, ಹನುಮಂತಯ್ಯನವರ ಸಚಿವ ಸಂಪುಟದ 9 ಜನರು ಸತ್ಯವಂತರೇ. ಹಾಗಾಗಿ ನಿಮಗೆ ಇವತ್ತು ಶಹಭಾಸ್‌ಗಿರಿಯನ್ನು ಕೊಡುತ್ತೇನೆ, ಎದೆಗುಂದಬೇಕಾಗಿಲ್ಲ, ರಾಜಕಾರಣ ಇತ್ತೀಚೆಗೆ ಕುಲಗೆಟ್ಟಿದೆ, ಹೊಲಸು ರಾಜಕಾರಣ, ಪಕ್ಷಾಂತರ, ಜಾತಿ ರಾಜಕಾರಣ, ದ್ವೇಷ, ಇದೆಲ್ಲಾ ನಡೆಯುತ್ತಿದೆ, ಅಧಿಕಾರಕ್ಕಾಗಿ ಏನೂ ಬೇಕಾದರೂ ಮಾಡುವುದು, ನಮ್ಮೂರಿನಲ್ಲಿ ಒಬ್ಬ ಮದ್ದು ಹಾಕುವುದನ್ನು ಕಲಿತಿದ್ದ, ಮದ್ದು ಹಾಕಲಿಕ್ಕೆ ಯಾರೊಬ್ಬರು ಸಿಗದಿದ್ದಾಗ ತಾನೇ ಮದ್ದು ಹಾಕಿಕೊಳ್ಳುವುದು, ತನ್ನ ಮಕ್ಕಳಿಗೆ ಮದ್ದು ಹಾಕುವುದು, ಇಂತಹವರು ಹಿಂದೆ ಇದ್ದರು, ಅವರನ್ನು ಮೀರಿಸತಕ್ಕಂತ ಜನ

ಇದ್ದಾರೆ, ನಾನು ಈ ಸದನದಲ್ಲಿ ಮತ್ತೊಮ್ಮೆ ಜ್ಞಾಪಿಸುತ್ತೇನೆ, ಮಾನ್ಯ ಧರಂಸಿಂಗ್‌ರವರಿಗೂ ಹೇಳಿದೆ, ತಾವು ಮುಖ್ಯಮಂತ್ರಿಯಾಗಿದ್ದೀರಿ, ತಮಿಳುನಾಡಿನಲ್ಲಿ ನೂರು ನಾಗರಹಾವುಗಳ ಮಧ್ಯದಲ್ಲಿ 24 ಗಂಟೆಗಳ ಕಾಲ ಮಲಗಿ ಒಬ್ಬ ವ್ಯಕ್ತಿ ಬಚಾವಾದ. ಹಾಗೆ ತಾವು 14 ತಿಂಗಳುಗಳ ಕಾಲ ಕೇರೆಹಾವು, ನಾಗರಹಾವು ಒಂದು ದೊಡ್ಡ ಹೆಬ್ಬಾವು ಇವುಗಳ ಮಧ್ಯದಲ್ಲಿ ಮಲಗಿ ಪಾರಾಗಬೇಕಾದರೆ ಅದು ಶಹಭಾಸ್‌ಗಿರಿಯೇ, ಇದರಿಂದ ನಿಮಗೆ ಹಾರೈಸಿ, ಹರಸುತ್ತೇನೆ, ನೀವು ಎದೆಗುಂದದೆ ಶಕ್ತಿಯುತವಾಗಿ ಮುನ್ನುಗ್ಗಿ, ನಿಮ್ಮ ನೀತಿಗೆ ಸಮರ್ಥವಾಗಿ

ಮಾನ್ಯ ಸದಸ್ಯರು : ಮಾನ್ಯ ವಾಟಾಳ್ ನಾಗರಾಜ್ ರವರು ಯಾವ ಹಾವು? ಹೆಬ್ಬಾವು, ನಾಗರಹಾವು ಎಂಬುದು ಗೊತ್ತಾಗಲಿಲ್ಲ?

ಶ್ರೀ ವಾಟಾಳ್ ನಾಗರಾಜ್ : ಅಯ್ಯೋ ಕುಳಿತುಕೊಳ್ಳಿ ಸ್ವಾಮಿ, ಗೊತ್ತು, ಅದರಿಂದ ತಾವು ಎದೆಗುಂದದೆ, ಹಡಗು ಮುಳುಗುವಾಗ ಯಾರು ಸಮುದ್ರಕ್ಕೆ ನೆಗೆದು ಈಜುತ್ತಾರೆ, ಅವರೇ ನಾಯಕರಾಗುವಂತಹವರು, ಆದ್ದರಿಂದ ತಾವು ಭದ್ರವಾಗಿ ನಿಲ್ಲಬೇಕೆಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಸಿದ್ಧರಾಮಯ್ಯನವರು ಪೂರಕ ಅಂದಾಜುಗಳನ್ನು ಮಂಡಿಸಿದ್ದಾರೆ, ಅವರು ಈಗಿರುವ ಸ್ಥಿತಿಯಲ್ಲಿ ಇದನ್ನು ವಿಮರ್ಶಿಸಲಿಕ್ಕೆ ನಮ್ಮ ಆತ್ಮ ಒಪ್ಪುತ್ತಿಲ್ಲ, ಅವರು ಇನ್ನೂ 5 ವರ್ಷಗಳು ಬಜೆಟ್ ಅನ್ನು ಮಂಡಿಸುತ್ತಾರೆ, ಈ ರಾಜ್ಯದ ಆರ್ಥಿಕ ಸ್ಥಿತಿಯನ್ನು ದೇಶದಲ್ಲಿ ಮಾದರಿಯಾಗಿರುವಂತೆ ಮಾಡುತ್ತಾರೆಂಬ ನಿರೀಕ್ಷೆ ನಮಗೆಲ್ಲಾ ಇತ್ತು. ಆ ನಿರೀಕ್ಷೆ ಹುಸಿಯಾಗುತ್ತಿದೆಯೇನೋ ಎಂಬ ಒಂದು ಸೂಚನೆ ನಮಗೆ ಸಿಕ್ಕಿದೆ, ಏಕೆಂದರೆ ಇವತ್ತು ಯೋಜನಾ ಆಯೋಗಾದಿಂದ ಹಿಡಿದು ಎಲ್ಲರೂ ಕೂಡ ಕರ್ನಾಟಕದ ಆರ್ಥಿಕ ಸ್ಥಿತಿ ಕೇವಲ ಒಂದೂವರೆ ವರ್ಷದಲ್ಲಿ ಪ್ರಶಂಸೆ ಮಾಡುವಂತಹ ಸ್ಥಿತಿಗೆ ಬಂದಿದೆ, ಅದು ನಿಜವಾಗಲೂ ಒಂದು ಸಾಧನೆ, ಅದು ಸಾಮಾನ್ಯವಾದಂತಹ ಸಾಧನೆಯಲ್ಲ, ಅಂತಹ ಒಂದು ಅವಕಾಶವನ್ನು ಕರ್ನಾಟಕ ರಾಜ್ಯಕ್ಕೆ ಇದ್ದದ್ದನ್ನು ನಾವು ಕಳೆದುಕೊಂಡೆವು ಎಂಬ ನೋವು ನಮಗೆ ಕಾಡುತ್ತಿದೆ. ಈಗ ಕಳೆದುಕೊಳ್ಳುತ್ತೇವೆಯೋ ಎಂಬಂಥ ನೋವು ನಮ್ಮನ್ನು ಕಾಡುತ್ತಿದೆ. ನಾನು ರಾಜಕಾರಣದ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ, ಒಬ್ಬ ಅರ್ಥಮಂತ್ರಿಯಾಗಿ, ಒಬ್ಬ ಮುಖಂಡನಾಗಿ ಸಿದ್ಧರಾಮಯ್ಯನವರನ್ನು ನಾವು ಬಹಳ ವರ್ಷದಿಂದ ನೋಡಿದ್ದೇವೆ. ಆದರೆ ಎತಕ್ಕೆ ಈ ಸ್ಥಿತಿ ನಿರ್ಮಾಣವಾಯಿತು ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಅಂತಹ ಒಂದು ಅರ್ಥವ್ಯವಸ್ಥೆಯನ್ನು ಈ ರಾಜ್ಯಕ್ಕೆ ತಂದು ಕೊಡುವಂತಹ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಅವರು ಮಾಡಿದ್ದಾರೆ. ಅದರಲ್ಲಿ ಯಾವುದೇ ರೀತಿಯಾದಂತಹ ಎರಡು ಮಾತಿಲ್ಲ. ಅಂದರೆ ಇವತ್ತು ಇಡೀ ದೇಶದ ಅರ್ಥವ್ಯವಸ್ಥೆಯೇ ಹಾಳಾಗುತ್ತಿದೆ. ಅದು general crisis of economy start, ಆಗಿದೆ. ಅದರ ಬಗ್ಗೆ ಯಾರೂ ಹೊಣೆಗಾರರಲ್ಲ. The very system of economy is like that. ಒಳಗೆ ಇದ್ದಂತಹ ವ್ಯವಸ್ಥೆಯನ್ನು ಸರಿಪಡಿಸಲಿಕ್ಕೆ ಏನೆಲ್ಲಾ ಸಾಧ್ಯವುಂಟೋ ಅಷ್ಟನ್ನು ಅವರು ಹಾಗೂ ಅವರ ಇಲಾಖೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದಾರೆ. ಆ ಆರ್ಥಿಕ ಇಲಾಖೆಗೆ ಒಂದು ಪ್ರತಿಷ್ಠಿತ ಸ್ಥಾನವನ್ನು ಹಾಗೂ ಶಿಸ್ತನ್ನು ತಂದುಕೊಟ್ಟಿದ್ದಾರೆ. ಅಭಿವೃದ್ಧಿ

ಕಾರ್ಯಗಳಿಗೆ ಯಾವುದೇ ರೀತಿಯ ಕುಂಠಿತ ಮಾಡಲಿಲ್ಲ. ಮಾರವಾಡಿಗಳ ಲೆಕ್ಕವನ್ನು ಎಲ್ಲಿಯೂ ಹಾಕಲಿಲ್ಲ. ಎಲ್ಲಿ ಬೇಕೋ ಅಲ್ಲಿ ಧಾರಾಳವಾಗಿಯೇ ಕೊಟ್ಟಿದ್ದಾರೆ, ಆದರೆ ಇನ್ನು ಮುಂದೆ ಅಂತಹ ಪರಿಸ್ಥಿತಿ ಬರುತ್ತದೆಯೋ ಇಲ್ಲವೋ ಅದು ನನಗೆ ಗೊತ್ತಿಲ್ಲ. ಅದನ್ನು ಊಹಿಸಲಿಕ್ಕೂ ಸಹ ನನಗೆ ಸಾಧ್ಯವಾಗುತ್ತಿಲ್ಲ. ಅಂತಹ ಸ್ಥಿತಿ ಈ ರಾಜ್ಯಕ್ಕೆ ಬರಬಾರದು ಎಂದು ನಾವು ನಿರೀಕ್ಷೆ ಮಾಡುತ್ತೇವೆ ಅಷ್ಟೆ. ಬೇರೇನೂ ಮಾಡಲಿಕ್ಕೆ ನಮ್ಮ ಕೈಯಲ್ಲಿ ಸಾಧ್ಯವಿಲ್ಲ. ಸಂವಿಧಾನದ 205(1) ರ ಪ್ರಕಾರ ಸಪ್ಲಿಮೆಂಟರಿ ಪಟ್ಟಿಗೆ ಒಂದು ಪ್ರಾವಿಷನ್ ಇದೆ. ಅದನ್ನು ನಾವು ನಿರಾಕರಣೆ ಮಾಡುತ್ತಿಲ್ಲ, ಆದರೆ ಈ ದೇಶದ ಪ್ರಪ್ರಥಮ ಅರ್ಥಮಂತ್ರಿ ಟಿ. ಟಿ. ಕೃಷ್ಣಮಾಚಾರಿ once he told as I remembered..... ನಾನು ಎಲ್ಲೋ ಒಂದು ಕಡೆ ಓದಿದ್ದೇನೆ. ಏನೆಂದು ಹೇಳಿದ್ದಾರೆಂದರೆ, Where the economic indiscipline arises, there the state will collapse ಏನು ಹೇಳಿದ್ದಾರೆಂದರೆ ಈ ಸಪ್ಲಿಮೆಂಟರಿ ಬಜೆಟ್‌ನ್ನು ಏಕೆ ಇವತ್ತು ಮಾಡಬೇಕು ಎನ್ನುವಂತಹ ಪ್ರಾವಿಜನ್ ಇಟ್ಟಿದ್ದಾರೆ ಸಂವಿಧಾನದಲ್ಲಿ ಅವರು ಹೇಳುವ ಪ್ರಕಾರ ಅಂದರೆ If any emergency arises, only in case of any emergencies arises, then only we have to revoke this provision of the constitution 205 Article(1). ಆದರೆ ಇದು ಏನಾಗಿಬಿಟ್ಟಿದೆ ಇವತ್ತು ಎಲ್ಲಾ ರಾಜ್ಯಗಳಲ್ಲಿ ನಾನು ಕರ್ನಾಟಕ ರಾಜ್ಯ ಒಂದೇ ಅಂತ ಹೇಳುತ್ತಿಲ್ಲ. ಎಲ್ಲಾ ರಾಜ್ಯಗಳಲ್ಲೂ ಇದೊಂದು ರೆಗ್ಯುಲರ್ ಆದ ಪರಿಪಾಠವಾಗಿ ಬಿಟ್ಟಿದೆ. ಸಪ್ಲಿಮೆಂಟರಿ ಬಜೆಟ್‌ನ್ನು ಮಾಡತಕ್ಕಂಥಾದ್ದು. ಅದು ಏನು ಯೋಜನೆಗಳು, ಪ್ಲಾನ್ಡ್ ಬಜೆಟ್. ಪ್ಲಾನ್‌ನಲ್ಲಿರತಕ್ಕಂಥಾದ್ದು, ನಾನ್ ಪ್ಲಾನ್ ಅಥವಾ ಎಮರ್ಜೆನ್ಸಿ ಆದರೆ ಅದು ಬೇರೆ ಪ್ರಶ್ನೆ, ಪ್ಲಾನ್‌ನಲ್ಲಿರತಕ್ಕಂಥಾದ್ದನ್ನು ಯೋಜನೆಗಳಲ್ಲಿರತಕ್ಕಂಥಾದ್ದಕ್ಕೆ ಅದರ ಅಂಶಗಳಿಗೆ ಕೂಡ ಸಪ್ಲಿಮೆಂಟರಿ ಬಜೆಟ್ ತರಬೇಕಾದಂತಹ ಸ್ಥಿತಿ ನಿರ್ಮಾಣವಾದರೆ ಖಂಡಿತವಾಗಿಯೂ ಅದು ಆರ್ಥಿಕ ಬೆಳವಣಿಗೆಗೆ ಆರೋಗ್ಯಕರವಾದಂಥಾದ್ದೂ ಅಲ್ಲ ಈಗ ನಾನ್ ಪ್ಲಾನ್, ಅಥವಾ ಎಮರ್ಜೆನ್ಸಿಸ್ ಏನಾದರೂ ಆರೈಸ್ ಆದರೆ Then we have to see that. We have to agree for that. ಪ್ಲಾನ್ ಔಟ್‌ಲೇನ್‌ನಲ್ಲಿ ನಾವು ಸಪ್ಲಿಮೆಂಟರಿ ಬಜೆಟ್‌ನ್ನು ಮಾಡತಕ್ಕಂಥಾದ್ದು, ನನಗೆ ಗೊತ್ತಿರತಕ್ಕಂಥ ಪ್ರಕಾರ I am not an Economics student, but I know little bit about Economics. ಅದರ ಪ್ರಕಾರ Is not healthy. ಆ ಪರಿಪಾಠವನ್ನು ನಿಲ್ಲಿಸತಕ್ಕಂಥ ಕೆಲಸ ಆಗಬೇಕು.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಬಹಳ ದಿನಗಳಿಂದ ಪ್ರಶ್ನೆಗಳು ನಿಂತು ಹೋಗಿದೆ. ಈಗಾಗಲೇ ಸಮಯ ಐದುಕಾಲು ಗಂಟೆ ಆಗುತ್ತಾ ಬಂತು, ಪ್ರಶ್ನೋತ್ತರಕ್ಕೆ ಅವಕಾಶ ಕೊಡಿ, ನಾಳೆ ಅವರು ಮುಂದುವರಿಸಲಿ, ಇವತ್ತು ಪ್ರಶ್ನೋತ್ತರಕ್ಕೆ ದಯವಿಟ್ಟು ಅವಕಾಶ ಕೊಡಿ. ಬಹಳ ದಿನಗಳಿಂದ ಪ್ರಶ್ನೋತ್ತರ ಇದೆ. ಹೆಲ್ಡ್ ಓವರ್ ಪ್ರಶ್ನೆಗಳು ಇದೆ.

ಉಪಾಧ್ಯಕ್ಷರು : ಅದನ್ನು ಆಮೇಲೆ ಯೋಚನೆ ಮಾಡೋಣ ಕುಳಿತುಕೊಳ್ಳಿ. ಈಗ ಸಬ್ಜೆಕ್ಟ್ ಮುಗಿಯಲಿ. ಮಾನ್ಯ ಶ್ರೀರಾಮರೆಡ್ಡಿಯವರೇ, ತಾವು ಮಾತನಾಡಿ.

ಶ್ರೀ ಆರ್. ಅಶೋಕ್ : ಪ್ರಶ್ನೋತ್ತರ ಮಾಡುವುದಕ್ಕೆ ಆಮೇಲೆ ಆಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಹೆಲ್ಡ್ ಒವರ್ ಪ್ರಶ್ನೆಗಳು ಬೇರೆ ಇವೆ. ದಯವಿಟ್ಟು ಈಗ ಪ್ರಶ್ನೋತ್ತರವನ್ನು ತೆಗೆದುಕೊಂಡು ನಾಳೆ ಪೂರಕ ಅಂದಾಜಿನ ಮೇಲೆ ಚರ್ಚೆಯಾದರೆ ಒಳ್ಳೆಯದು. ಬಹಳ ಜನ ಮಾತನಾಡುವವರಿದ್ದಾರೆ. ಸುಮಾರು 657 ಕೋಟಿ ರೂಪಾಯಿಗಳ ಪೂರಕ ಅಂದಾಜುಗಳ ಮೇಲೆ ಡಿಟೇಲ್ಡ್ ಚರ್ಚೆಯಾಗಬೇಕಾಗುತ್ತದೆ. ಎಲ್ಲರೂ ಚರ್ಚೆಯಲ್ಲಿ ಭಾಗವಹಿಸಬೇಕು.

ಉಪಾಧ್ಯಕ್ಷರು : ನೀವು ಏಕೆ ಈಗ ಅವರನ್ನು ಅರ್ಧಕ್ಕೆ ನಿಲ್ಲಿಸಿದಿರಿ? ಅವರು ಮಾತನಾಡಲಿ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ರಾಮರೆಡ್ಡಿಯವರು ಮಾತನಾಡಲಿ, ಅವರದ್ದು ಆದ ನಂತರ ತಮ್ಮಲ್ಲಿ ನಮ್ಮ ಮನವಿ ಏನೆಂದರೆ ಪ್ರಶ್ನೋತ್ತರ ತೆಗೆದುಕೊಂಡು ಅದರ ಮೇಲೆ ನಾಳೆ ತಾವು ಮುಂದುವರಿಸುವುದು ಒಳ್ಳೆಯದು. ಏಕೆಂದರೆ ಪ್ರಶ್ನೋತ್ತರ ಆಗಬೇಕು. ಇದರ ಮೇಲೆ ಇನ್ನೂ ಅನೇಕ ಜನ ಮಾತನಾಡುವುವವರಿದ್ದಾರೆ ಪೂರಕ ಅಂದಾಜುಗಳ ಮೇಲೆ ಬಹಳ ಜನ ಮಾತನಾಡುವವರಿದ್ದಾರೆ. ಪ್ರಶ್ನೋತ್ತರ ಸಹ ಬಹಳ ಪ್ರಾಮುಖ್ಯ.

ಉಪಾಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ, ಮಾತನಾಡಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಪ್ಲಾನ್ ಔಟಿಲೇ ಗೆ ಸಪ್ಲಿಮೆಂಟರಿ ತರತಕ್ಕಂಥಾದ್ದು ಬಹುಶಃ it is not a sign of healthy economy. ಹಾಗಾಗಿ ಇದು ಅನಿವಾರ್ಯವಾಗಿ ಬಿಟ್ಟಿದೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದಕೋಸ್ಕರ ನಾನು ಬೇರೆ ಏನನ್ನೂ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ ಏಕೆಂದರೆ ಸುಮಾರು ಜನ ಆರ್ಥಿಕ ತಜ್ಞರು ಅಭಿಪ್ರಾಯ ಪಟ್ಟಿರತಕ್ಕಂಥ ಪ್ರಕಾರ ಇವತ್ತು ಜಗತ್ತಿನ ಆರ್ಥಿಕ ಸ್ಥಿತಿ ಹಿನ್ನೆಲೆಯಲ್ಲಿ ಈ sound economy ಅಂದರೆ productionoriented, employment oriented ಮರೆತು ಹೋಗಿಬಿಟ್ಟು only profitoriented DVzÉ JPÁ£À«Ä. It is not either production oriented or it is not employment oriented. It is a growth. Yes, there is a growthjobless growth. Where there is a jobless growth, there, economy will become almost as like a banana rrepublic. That is sure. That experiece is teaching us even in Latin America and other countries, we have all seeing what is happening there and how their economics have collapsed and all that because of the jobless growth. The unsound economy naturally creates this. Unhealthy economy naturally creates this. ಆದ್ದರಿಂದ ಈ ಪರಿಪಾಠವನ್ನು ಕೈ ಬಿಡತಕ್ಕಂಥಾದ್ದು ಒಳ್ಳೆಯದು ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ. ಇನ್ನೂ ಪರ್ಟಿಕ್ಯೂಲರ್ ಪಾಯಿಂಟ್ಸ್‌ಗೆ ಬಂದಾಗ, ಈಗ ನೀವು ಕೃಷಿಗೆ ಸಂಬಂಧಪಟ್ಟ ಹಾಗೆ ಕೇಳಿದ್ದೀರಿ. ಕೃಷಿಯಲ್ಲಿ ಈಗ ಇರಿಗೇಷನ್‌ಗೆ 12.5 ಪರ್ಸೆಂಟ್ ಟ್ಯಾಕ್ಸ್ ನೀವೇ ಹಿಂದೆ ಹಾಕಿದ್ದೀರಿ. ಅದನ್ನು ದಯವಿಟ್ಟು ವಿತ್‌ಡ್ರಾ ಮಾಡಿ. ಏಕೆಂದರೆ ಡ್ರಿಪ್ ಇರಿಗೇಷನ್ ಮಾಡಿರತಕ್ಕಂಥ ಉದ್ದೇಶ ಬರಗಾಲದ ಪ್ರದೇಶದಲ್ಲಿ, ಎಲ್ಲಿ ನೀರು ಕಡಿಮೆ

ಇದೆಯೋ ಎಲ್ಲಿ ನೀರು ಸಫಿಸಿಯೆಂಟ್ ಇಲ್ಲವೋ ಅಲ್ಲಿ ಡ್ರಿಪ್ ಇರಿಗೇಷನ್ ಮಾಡತಕ್ಕಂಥಾದ್ದು, ಅದಕ್ಕೋಸ್ಕರ ಅದಕ್ಕೆ ಟ್ಯಾಕ್ಸ್ ಬೇರೆ ಹಾಕಿದರೆ. ತಡೆಯಲಾರದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮತ್ತೆ ಸೀಡ್ಸ್ ಬಗ್ಗೆ ನೀವು ಹೇಳಿದ್ದೀರಿ, ಅದು ಕೂಡ ವಿತ್‌ಡ್ರಾ ಮಾಡಬೇಕು. ನೀವು ಮೊದಲು ಕೂಡ ಒಪ್ಪಿದ್ದೀರಿ. ಮತ್ತೆ ಇದರಲ್ಲಿ ಬಹಳ ಮುಖ್ಯವಾಗಿ ಮಾನ್ಯ ಅಧ್ಯಕ್ಷರೆ, ಕೃಷಿ ಇಲಾಖೆಗೆ ನೀವು ಏನು ಸಪ್ಲಿಮೆಂಟರಿ ಕೇಳಿದ್ದೀರಿ, ಇದರಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಬೇಕಾಗಿರತಕ್ಕಂಥದ್ದಕ್ಕೆ ಎಲ್ಲೂ ಹಣ ಇಡಲಿಲ್ಲ. ಏಕೆಂದರೆ ಕೃಷಿ ಇಲಾಖೆಯಲ್ಲಿ ನನಗೆ ಗೊತ್ತಿರತಕ್ಕಂಥ ಮಾಹಿತಿ ಪ್ರಕಾರ ಸುಮಾರು 100200 ಹುದ್ದೆಗಳು ಕೃಷಿ ಇಲಾಖೆಯಲ್ಲಿ ಖಾಲಿ ಇವೆ. ಈಗ ನನ್ನ ಕ್ಷೇತ್ರದಲ್ಲಿಯೇ ಗುಡಿಬಂಡೆ ಅಂತ ಒಂದು ತಾಲ್ಲೂಕು ಇದೆ. ಕೃಷಿ ಆಫೀಸ್‌ನಲ್ಲಿ ಒಬ್ಬ ಪೀವನ್ ಕೂಡ ಇಲ್ಲ. ಆಫೀಸ್ ಬಾಗಿಲು ಹಾಕಿದ್ದಾರೆ. ಯಾರೂ ಅಧಿಕಾರಿಗಳು ಇಲ್ಲ. ನಮ್ಮ ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ 100 ಚಿಲ್ಲರೆ ಪೋಸ್ಟ್‌ಗಳು ಖಾಲಿ ಬಿದ್ದಿವೆ. ಇದಕ್ಕೆ ಯಾವುದೇ ರೀತಿಯಾದಂತಹ ಹಣವನ್ನು ತೆಗೆದು ಇಡಲಿಲ್ಲ. ಮತ್ತೆ ಮೋಸ್ಟ್ ಇಂಪಾರ್ಟೆಂಟ್ ಈ ಮಾರ್ಕೆಟ್ ಇಂಟರ್‌ವೆನ್ಷನ್ ಏನು ಮಾಡುತ್ತೇವೆ ಅಂತ ಏನು ಹೇಳಿದ್ದೀರಿ, ಕೃಷಿ ಉತ್ಪನ್ನಗಳಿಗೆ ಬೆಲೆ ಕುಸಿದಂತಹ ಸಂದರ್ಭದಲ್ಲಿ ಮಾರ್ಕೆಟ್ ಇಂಟರ್ ವೆನ್ಷನ್ ಏನು ಮಾಡುತ್ತೇವೆಂದು ಹೇಳಿದ್ದೀರಿ. ಆ ಮಾರ್ಕೆಟ್ ಇಂಟರ್ ವೆನಷನ್‌ಗೆ ಬೇಕಾಗಿರತಕ್ಕಂಥ ಸಪೋರ್ಟ್ ಬಜೆಟ್ ಇದರಲ್ಲಿ ಮೆನ್ಷನ್ ಆಗಿಲ್ಲ ನೀವು ಹಿಂದೆ ಬಜೆಟ್‌ನಲ್ಲಿ ಹೇಳಿದ್ದೀರಿ. ಆದರೆ ಅದು ಇವತ್ತಿನ ಪರಿಸ್ಥಿತಿಯಲ್ಲಿ ಸಾಕಾಗುವುದಿಲ್ಲ. ಮೊನ್ನೆ ನಮ್ಮ ಕೃಷಿ ಸಚಿವರು ಟೊಮ್ಯಾಟೋ ನಾವು ರೈತರಿಂದ ಪರ್ಚೆಸ್ ಮಾಡುತ್ತೇವೆ ಬೆಂಬಲ ಬೆಲೆಯನ್ನು ಕೊಡುತ್ತೇವೆಂದು ಹೇಳಿದರು. ಆದರೆ ಇಡೀ ಜಿಲ್ಲೆಯಲ್ಲಿ ಎಲ್ಲರಿಗೂ ಕೊಡಲಿಕ್ಕೆ ಆಗಲಿಲ್ಲ ಏಕೆಂದರೆ ಹಣ ಇಲ್ಲ. ಈಗ ಹಾರ್ಟಿಕಲ್ಚರ್ ಕ್ರಾಪ್ಸ್, ಪರ್ಟಿಕ್ಯುಲರ್‌ಲೀ ಅವು ಪೆರಿಹಬಲ್ ಗೂಡ್ಸ್, ಅವುಗಳನ್ನು ಸ್ಟಾಕ್ ಇಡುವುದಕ್ಕೆ ಆಗವುದಿಲ್ಲ. ಅವು ಪೆರಿಷಬಲ್ ಗೂಡ್ಸ್ ಆದಂತಹ ಸಂದರ್ಭದಲ್ಲಿ ಬೆಂಬಲ ಬೆಲೆ ಕೊಡದೇ ಹೋದರೆ, ಅವರಿಗೆ ತಕ್ಷಣ ಹಣ ಕೊಡದೇ ಹೋದರೆ ಏನು ಪ್ರಯೋಜನ? ಅವರು ಬೀದಿಗೆ ಬಿಸಾಕಬೇಕಾಗುತ್ತದೆ. ಈರುಳ್ಳಿ, ಟೊಮ್ಯಾಟೋ, ಇಂಥಾದ್ದಕ್ಕೆ ನೀವು ಹೆಚ್ಚಿನ ಹಣವನ್ನು ಬಜೆಟ್‌ನಲ್ಲಿ ಕೊಟ್ಟಿರತಕ್ಕಂಥಾದ್ದು ಸಾಕಾಗುವುದಿಲ್ಲ ಅದನ್ನು ಇಲ್ಲಿ ನೀವು ಕೊಟ್ಟಿದ್ದರೆ ಬಹುಶಃ ರೈತರಿಗೆ ಉಪಯೋಗವಾಗುತ್ತಿತ್ತು, ಮತ್ತೆ ಡ್ರಿಪ್ ಇರಿಗೇಷನ್ ಮೇಲೆ ನೀವು ಆ ಟ್ಯಾಕ್ಸನ್ನು ದಯವಿಟ್ಟು ವಿತ್‌ಡ್ರಾ ಮಾಡಬೇಕು. ಬಜೆಟ್ ಮಂಡನೆ ಮಾಡುವಾಗ ರೆವಿನ್ಯೂ ಡಿಪಾರ್ಟ್‌ಮೆಂಟ್ ಬಗ್ಗೆ ನೀವು ಒಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ ಯಾವ ಯಾವ ತಾಲ್ಲೂಕುಗಳಲ್ಲಿ ಮಿನಿ ವಿಧಾನಸೌಧ ಕಟ್ಟಡಗಳು ಇಲ್ಲವೋ ಅದನ್ನು ಈ ವರ್ಷದಲ್ಲಿ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥದ್ದನ್ನು ಹೇಳಿದ್ದೀರಿ ಮತ್ತೆ ಬಾಕಿ ಇರತಕ್ಕಂಥ ಹಣವನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ನೀವು ಹೇಳಿದ್ದೀರಿ ಆದರೆ ಬಜೆಟ್‌ನಲ್ಲಿ ಅದಕ್ಕೆ ನೀವು ಹಣ ಇಟ್ಟಿಲ್ಲ ನಾವು ಅದನ್ನು ಕ್ಲಾರಿಫಿಕೇಶನ್ ಕೇಳತಕ್ಕಂಥ ಸಂದರ್ಭದಲ್ಲಿ ಮುಂದೆ ನಾವು ಕೊಡುತ್ತೇವೆ ಅವಶ್ಯಕತೆ ಇದ್ದ ಕಡೆ ಅಂತ ಹೇಳಿದಿರಿ, ಅದನ್ನು ಇದರಲ್ಲೂ ಮೆನ್ಷನ್ ಮಾಡಿಲ್ಲ ಹಾಗಾಗಿ ಇವತ್ತು ಹಲವಾರು ತಾಲ್ಲೂಕುಗಳಲ್ಲಿ ಮಿನಿ ವಿಧಾನಸೌಧ ಕಟ್ಟಡಗಳು ಅರ್ಧಕ್ಕೆ ನಿಂತು ಹೋಗಿವೆ. ಕೆಲವು ತಾಲ್ಲೂಕುಗಳಲ್ಲಿ ಪೂರ್ತಿ ಅವು ಇಲ್ಲವೇ

ಇಲ್ಲ, ಬಿದ್ದು ಹೋಗಿ ಆ ಕಟ್ಟಡಗಳೇ ಬೀಳತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಸಿದ್ಧರಾಮಯ್ಯನವರೆ, ನೆಲಮಂಗಲದಲ್ಲಿ ಥ್ರಜ್ ಟ್ರಾಜಿಡಿ ಆದಂತಹ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಿದಿರಿ, ನಾವು ಪ್ರಶಂಸೆ ಸಹ ಮಾಡಿದೆವು. ಕಳ್ಳಭಟ್ಟಿ ಕುಡಿದು ಸತ್ತವರಿಗೆ ಪರಿಹಾರ ಕೊಡುವುದಿಲ್ಲವೆಂದು ಹೇಳಿದಿರಿ. ಇದು ಬಹಳ ಒಳ್ಳೆಯದು. ಆದರೆ ನೀವು ಡಿಸ್‌ಕ್ರಿಮಿನೇಟ್ ಮಾಡಿದಿರಲ್ಲಾ. ದ್ಯಾವಲಾಪುರ ಮತ್ತು ನೆಲಮಂಗಲಕ್ಕೆ ಕೊಟ್ಟು; ಕಳ್ಳಬಟ್ಟಿ ಸಾರಾಯಿ ಮಾಡಿ ದಂಧೆ ಮಾಡತಕ್ಕಂಥ ಜನರು ಏನು ಇದ್ದಾರೆ ಅವರು ದುಡ್ಡು ಮಾಡಲಿಕ್ಕೆ ಜನರನ್ನು ಸಾಯಿಸಲಿಕ್ಕೆ ಕಳ್ಳಭಟ್ಟಿ ಸಾರಾಯಿಯನ್ನು ತಯಾರು ಮಾಡತಕ್ಕಂಥಾದ್ದು, ನಾವು ಏನಾದರೂ ಇದನ್ನು ಪರಿಪಾಠ ಮಾಡಿಬಿಟ್ಟರೆ ಇದು ಯಾರಿಗೆ ಉಪಯೋಗವಾಗುತ್ತದೆ ಅಂದರೆ ಮತ್ತೆ ಆ ಕಳ್ಳಭಟ್ಟಿ ದಂಧೆ ಮಾಡುತ್ತಾರಲ್ಲಾ ಅವರಿಗೇ ಉಪಯೋಗವಾಗುವುದು. ಏಕೆಂದರೆ ಆ ಎರಡು ಕಡೆ ಕೊಡುತ್ತೇವೆಂದು ಹೇಳಿದಿರಿ, ಹಾಸನ ಮತ್ತು ನೆಲಮಂಗಲ. ಆಮೇಲೆ ಇದು ಪ್ರೆಸಿಡೆಂಟ್ ಆಗಿ ಬಿಡುತ್ತದೆ. ಯಾರಾದರೂ ನಾಳೆ ಅಸೆಂಬ್ಲಿಯಲ್ಲಿಯೇ ಏಕೆಂದರೆ Everything will be politicalised now a days. ಅಸೆಂಬ್ಲಿಯಲ್ಲಿ ಎದ್ದು ನೀವು ಅವತ್ತು ಕೊಟ್ಟಿದ್ದೀರಿ, ಅಲ್ಲಿ ಕೊಟ್ಟಿದ್ದೀರಿ ಇಲ್ಲಿ ಕೊಟ್ಟಿದ್ದೀರಿ ಇವತ್ತು ಏಕೆ ಕೊಡಲಿಲ್ಲ ಎಂದು ಕೇಳತಕ್ಕಂಥ ಪ್ರಶ್ನೆ ಬರುತ್ತದೆ, ಚರ್ಚೆಗಳು ಬರುತ್ತದೆ ಏಕೆಂದರೆ ಡೆಮಾಕ್ರಸಿ ಇದು; ಹಾಗಾಗಿ this will become a bad precedent. ಕಳ್ಳಭಟ್ಟಿ ಸಾರಾಯಿ ಕುಡಿದು ಸತ್ತವರಿಗೆ ಹಣ ಕೊಟ್ಟರೆ ಮತ್ತೆ ಕಳ್ಳಭಟ್ಟಿ ದಂಧೆ ಮಾಡತಕ್ಕಂಥವರಿಗೆ ಪ್ರಯೋಜನವಾಗುತ್ತದೆಯೇ ಹೊರತು ಇದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ ಮತ್ತು ಇದು ನಮ್ಮ ಆರ್ಥಿಕ ವ್ಯವಸ್ಥೆ ಮೇಲೆ ಹೊರೆಯಾಗುತ್ತದೆ. ಮತ್ತೆ ಇದೊಂದ ಕೆಟ್ಟ ಸಂಪ್ರದಾಯವಾಗುತ್ತದೆ. ದಯವಿಟ್ಟು ಅದನ್ನು ನಿಲ್ಲಿಸಬೇಕು. ಇನ್ನು ಕಾರ್ಮಿಕ ಇಲಾಖೆ. ಕಾರ್ಮಿಕ ಇಲಾಖೆಯಲ್ಲಿ ಬಹಳ ಪ್ರಮುಖವಾಗಿ ಎರಡು ಅಂಶಗಳು. ಒಂದು ಇ. ಎಸ್. ಐ. ಆಸ್ಪತ್ರೆಗಳು, ಇನ್ನೊಂದು ಐ. ಟಿ. ಐ. ಸಂಸ್ಥೆಗಳು. ಇವು ಕಾರ್ಮಿಕ ಇಲಾಖಾ ವ್ಯಾಪ್ತಿಗೆ ಬರುತ್ತದೆ. ದಯವಿಟ್ಟು ಆ. ಇ. ಎಸ್. ಐ. ಆಸ್ಪತ್ರೆಗಳ ಸ್ಥಿತಿಯನ್ನು ನೋಡಿ. ಈ ದೇಶದಲ್ಲಿ ಏನಾಗಿದೆ ಅಂದರೆ ಕಾರ್ಮಿಕರು ಅಂದರೆ ಎಷ್ಟು ತುಚ್ಛವಾಗಿ ಕಾಣತಕ್ಕಂಥ ಸ್ಥಿತಿ ನಿರ್ಮಾಣವಾಗಿದೆ ಅಂದರೆ ಅವರು ಈ ಗುಲಾಮಗಿರಿ ವ್ಯವಸ್ಥೆಯಲ್ಲಿ, ಗುಲಾಮಗಿರಿ ಮಾಡುತ್ತಿದ್ದರಲ್ಲಾ ಆ ರೀತಿಯಾಗಿ ಅವರನ್ನು ಇವತ್ತು ನೋಡುವ ಸ್ಥಿತಿಯಾಗಿದೆ. ನಾವೆಲ್ಲರೂ ಒಂದನ್ನು ಮರೆತ್ತಿದ್ದೇವೆ, ಆ ಕಾರ್ಮಿಕರೇ ಈ ದೇಶದ ಸಂಪತ್ತನ್ನು ಸೃಷ್ಟಿ ಮಾಡುವವರು, ಉತ್ಪಾದನೆ ಮಾಡುವವರು ಇಲ್ಲಿ ನೀವು ನಾವು ಕುಳಿತಿರುವುದು ಈ ಆಯವ್ಯಯ, ಹಣ, ಎಲ್ಲವೂ ಉತ್ಪಾದನೆಯಾಗುವುದು ಆ ಶ್ರಮ ಶಕ್ತಿಯಿಂದ; That labour power produces the money, wealth. But, what we are giving to them? ಅವರಿಗೆ ಏನು ಕೊಡುತ್ತಿದ್ದೇವೆ. ಹೋಗಲಿ ಆ ಇಎಸ್‌ಐ ಆಸ್ಪತ್ರೆ ನೋಡಿ, ವೈದ್ಯರಿದ್ದಾರೆ, ಬೆಡ್‌ಗಳು ಸರಿಯಾಗಿದೆಯಾ? ವಾಸನೆ ಬರುತ್ತದೆ. ಆ ಕಾರ್ಮಿಕರುಗಳಿಗೆ ಅಪಘಾತವಾದಾಗ ಅಲ್ಲಿಗೆ ಹೋದರೆ ಅಲ್ಲಿ ಔಷಧಿಗಳಿಲ್ಲ, ಬ್ಯಾಂಡೇಜ್ ಹಾಕುವುದಕ್ಕೆ ಬಟ್ಟೆ ಇಲ್ಲ; ಆ ವೈದ್ಯರ ವ್ಯವಸ್ಥೆ, ಆಸ್ಪತ್ರೆಗಳ ವ್ಯವಸ್ಥೆ ನೋಡುವುದಕ್ಕೂ ಸಾಧ್ಯವಾಗದ ರೀತಿಯಲ್ಲಿದೆ. ರಾಜಾಜಿನಗರದಲ್ಲಿರುವ ಇಎಸ್‌ಐ ಆಸ್ಪತ್ರೆಗೆ ಹೋಗಿ ನೋಡಿ ಔಷಧಿಗಳಿಲ್ಲ, ಇದೇನು ದುಸ್ಥಿತಿ ನೀವು ಹೇಳಿ? ಸೋಷಿಯಲ್ ವೆಲ್‌ಫೇರ್

ಎಂದು ಹೇಳಿ ಕಾನೂನಿನಲ್ಲಿ ಎಲ್ಲಾ ಕೊಡಲಾಗಿದೆ, ಅದಕ್ಕೊಂದು ಲೇಬರ್ ಇಲಾಖೆ ಅದ್ಯಾಕೆ ಲೇಬರ್ ಇಲಾಖೆ ಎಂದು ಬೋರ್ಡ್ ಹಾಕಲಾಗಿದೆಯಾ ದಯವಿಟ್ಟು ತೆಗೆದು ಹಾಕಿ ಲೇಬರ್ ಇಲಾಖೆ ಎಂದು ಹಾಕಬೇಡಿ, ಮಾಲೀಕರ ಇಲಾಖೆ ಎಂದು ಹಾಕಿ ಲೇಬರ್ ಇಲಾಖೆ ಎನ್ನುವ ಹೆಸರಿಗೆ ಅವಮಾನ, ಲೇಬರ್ ಎಂದರೇನು, ಕಾರ್ಮಿಕರೆಂದರೇನು, ಅವರ ವ್ಯಾಲ್ಯು ಏನು ಎಂಬುದು ಅರ್ಥವಾಗದೆ ಬರೀ ಕಾನೂನು ಪುಸ್ತಕವನ್ನು ಇಟ್ಟುಕೊಂಡು ಮಾತನಾಡುವವರನ್ನು ಕಾರ್ಮಿಕ ಇಲಾಖೆಗೆ ತರುತ್ತೀರಿ, 1926 ಆಕ್ಟ್ ಎಂದು ನಮ್ಮ ಕಾರ್ಮಿಕ ಮಂತ್ರಿಗಳು ಹೇಳುತ್ತಿದ್ದರು. 1926 ಆಕ್ಟ್ ಅದನ್ನು ಯಾರು ಮಾಡಿದ್ದು ಅವರ ಕಾಲದಲ್ಲಿ ತಂದ ಆಕ್ಟ್ ಬ್ರಿಟಿಷ್‌ನವರು, ಅದನ್ನು ಇವತ್ತಿಗೂ ಹಿಡಿದುಕೊಂಡು ನಾವು ನೇತಾಡುತ್ತಿದ್ದೇವೆ.

ಶ್ರೀ ತನ್ವೀರ್ ಸೇಠ್ : ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗಿ ಮಾತನಾಡುತ್ತೇನೆ. ಒಂದು ವಿಚಾರ ಸದನದ ಗಮನಕ್ಕೆ ತರುತ್ತೇನೆ, ಕಾರ್ಮಿಕ ವಿಮೆ ಯೋಜನೆ ಕೇಂದ್ರ ಸರ್ಕಾರದ ಯೋಜನೆ, ಅದರ ಅಧೀನದಲ್ಲಿ ನಡೆಯುವುದು, 1/8 of the amount is borne by the State Government 7/8 of the portion is borne by the ESI Corporation.

ಶ್ರೀ ಕೆ. ಆರ್. ರಮೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೆ, He is always on the track. ಅವರೇನು ಹೇಳುತ್ತಿದ್ದಾರೆಂದರೆ, ಅವರ ಆಬ್ಸರ್ವೇಷನ್ ಏನೆಂದರೆ, ಕಾರ್ಮಿಕರಿಗಾಗಿ ಇರುವಂತಹ ಆಸತ್ರೆಗಳು ಈ ಸ್ಥಿತಿಯಲ್ಲಿದ್ದಾವೆ, ಯಾರ್ಯಾರುದು ಎಷ್ಟೆಷ್ಟು ಪಾಲು ನೀವು ತಪ್ಪು ಮಾಡಿದಿರಿ, ನಿಮ್ಮನ್ನು ತೆಗೆದುಕೊಂಡು ಜೈಲಿಗೆ ಹಾಕಿ ಎಂದು ಅವರು ಹೇಳಲಿಲ್ಲ, ಕಾರ್ಮಿಕರನ್ನು ನೋಡಿಕೊಳ್ಳುವಂತ ಆಸ್ಪತ್ರೆಗಳ ಸ್ಥಿತಿ ಹೀಗಿದೆ ಎಂದು ಜಸ್ಟ್ ಅಬ್ಸರ್ವೇಷನ್ ಮಾಡಿ ಹೇಳಿದರು.

ಶ್ರೀ ತನ್ವೀರ್ ಸೇಠ್ : ಸಪ್ಲಿಮೆಂಟರಿ ಬಜೆಟ್ ಮೇಲೆ ಮಾತನಾಡುತ್ತಿರಬೇಕಾದರ ಇದನ್ನ ಹೇಳಬೇಕಾದ್ದು ನನ್ನ ಕರ್ತವ್ಯ.

ಶ್ರೀ ಕೆ. ಆರ್. ರಮೇಶ್ ಕುಮಾರ್ : ಮಾನ್ಯ ಸಚಿವರೆ, Whether it is the State Government or the Central Government, all of them put together. ಈ ರೀತಿ ಇಟ್ಟಿದ್ದಾರೆನ್ನುವ ಒಂದು ಜನರಲ್ ಆಬ್ಸರ್ವೇಷನ್ ಮಾಡುತ್ತಿದ್ದಾರೆ, ಅದಕ್ಕೆ ನೀವು ನಮ್ಮ ಶೇರ್ ಎಷ್ಟೆಂದು ಹೇಳುತ್ತಿದ್ದೀರಿ, ಹಾಗಾದರೆ ಆ ಅವ್ಯವಸ್ಥೆಯಲ್ಲಿ ಅಷ್ಟು ಶೇರ್ ಮಾತ್ರ ನಿಮಗೆ ಕ್ರೆಡಿಟ್ ಮಾಡುವುದಾ? That portion of mismangment, maladministration to be credited to your account. That is not the approach. The approach is, the general condition of these hospitals has been very bad. Whether they are by the State Government or the Central Government and all of us you see as men with concern should turn our attention towards that and try to improve the condition. You should take the criticism in the right prospective.